ಶರಣ ದಂಪತಿಗಳಾದ

ಹಡಪದ ಅಪ್ಪಣ್ಣ-ಲಿಂಗಮ್ಮರು

ಪ್ರೊ. ಸಿದ್ದಣ್ಣ ಲಂಗೋಟಿ

ಅಪ್ಪಣ್ಣದೇವರ ಮಹಾಸಂಸ್ಥಾನ ಮಠ
ಸುಕ್ಷೇತ್ರ ತಂಗಡಗಿ ತಾ. ಮುದ್ದೇಬಿಹಾಳ ಜಿ. ವಿಜಾಪುರ

। ಓಂ ಶ್ರೀ ಗುರು ಬಸವಲಿಂಗಾಯ ನಮಃ ।

ಶರಣ ದಂಪತಿಗಳಾದ

ಹಡಪದ ಅಪ್ಪಣ್ಣ - ಲಿಂಗಮ್ಮರು

ಲೇಖಕರು,

ಪ್ರೊ. ಸಿದ್ದಣ್ಣ ಲಂಗೋಟಿ (ಚಾಂದಕವಠೆ)

ಎಂ. ಎ. (ಕನ್ನಡ) ಎಲ್.ಎಲ್.ಬಿ (ಸ್ಪೇಶಲ್)

ಎಂ.ಎ.(ಫಿಲ್), ಎಂ. ಎ. (ಹಿಂದಿ) ಸಿ. ವಾಯ್. ಇಡಿ. (ಯೋಗ)

ಗೌ|| ಸಂಪಾದಕರು, ಬಸವಬೆಳಗು

ರಾಮದುರ್ಗ -೫೯೧೧೨೩ ಜಿ|| ಬೆಳಗಾವಿ

೨೦೦೮

ಶ್ರೀ ಬಸವಪ್ರಿಯ ಅಪ್ಪಣ್ಣ ಮಹಾಸ್ವಾಮಿಗಳು

ಶ್ರೀ ಅಪ್ಪಣ್ಣ ದೇವರ ಮಹಾಸಂಸ್ಥಾನಮಠ

ಸುಕ್ಷೇತ್ರ ತಂಗಡಗಿ ತಾ || ಮುದ್ದೇಬಿಹಾಳ ಜಿ|| ವಿಜಾಪುರ

ಶರಣ ದಂಪತಿಗಳಾದ ಹಡಪದ ಅಪ್ಪಣ್ಣ - ಲಿಂಗಮ್ಮರು

ಲೇಖಕರು : ಪ್ರೊ. ಸಿದ್ಧಣ್ಣ ಲಂಗೋಟಿ (ಚಾಂದಕವಠೆ)
ಎಂ. ಎ. (ಕನ್ನಡ) ಎಲ್.ಎಲ್.ಬಿ (ಸ್ಪೇಶಲ್)
ಎಂ.ಎ.(ಫಿಲ್), ಎಂ. ಎ. (ಹಿಂದಿ) ಸಿ. ವಾಯ್. ಇಡಿ. (ಯೋಗ)
ರಾಮದುರ್ಗ-೫೯೧ ೧೨೩ ಜಿ॥ ಬೆಳಗಾವಿ

© ಲೇಖಕರವು

ಮೊದಲ ಮುದ್ರಣ : ಜೂನ ೧೯೮೫ ೨೦೦೦ ಪ್ರತಿಗಳು
ಎರಡನೇ ಮುದ್ರಣ : ಮಾರ್ಚ ೨೦೦೮ ೧೦೦೦ ಪ್ರತಿಗಳು
ಪುಟಗಳು : ೮೮

ಪ್ರಕಾಶಕರು : ಶ್ರೀ ಬಸವಪ್ರಿಯ ಅಪ್ಪಣ್ಣ ಮಹಾಸ್ವಾಮಿಗಳು
ಶ್ರೀ ಅಪ್ಪಣ್ಣ ದೇವರ ಮಹಾ ಸಂಸ್ಥಾನಮಠ
ಸುಕ್ಷೇತ್ರ ತಂಗಡಗಿ ತಾ॥ ಮುದ್ದೇಬಿಹಾಳ ಜಿ॥ ವಿಜಾಪುರ

ಬೆಲೆ : ೩೦=೦೦ (ಮೂವತ್ತು ರೂಪಾಯಿಗಳು)

ಮುದ್ರಕರು: ಶ್ರೀಮತಿ ಎಸ್.ವ್ಹಿ.ತಡಕೋಡ
ರಾಜಶ್ರೀ ಪ್ರಿಂಟಿಂಗ್ ಪ್ರೆಸ್, ತಡಕೋಡ ಗಲ್ಲಿ, ಧಾರವಾಡ
(೦೮೩೬) ೨೪೪೭೯೧೮, ೯೮೮೦೩೫೩೮೭೫, ೯೭೪೧೨೭೦೩೮೫

॥ ಓಂ ಶ್ರೀ ಗುರುಬಸವಲಿಂಗಾಯ ನಮಃ ॥

ಶ್ರೀ ಮ. ನಿ. ಪ್ರ. ಮಹಾಂತಸ್ವಾಮಿಗಳು

ಚಿತ್ತರಗಿ ಶ್ರೀ ವಿಜಯ ಮಹಾಂತೇಶ್ವರ ಸಂಸ್ಥಾನಮಠ ಇಲಕಲ್ಲ

ಮುನ್ನುಡಿ

ಹನ್ನೆರಡನೆಯ ಶತಮಾನದಲ್ಲಿ ವಿಶ್ವಗುರು ಬಸವಣ್ಣನವರು ಕಲ್ಯಾಣದಲ್ಲಿ ಅನುಭವಮಂಟಪ ರಚಿಸಿ ಇಷ್ಟಲಿಂಗ ತತ್ತ್ವದ ತಳಹದಿಯ ಮೇಲೆ ವಿನೂತನವಾದ ಲಿಂಗವತ ಧರ್ಮವನ್ನು ಸ್ಥಾಪಿಸಿದರು. ಬಹುದೇವೋಪಾಸನೆಯ, ಪುರೋಹಿತ ಶೋಷಣೆಯನ್ನು ತಪ್ಪಿಸಿ ಸರ್ವರಿಗೂ ಇಷ್ಟಲಿಂಗವನ್ನು ಕರುಣಿಸಿದರು. ಇದರಿಂದಾಗಿ ದೇಶದ ಸರ್ವಭಾಗಗಳಿಂದ ಎಲ್ಲ ಕಾಯಕಗಳ ಜನ ಬಂದು ಕಲ್ಯಾಣದಲ್ಲಿ ಶರಣರಾದರು.

೭೭೦ ಜನ ಶರಣ-ಶರಣೆಯರು ಯಾವುದೇ ಕಾಯಕ ಕೈಕೊಂಡಿದ್ದರೂ ಅವರೆಲ್ಲ ಬಸವಣ್ಣನವರ ಬಳಗ, ಬಸವ ಸಮಾಜದವರು. ಶರಣ ಚೆನ್ನಬಸವಣ್ಣನವರು ಧರ್ಮಗುರು ಬಸವಣ್ಣನವರ ಕರಸಂಜಾತರು. ಗುರು ಮುಟ್ಟಿ ಗುರುವಾದವರು, ಜ್ಯೋತಿ ಮುಟ್ಟಿ ಜ್ಯೋತಿಯಾದವರು. ಇಂತಪ್ಪ ಸುಜ್ಞಾನಿ ಚೆನ್ನಬಸವಣ್ಣನವರಿಂದ ಸಂಸ್ಕಾರ ಹೊಂದಿದ ಶರಣದಂಪತಿಗಳಾದ ಹಡಪದ ಅಪ್ಪಣ್ಣ-ಲಿಂಗಮ್ಮ ತಾಯಿಯವರೂ ಬಸವಣ್ಣನವರ ಸಂತಾನರು. ಆದ್ದರಿಂದ ಅಂಗದ ಮೇಲೆ ಲಿಂಗ ಧರಿಸಿ ಕಾಯಕ-ದಾಸೋಹ-ಪ್ರಸಾದಗಳಲ್ಲಿ ನಿರತರಾಗಿರುವ ಯಾವುದೇ ಕಾಯಕ ಮಾಡುವ ಶರಣರು ಬಸವ-ಬಳಗದವರೇ. ಅವರ್‍ಯಾರೂ ಭಿನ್ನರಲ್ಲ.

ಇಂದಿನ ನಮ್ಮ ಲಿಂಗಾಯತ ಸಮಾಜದಲ್ಲಿ ಒಳಪಂಗಡಗಳ ಹೆಸರಿನಲ್ಲಿ ಕಾಯಕದ ಶರಣರ ಹೆಸರಿನಲ್ಲಿ ಭಿನ್ನ ಭಿನ್ನ ಸಂಘಟನೆಗಳು ಬಸವ ಸಂಸ್ಕೃತಿಯ ಭಿನ್ನತೆಗೆ ಕಾರಣವಾಗಬಾರದು. ಸರ್ವರ ಏಳ್ಗೆಗೆ ಪ್ರಯತ್ನಿಸಲು ಸಂಘಟನೆ ಬೇಕು. ಶರಣರಾದ ಅಪ್ಪಣ್ಣ, ಕಕ್ಕಯ್ಯ, ಹರಳಯ್ಯ, ಚೆನ್ನಯ್ಯ, ಮಾಚಿದೇವ, ಚೌಡಯ್ಯ, ದಾಸಿಮಯ್ಯ ಇತ್ಯಾದಿ ಶರಣರೆಲ್ಲ ಬಸವ ಸಂತಾನ ಶ್ರೇಷ್ಠರು. ಇಂದು ಅಂಗದ ಮೇಲೆ ಲಿಂಗಧರಿಸಿ ಪೂಜಿಸುವ ನಾವೆಲ್ಲ ಯಾವುದೇ ಕಾಯಕದವರಿದ್ದರೂ ಬಸವಾದಿ ಶರಣರ ಸಮಾಜದವರು ನಾವು. ಶರಣ ಅಪ್ಪಣ್ಣನವರು - ಲಿಂಗಮ್ಮ ತಾಯಿಯವರು

ಅನುಭಾವಿಗಳು. ಅವರ ಜೀವನಾದರ್ಶವನ್ನು ನಾವೆಲ್ಲರೂ ಪಾಲಿಸಬೇಕು. ಆಚರಣೆಯಲ್ಲಿ ತರಬೇಕು.

ಇಂದು ಕಾಯಕಗಳೇ ಜಾತಿಯ ಸ್ವರೂಪ ತಾಳಿರುವುದರಿಂದ ಮತ್ತೆ ಭೇದಭಾವವು ಬಸವ ಸಮಾಜದಲ್ಲಿ ಉಂಟಾಗುತ್ತಿದೆ. ಇದು ದೂರಾಗಬೇಕು. ಅಂಗದ ಮೇಲೆ ಲಿಂಗಧರಿಸುವವರೆಲ್ಲಾ ಲಿಂಗವಂತರು, ಅವರೆಲ್ಲರೂ ಒಂದು. ಬಸವಾದಿ ಶರಣರ ತತ್ತ್ವದಂತೆ ನಡೆಯಬೇಕು. ನಮ್ಮಲ್ಲಿ ಅರಿವು-ಆಚಾರ-ಅನುಭಾವ ಅಳವಡಬೇಕಾಗಿದೆ. ಈ ದಿಸೆಯಲ್ಲಿ ನಾವೆಲ್ಲರೂ ಚಿಂತನ ಮಾಡುತ್ತಾ-ಬಸವ ಪಥದಲ್ಲಿ ಮುಂದುವರೆಯೋಣ.

ಶರಣೆ ಲಿಂಗಮ್ಮ ತಾಯಿಯವರು ತಮ್ಮದೊಂದು ವಚನದಲ್ಲಿ ತಿಳಿಸುವಂತೆ-

ಆಸೆಯನಳಿದು, ರೋಷವ ನಿಲಿಸಿ,
ಜಗದ ಪಾಶವ ಹರಿದು
ಈಶ್ವರನೆನಿಕೊಂಬ ಶರಣರ
ಜಗದ ಹೇಸಿಗಳೆತ್ತಬಲ್ಲರು
ಅಪ್ಪಣ್ಣ ಪ್ರಿಯ ಚೆನ್ನಬಸವಣ್ಣಾ?

ಈ ರೀತಿಯಾಗಿ ನಾವು ಅಜ್ಞಾನ ಮಾಯೆಗೆ ಒಳಗಾಗದೇ ಅರಿವಿಗೆ ಒಳಗಾಗಿ ಶರಣಜೀವಿಗಳಾಗಬೇಕು.

ಶರಣ ಸಾಹಿತಿಗಳಾದ ಪ್ರೊ. ಸಿದ್ಧಣ್ಣ ಲಂಗೋಟಿಯವರು ಅಪ್ಪಣ್ಣ-ಲಿಂಗಮ್ಮ ಶರಣದಂಪತಿಗಳ ಕಾಯಕ ಜೀವನ, ಅನುಭಾವ, ಸಾಧನೆ-ಸಿದ್ಧಿ, ಮನುಕುಲಕ್ಕೆ ಶರಣರ ಸಂದೇಶವನ್ನು ಅರ್ಥಪೂರ್ಣವಾಗಿ ಪ್ರಾಮಾಣಿಕವಾಗಿ ನಿರೂಪಿಸಿದ್ದಾರೆ. ಅವರಿಂದ ಇನ್ನೂ ಎಲ್ಲಾ ಶರಣರ ಜೀವನ-ಸಾಧನೆಗಳು ತತ್ತ್ವದ ತಳಹದಿಯಲ್ಲಿ ಹೊರಬರಲೆಂದು ಹಾರೈಸುವೆವು.

ಇಂತಹ ಶರಣರ ಗ್ರಂಥವನ್ನು ಪ್ರಕಟಿಸಿದ ತಮ್ಮೆಲ್ಲ ಶರಣಜೀವಿಗಳ ಬಾಳು ಪುನೀತವಾಗಲಿ, ತಾವೆಲ್ಲರೂ ಅಪ್ಪ ಬಸವಣ್ಣನವರ, ಶರಣ ಅಪ್ಪಣ್ಣನವರ ಶರಣೇ ಲಿಂಗಮ್ಮನವರ ಆದರ್ಶ ಪಾಲಿಸಿರೆಂದು ಹೃದಯಾರೆ ಹಾರೈಸುವೆ. (೧೯೮೫)

ಗ್ರಂಥ ಪ್ರಕಟಣೆಯ ದಾಸೋಹ ಸೇವೆ



ಲಿಂ. ಅಖಂಡಪ್ಪ ಹಡಪದ
(1924–1999)

ಲಿಂ. ನೀಲಮ್ಮ ಹಡಪದ
(1935–1988)



ಶ್ರೀ ಸೋಮಲಿಂಗಪ್ಪ ಹಡಪದ ಶ್ರೀಮತಿ ಈರಮ್ಮ (ಎಂ.ಕೆ.) ದಂಪತಿಗಳು
ಮೊ: 9448692977, 9448329047

ಬೆಳಗಾವಿ ಜಿಲ್ಲೆಯ ರಾಮದುರ್ಗದ ಕೆ.ಪಿ.ಟಿ.ಸಿ.ಎಲ್.ದಲ್ಲಿ ಕಿರಿಯ ಇಂಜಿನೀಯರ್ ಆಗಿರುವ ಶ್ರೀ ಸೋಮಲಿಂಗಪ್ಪ ಅ. ಹಡಪದ ಇವರು ತಮ್ಮ ಲಿಂ. ತಂದೆ ಶ್ರೀ ಅಖಂಡಪ್ಪ ಮಲ್ಲಪ್ಪ ಹಡಪದ ಹಾಗೂ ತಾಯಿ ಶ್ರೀಮತಿ ನೀಲಮ್ಮ ಅ. ಹಡಪದ ಇವರ ಸ್ಮರಣೆಯಲ್ಲಿ ಈ ಗ್ರಂಥ ಪ್ರಕಟಣೆಯ ದಾಸೋಹ ಸೇವೆ ಮಾಡಿದ್ದಾರೆ.

ಲಿಂ. ಅಖಂಡಪ್ಪ ಹಡಪದ ಅವರು ಮೂಲತಃ ಬದಾಮಿ ತಾಲೂಕಿನ ನೀಲಗುಂದ ಗ್ರಾಮದವರು. ಗೋಕಾಕ, ರಾಮದುರ್ಗ ತಾಲೂಕುಗಳಲ್ಲಿ ಶಿಕ್ಷಕರಾಗಿ ಸೇವೆ ಸಲ್ಲಿಸಿ, ಕೊನೆಗೆ ಪ್ರಧಾನ ಗುರುಗಳಾಗಿ ಸೇವೆಯಿಂದ ನಿವೃತ್ತರಾದರು. ಅನಂತರ ರಾಮದುರ್ಗ ತಾಲೂಕಾ ಹಡಪದ ಅಪ್ಪಣ್ಣ ಸಮಾಜದ ಅಧ್ಯಕ್ಷರಾಗಿ 5-6 ವರ್ಷ ಸೇವೆ ಸಲ್ಲಿಸಿದರು. 1999 ರಲ್ಲಿ ಲಿಂಗೈಕ್ಯರಾದರು. ತಾಯಿ ನೀಲಮ್ಮನವರು ಪತಿಯ ಕಾರ್ಯದಲ್ಲಿ ಮಾರ್ಗದರ್ಶಕರಾಗಿದ್ದು 1988 ರಲ್ಲಿ ಲಿಂಗೈಕ್ಯರಾದರು.

ಈ ದಂಪತಿಗಳಿಗೆ ಎಂಟು ಜನ ಗಂಡುಮಕ್ಕಳು ಹಾಗೂ ಇಬ್ಬರು ಹೆಣ್ಣುಮಕ್ಕಳು. ಇವರಲ್ಲಿ ಸೋಮಲಿಂಗಪ್ಪ ಒಳ್ಳೆಯ ಶಿಕ್ಷಣ ಪಡೆದವರು. ಇವರ ಶ್ರೀಮತಿ ಈರಮ್ಮ (ಎಂ.ಕೆ.) ನವರು ಸರಕಾರಿ ಹಿರಿಯ ಪ್ರಾಥಮಿಕಶಾಲೆ ಬಿಜಗುಪ್ಪಿಯಲ್ಲಿ ಗುರುಮಾತೆಯರಾಗಿ ಕಳೆದ 22 ವರುಷಗಳಿಂದ ಸೇವೆ ಸಲ್ಲಿಸುತ್ತಿದ್ದಾರೆ.

ಈ ದಂಪತಿಗಳಿಗೆ ಚಿ. ನರೇಂದ್ರ, ಚಿ. ಗುರುಪ್ರಸಾದ, ಚಿ. ಅಖಿಲೇಶ ಎಂಬ ಮೂರು ಜನ ಮಕ್ಕಳಿದ್ದಾರೆ. ಸಹೋದರನ ಮಗಳು ಚಿ. ನೀಲಮ್ಮ ಇವಳನ್ನೂ ಸಹ ಓದಿಸುತ್ತಿದ್ದಾರೆ.

ಇಂತಹ ಶರಣ ದಂಪತಿಗಳು ಪೂಜ್ಯ ಶ್ರೀ ಬಸವಪ್ರಿಯ ಅಪ್ಪಣ್ಣ ಸ್ವಾಮಿಗಳವರ ಅನುಗ್ರಹಕ್ಕೆ ಪಾತ್ರರಾಗಿದ್ದಾರೆ. ಇವರ ಧಾರ್ಮಿಕ-ಸಾಹಿತ್ಯಿಕ ದಾಸೋಹ ಸೇವೆಗೆ ಬಸವಾದಿ ಶರಣರ ಹಾಗೂ ಹಡಪದ ಅಪ್ಪಣ್ಣ-ಲಿಂಗಮ್ಮ ತಾಯಿಗಳ ಕೃಪೆಯು ನಿರಂತರವಿರಲಿ ಎಂದು ಶುಭ ಹಾರೈಸಲಾಗಿದೆ.

–ಪ್ರಕಾಶಕರು

ಗ್ರಂಥ ಪ್ರಕಟಣಾ ದಾಸೋಹಿಗಳು



ಶ್ರೀ ಯಲ್ಲಪ್ಪ ಬಸಪ್ಪ ಹಡಪದ (ಹೊಸಕೇರಿ)   ಶ್ರೀಮತಿ ರುಕ್ಮವ್ವ ಯಲ್ಲಪ್ಪ ಹಡಪದ (ಹೊಸಕೇರಿ)

ಶ್ರೀ ಮಂಜುನಾಥ ಹೇರ್ ಕಟಿಂಗ್ ಸಲೂನ, ರಾಮದುರ್ಗ

ಫೋನ್: 9986119514

ಶ್ರೀ ಬಸವರಾಜ ಸಿದ್ದಪ್ಪ ಹಡಪದ ಶ್ರೀಮತಿ ಸಾವಿತ್ರಿ ಬ. ಹಡಪದ

ತೋಟಗಾರಿಕಾ ವೃತ್ತಿ ಶಿಕ್ಷಣದ ಶಿಕ್ಷಕರು,

ಸ್ಟೇಟ್ ಪ.ಪೂ. ಕಾಲೇಜು, ರಾಮದುರ್ಗ

ಫೋನ್: 9986709766

ಗ್ರಂಥ ಪ್ರಕಟಣಾ ದಾಸೋಹಿಗಳು

ಶ್ರೀ ಹಂಪಣ್ಣ ಶಂಕ್ರಪ್ಪ ಹಡಪದ (ಲಕಮಾಪೂರ) ಶ್ರೀಮತಿ ಪಾರ್ವತಿ ಹಂ. ಹಡಪದ

ಅಧ್ಯಕ್ಷರು, ಹಡಪದ ಅಪ್ಪಣ್ಣ ಸಮಾಜ ಸಂಘ, ರಾಮದುರ್ಗ
ಹಾಗೂ ಕಾರ್ಯದರ್ಶಿ, ನಗರ ಬಿಜೆಪಿ ಘಟಕ, ರಾಮದುರ್ಗ
ಫೋನ್: 9980444695

ಶರಣ ಅಪ್ಪಣ್ಣನವರ ವಚನ ಸಂದೇಶ

ವಂದನೆಗೆ ನಿಲ್ಲಬೇಡ
ನಿಂದೆಗಂಜಿ ಓಡಲಿಬೇಡ
ಹಿಂದು ಮುಂದು ಆಡಲಿಬೇಡ
ಸಂದೇಹಗೊಳಲು ಬೇಡ
ದ್ವಂದ್ವ ಬುದ್ಧಿಯ ಕಳೆದು ನಿಂದಿರೆ
ಬಸವಪ್ರಿಯ ಕೂಡಲಚೆನ್ನಬಸವಣ್ಣ ತಾನೆ.

ಧಾರವಾಡ ಮುರುಘಾಮಠಾಧ್ಯಕ್ಷರಾದ

ಶ್ರೀ ಮ. ನಿ. ಪ್ರ ಶ್ರೀ ಮಹಾಂತಪ್ಪಗಳವರ ಹರಕೆ

ಲಿಂಗಾಯತ ಧರ್ಮದ ವೈಶಿಷ್ಟ್ಯವೆಂದರೆ ಯಾರೂ ಹುಟ್ಟಿನಿಂದ ಈ ಧರ್ಮಿಗಳಾಗರು. ಸಂಸ್ಕಾರದಿಂದಲೇ ಅವರು ಪುನರ್ಜನ್ಮವನ್ನು ಪಡೆಯಬೇಕಾಗುವುದು. ಆಗ ಜಾತಿ ಭೇದವೆಂಬುದು ಈ ಧರ್ಮದಲ್ಲಿ ಎಷ್ಟೂ ಸುಳಿಯಲಾರದು, ವ್ಯಕ್ತಿಗಳ ನೈಜ ಜೀವನ ಪ್ರಾರಂಭವಾಗುವುದು ಗುರುವಿನಿಂದ ದೀಕ್ಷಾ ಸಂಸ್ಕಾರವನ್ನು ಪಡೆದು ಲಿಂಗಧಾರಿಯಾದಾಗಲೇ ! ಗುರು ನರರೂಪದಲ್ಲಿ ಇದ್ದರೂ ಹರನೇ ಆಗಿರುವನು. ಅಂತೆಯೇ ಬಸವಣ್ಣನವರು -

"ಏನೆಂದುಪಮಿಸುವೆನಯ್ಯ ತನ್ನಿಂದ ತಾ ತೋರದೆ।
ಗುರು ಮುಖದಿಂದ ತೋರಿದ ತನ್ನ ನಿಲವ ನಿರುಪಮನು।
ಕೂಡಲ ಸಂಗಮ ದೇವರಲ್ಲಿ ಪ್ರಭುದೇವರು, ಸಿದ್ಧರಾಮ ದೇವರು
ಹಡಪದ ಅಪ್ಪಣ್ಣನಿಂದ ಕಂಡ ಎನ್ನ ಜನ್ಮ ಸಫಲವಾಯಿತಯ್ಯ ॥

ಎಂದು ಅಪ್ಪಣ್ಣನವರ ಬಗೆಗೆ ಹೇಳಿದ್ದಾರೆ. ಹಡಪದ ಅಪ್ಪಣ್ಣನವರು ಕೇವಲ ಶರಣರ ತಲೆಯ ಕೂದಲನ್ನು ಬೋಳಿಸುವವರಾಗದೇ ಅವರ ತಲೆಯಲ್ಲಿ ಮೂಡುವ ಅನುಚಿತ ಆಮಿಷಾದಿ ದುರ್ಗುಣಗಳನ್ನು ಛೇಧಿಸುವವರಾಗಿದ್ದರು. ಅಂತೆಯೇ ಅವರು ಬಸವಣ್ಣನವರನ್ನು ತಮ್ಮ ಆಧ್ಯಾತ್ಮಿಕ ಜ್ಞಾನದ ಗುರುಗಳನ್ನಾಗಿ ಸ್ವೀಕರಿಸುವಲ್ಲಿ ತಮ್ಮ ಹೆಚ್ಚಳವನ್ನು ತಂದುಕೊಂಡರು.

ಗೃಹಸ್ಥಾಶ್ರಮ ಬಹಳ ಮಹತ್ವ ಪೂರ್ಣವಾದದ್ದು. ಅಂತೆಯೇ ಶರಣ, ಶರಣೆಯರು ಗೃಹಸ್ಥಾಶ್ರಮಿಗಳಾಗಿಯೇ ತಮ್ಮ ಜೀವನದ ಪರಮ-ಚರಮ ಗುರಿಯನ್ನು ಸಾಧಿಸುವವರಾದರು. ಅವರಲ್ಲಿ ಹಡಪದ ಅಪ್ಪಣ್ಣನವರೂ ಕೂಡ ನಿಷ್ಕಂಟಕವಾದ ಆಧ್ಯಾತ್ಮಿಕೋನ್ನತಿಗೆ ಸಹಾಯಕವಾದ ಗೃಹಸ್ಥಾಶ್ರಮವನ್ನೇ ಅನುಸರಿಸಿದವರಾಗಿದ್ದರು. ಅವರಿಗೆ ಲಿಂಗಮ್ಮನೆಂಬ ಸದ್ಧರ್ಮ ಪತ್ನಿಯಿದ್ದಳು. ಇವರ ದಾಂಪತ್ಯ ಜೀವನವು ಮಾನವ ಮಾತ್ರಕ್ಕೆ ಅನುಸರಿಸಲು ಯೋಗ್ಯವಾಗಿದೆ. ಇವರಿಬ್ಬರೂ ವಚನಕಾರರೇ ಆಗಿದ್ದಾರೆ.

ಹಡಪದ ಅಪ್ಪಣ್ಣನವರೂ ಕೂಡ ಗೃಹಸ್ಥಾಶ್ರಮಿಗಳಾಗಿಯೇ ತಮ್ಮ ಜೀವನವನ್ನು ಆದರ್ಶಪೂರ್ವಕ ನಡೆಯಿಸಿ, ಲೋಕದ ಜನರಿಗೆ ಮಾರ್ಗದರ್ಶನ ಮಾಡಿದ್ದಾರೆ. ಹಡಪದ ಅಪ್ಪಣ್ಣನವರ ಹಾಗೂ ಲಿಂಗಮ್ಮನವರ ಜೀವನವನ್ನು ಪ್ರಾಧ್ಯಾಪಕರಾದ ಶ್ರೀ ಸಿದ್ದಣ್ಣ ಲಂಗೋಟಿಯವರು ಚಿತ್ರಿಸಲು ಯಥಾಶಕ್ತಿ ಪ್ರಯತ್ನ ನಡೆಸಿದ್ದು ನಮಗೆ ಸಂತೋಷವನ್ನುಂಟು ಮಾಡಿದೆ. ಅವರಿನ್ನೂ ಹೆಚ್ಚು ಹೆಚ್ಚು ಧಾರ್ಮಿಕ ಮಹಾಪುರುಷರ ಜೀವನವನ್ನು ಚಿತ್ರಿಸುವಂತೆ ಶರಣರು ಕೃಪೆ ಮಾಡಲೆಂದು ಹಾರೈಸಲಾಗುವುದು. (ರ್ಸಹಿ)

ಓಂ ಶ್ರೀಗುರು ಬಸವ ಲಿಂಗಾಯ ನಮಃ

ಪೂಜ್ಯ ಶ್ರೀ ಬಸವಪ್ರಿಯ ಅಪ್ಪಣ್ಣ ಮಹಾಸ್ವಾಮಿಗಳು

ಶ್ರೀ ಅಪ್ಪಣ್ಣ ದೇವರ ಮಹಾ ಸಂಸ್ಥಾನಮಠ

ಸುಕ್ಷೇತ್ರ ತಂಗಡಗಿ ತಾ. ಮುದ್ದೇಬಿಹಾಳ ಜಿ. ವಿಜಾಪುರ

ಪೂಜ್ಯರ ಪರಿಚಯ

ಬಸವತತ್ವನಿಷ್ಠ ಶರಣಜೀವಿಗಳೂ, ಸದುವಿನಯ ಸದಾಚಾರ ಸಂಪನ್ನರೂ ಆಗಿರುವ ಪೂಜ್ಯ ಶ್ರೀ ಬಸವಪ್ರಿಯ ಅಪ್ಪಣ್ಣ ಸ್ವಾಮಿಗಳು ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲೂಕಿನ ಲಿಂಗದಳ್ಳಿ ಗ್ರಾಮದಲ್ಲಿ ಶರಣದಂಪತಿಗಳಾದ ಶ್ರೀ ಮಲ್ಲೇಶಪ್ಪ ಹಾಗೂ ಶ್ರೀಮತಿ ವೀರಮ್ಮನವರ ಚಿದ್‌ಗರ್ಭದಲ್ಲಿ ಜೂನ್ ೧, ೧೯೭೭ ರಂದು ಜನಿಸಿದರು. ಪೂಜ್ಯ ಗುಡದೂರ ದೊಡ್ಡಬಸವಾರ್ಯ ಅಜ್ಜನವರಿಂದ ಅನುಗ್ರಹ ಪಡೆದ ದಂಪತಿಗಳು, ತಮಗೆ ಜನಿಸಿದ ಶಿಶುವಿಗೆ "ಮೌನೇಶ" ಎಂದು ನಾಮಕರಣ ಮಾಡಿದರು.

ಚಿ.ಮೌನೇಶನು ರಾಯಚೂರ ಜಿಲ್ಲೆಯ ಹಿರೇಮನ್ನಾಪುರದಲ್ಲಿ ಪ್ರಾಥಮಿಕ - ಮಾಧ್ಯಮಿಕ ಶಿಕ್ಷಣ; ಬಸವನ ಬಾಗೇವಾಡಿ ತಾಲೂಕಿನ ಗೊಳಸಂಗಿಯಲ್ಲಿ ಪಿಯುಸಿ ಶಿಕ್ಷಣ; ನರೇಗಲ್ಲ ಅನ್ನದಾನೀಶ್ವರ ಕಾಲೇಜಿನಲ್ಲಿ ಬಿ.ಎ. ಪದವಿ ಶಿಕ್ಷಣ ಪಡೆದು, ಚಿತ್ರದುರ್ಗ ಶ್ರೀ ಮುರುಘರಾಜೇಂದ್ರ ಬೃಹನ್ಮಠದಲ್ಲಿ ೨೦೦೦ ರಿಂದ ೨೦೦೩ರ ವರೆಗೆ ಬಸವತತ್ವ ಮಹಾವಿದ್ಯಾಲಯದ 'ಬಸವತತ್ವ'ದ ಉನ್ನತ ಶಿಕ್ಷಣ ಪಡೆದು ಸಂಗೀತ ವಿದ್ವತ್‌ನ್ನು ಪಾಸಾಗಿ ಪೂಜ್ಯ ಶ್ರೀ ಶಿವಮೂರ್ತಿ ಮುರುಘರಾಜೇಂದ್ರ ಶರಣರಿಂದ ಜಂಗಮದೀಕ್ಷೆ ಪಡೆದರು.

ಪರಮ ಪೂಜ್ಯ ಶ್ರೀ ಚಿತ್ರದುರ್ಗದ ಶಿವಮೂರ್ತಿ ಮುರಘರಾಜೇಂದ್ರ ಶರಣರ, ಪೂಜ್ಯ ಶ್ರಿ ಜಗದ್ಗುರು ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳವರ ಹಾಗೂ ಪೂಜ್ಯ ಶ್ರೀ ಮಹಾಂತ ಶಿವಯೋಗಿಗಳು ಚಿತ್ತರಗಿ - ಇಳಕಲ್ಲ ಇವರ ಸದ್ಭಿಚ್ಛೆಯಂತೆ ಧರ್ಮ ಕ್ಷೇತ್ರ ಕೂಡಲ ಸಂಗಮಕ್ಕೆ ಆಗಮಿಸಿದರು.

ಅನಂತರ ಬಸವ ಜನ್ಮ ಭೂಮಿಯಾದ ವಿಜಾಪುರ ಜಿಲ್ಲೆಯ ಮುದ್ದೇಬಿಹಾಳ ತಾಲೂಕಿನ ತಂಗಡಗಿ ಸುಕ್ಷೇತ್ರಕ್ಕೆ ಆಗಮಿಸಿ ಅಲ್ಲಿ ಶರಣ ಅಪ್ಪಣ್ಣ ದೇವರ ಮಹಾ ಸಂಸ್ಥಾನಮಠವನ್ನು ಸ್ಥಾಪಿಸಿದರು. ಅಲ್ಲಿಂದಲೇ ಕಳೆದ ನಾಲ್ಕಾರು ವರ್ಷಗಳಿಂದ ಕರ್ನಾಟಕದಾದ್ಯಂತ ಸಂಚರಿಸಿ ಬಸವ ತತ್ವ ಪ್ರಸಾರ ಗೈಯುತ್ತ ಸಮಾಜ ಸಂಘಟನೆ ಶರಣ ಸಂಸ್ಕೃತಿ ಪುನರುತ್ಥಾನಕ್ಕೆ ಶ್ರಮಿಸುತ್ತಿದ್ದಾರೆ.

ಕೂಡಲ ಸಂಗಮದ ಹತ್ತಿರದಲ್ಲಿರುವ ಶರಣ ಹಡಪದ ಅಪ್ಪಣ್ಣನವರ, ಶರಣ ಲಿಂಗಮ್ಮನವರ, ಮಹಾತಾಯಿ ನಿಲಾಂಬಿಕೆಯವರ ಲಿಂಗೈಕ್ಯ ಸ್ಮಾರಕ ಸ್ಥಳವನ್ನು ಸರಕಾರದ ಅಭಿವೃಧಿ ಪ್ರಾಧಿಕಾರಕ್ಕೆ ವಹಿಸಿ ರಕ್ಷಿಸಲು ಹಗಲಿರಳು ಪ್ರಯತ್ನಿಸಿದ್ದಾರೆ. ೨೦೦೫ರಿಂದ ಇಲ್ಲಿಯವರಗೆ ಶರಣ ಅಪ್ಪಣ್ಣನವರ ಜ್ಯೋತಿ ಯಾತ್ರೆ ಹಮ್ಮಿಕೊಂಡು ನಾಡಿನಾದ್ಯಂತ ಸಂಚರಿಸಿದ್ದಾರೆ. ಸಹಸ್ರಾರು ಜನರಿಗೆ ಇಷ್ಟ ಲಿಂಗ ದೀಕ್ಷೆ, ಮನೆ ಮನೆಗಳಲ್ಲಿ ಶರಣ ಸಾಹಿತ್ಯ ಪ್ರಸಾರ, ಸಮಾಜ ಜಾಗೃತಿ ಗೈಕೊಂಡಿದ್ದಾರೆ.

ಪೂಜ್ಯರು ಸ್ವತಹ ಶರಣ ಸಾಹಿತಿಗಳು ಹೌದು. ವಚನ ಸಂಗೀತಗಾರರು ಹೌದು. ಪೂಜ್ಯರಿಂದ ಬಸವತತ್ವ ಪ್ರಸಾರ ನಿರಂತರವಾಗಿ ಸಾಗಲಿ ಜನಮಾನಸದಲ್ಲಿ ಬಸವಬೆಳಗು ಹರಡಲಿ ಎಂದು ಬಸವಗುರುವಿನಲ್ಲಿ ಪ್ರಾರ್ಥಿಸುತ್ತೇನೆ.

ರಾಮದುರ್ಗ — ಪ್ರೊ. ಸಿದ್ಧಣ್ಣ ಲಂಗೋಟಿ (ಚಾಂದಕವಠೆ)
೧-೩-೨೦೦೮ — ಗೌ.ಸಂಪಾದಕರು, ಬಸವಬೆಳಗು ಪತ್ರಿಕೆ

|| ಓಂ ಶ್ರೀ ಗುರು ಬಸವಲಿಂಗಾಯ ನಮಃ ||

ಲೇಖಕರ ಅರಿಕೆ

ಧರ್ಮಗುರು ಬಸವಣ್ಣನವರು ೧೨ನೆಯ ಶತಮಾನದಲ್ಲಿ ಲಿಂಗವಂತ ಧರ್ಮ ಸ್ಥಾಪಿಸಿ, ಅದರ ಆಧ್ಯಾತ್ಮ ಕೇಂದ್ರವಾದ ಅನುಭವಮಂಟಪದಲ್ಲಿ ಎಲ್ಲ ಕಾಯಕಗಳ ಶರಣ-ಶರಣೆಯರಿಗೆ ಮುಕ್ತ ಅವಕಾಶವನ್ನಿತ್ತು, ಇಷ್ಟ ಲಿಂಗಧಾರಣೆಯ ಮೂಲಕ ಏಕದೇವೋಪಾಸನೆ, ಧಾರ್ಮಿಕ -ಸಾಮಾಜಿಕ ಸಮತೆಯನ್ನು ಸಾರಿದರು.

ದೇವಸಹಿತ ಭಕ್ತ ಮನೆಗೆ ಬಂದರೆ ನಿಮ್ಮ ಕಾಯಕವಾವುದೆಂದು ಬೆಸಗೊಂಡೆನಾದರೆ ಆಣೆ ನಿಮ್ಮಾಣೆ ನಿಮ್ಮ ಪ್ರಮಥರಾಣೆ ಎಂದು ಅರುಹಿ ಕಾಯಕದಲ್ಲಿ ಕುಲವನೆಣಿಸುವವರಿಗೆ ಮೇಲು-ಕೀಳು, ಸ್ಪೃಶ್ಯ- ಅಸ್ಪೃಶ್ಯನೆನ್ನುವವರಿಗೆ ಕಾಯಕದಲ್ಲಿ ಕುಲವನೆಣಸುವ ಎಲವೋ ಮಾತಂಗಿಯ ಮಗ ನೀನು ಎಂದು ಖಂಡಿಸಿದರು. ಕಾಯಕ ಗೌರವ -ಕಾಯಕದೈವತ್ವವನ್ನು ಸಾರಿ ಇವನಾರವ ಇವನಾರವನೆಂದು ಕೇಳದೇ ಎಲ್ಲರೂ ನಮ್ಮವರೆಂದು ಅಪ್ಪಿಕೊಂಡರು.

ಇಂತಹ ವಿನೂತನಧರ್ಮದಲ್ಲಿ ಇಂದು ಮತ್ತೆ ಪುರೋಹಿತಶಾಹಿತನ ಒಳನುಸುಳಿ ವರ್ಣವಾದಿಗಳಿಗಿಂತ ಕಠೋರ ಕರ್ಮಠವಾದಿತನ ಬೆಳೆದಿದೆ. ಕಾಯಕಗಳನ್ನೇ ಒಳಪಂಗಡ-ಜಾತಿಗಳನ್ನಾಗಿಸಿ ಲಿಂಗಧಾರಿಗಳಲ್ಲಿ ಭಿನ್ನತೆವುಂಟು ಮಾಡಿ, ಕೈಕಸುಬುದಾರರನ್ನು, ಕಾಯಕಜೀವಿಗಳನ್ನು ಕೀಳಾಗಿ ಕಾಣುವುದು ನಡೆದಿದೆ. ಧರ್ಮಮುಖಂಡರೆನ್ನಿಸಿಕೊಳ್ಳುವ ಅಯ್ಯನವರು ಹಾಗೂ ಸ್ವಾಮಿಗಳು ಮೇಲ್ಜಾತಿಯವರೆನ್ನಿಸಿಕೊಳ್ಳುವ ಪಂಚಮಸಾಲಿ, ಬಣಜಿಗ, ಗಾಣಿಗ ಮುಂತಾದವರ ಮನೆಗಳ ಹೊರತಾಗಿ ಉಳಿದ ಕಾಯಕ ಜೀವಿ ಲಿಂಗವಂತರ ಮನೆಗಳಿಗೆ ಪ್ರಸಾದ ಕಾರಣಗಳಿಗೆ ಹೋಗುವುದಿಲ್ಲ. ಇದರಿಂದಾಗಿ ಲಿಂಗವಂತ ಸಂಸ್ಕೃತಿ ವಿನಾಶದ ಹಾದಿ ಹಿಡಿದಿದೆ.

ಇಂದು ಲಿಂಗವಂತರು ಸಾಮಾಜಿಕ-ಧಾರ್ಮಿಕವಾಗಿ ಮೇಲೇಳಬೇಕಾಗಿದೆ. ಅದರ ಜೊತೆಗೆ ಲಿಂಗಧಾರಿಗಳೆಲ್ಲಾ ಒಂದು ಎಂಬ ವಿಶಾಲ ಮನೋಭಾವ ಮೈಗೂಡಿಸಿಕೊಳ್ಳಬೇಕಾಗಿದೆ. ಈ ದಿಸೆಯಲ್ಲಿ ಧಾರವಾಡದ ಹಡಪದ ಅಪ್ಪಣ್ಣ ಸೇವಾ ಸಂಘವು ಕಾರ್ಯ ಮಾಡುತ್ತದೆ ಎಂಬ ಹಿರಿಯಾಸೆ ನನ್ನದು.

ಧಾರವಾಡದಲ್ಲಿ ದಿ. ೧೨-೭-೧೯೮೪ ರಂದು ಜರುಗಿದ ಅಪ್ಪಣ್ಣನವರ ಜಯಂತ್ಯುತ್ಸವದಲ್ಲಿ ನಾನು ಭಾಗಿಯಾಗಿ ಉಪನ್ಯಾಸ ನೀಡಿದಾಗ, ನನ್ನ ವಿಚಾರಗಳನ್ನು ಮೆಚ್ಚಿಕೊಂಡ ಈ ಸಂಘದ ಅಧ್ಯಕ್ಷರಾದ ಕಾಯಕಜೀವಿ ರಾವುತಪ್ಪ ಬಸಪ್ಪ ಬಂಕಲಗಿ, ಈ ಸಂಘದ ಪ್ರಧಾನ ಕಾರ್ಯದರ್ಶಿಗಳೂ ನನ್ನ ಮಿತ್ರರೂ ಆದ ಪ್ರೊ. ದೊಡಮನಿ, ಶರಣಜೀವಿ ಗಾಯಕರಾದ ಗಂಗಾಧರ ಎಮ್ಮಿಗನೂರ ಅವರ ಪ್ರೋತ್ಸಾಹದಿಂದ ಈ ಕೃತಿ ರಚನೆಯಾಗಿದೆ. ಚಿಂತನಶೀಲ ಶರಣಬಂಧುಗಳಾದ ಸಿಂಧನೂರಿನ ಶಾಲಾ ಸಮೀಕ್ಷಕರಾದ ಶ್ರೀ ಹಂಪಣ್ಣ ಅಪ್ಪಣ್ಣವರ ಓಲೆ ಬರೆದು ಅತ್ಯುಪಯುಕ್ತ ನಿರ್ದೇಶನ ಮಾಡಿದ್ದಾರೆ. ಇವರೆಲ್ಲರಿಗೂ ಶರಣಾರ್ಥಿಗಳು.

ಜೂನ ೧೯೮೫
ರಾಮದುರ್ಗ -ಸಿದ್ಧಣ್ಣ ಲಂಗೋಟಿ
ಜಿ. ಬೆಳಗಾವಿ.

ದ್ವಿತೀಯ ಮುದ್ರಣ

ಪರಮಪೂಜ್ಯರಾದ ಶ್ರೀ ಬಸವಪ್ರಿಯ ಅಪ್ಪಣ್ಣ ಮಹಾಸ್ವಾಮಿಗಳು ಸುಕ್ಷೇತ್ರ ತಂಗಡಗಿ ತಾ।। ಮುದ್ದೇಬಿಹಾಳ ಜಿ।। ವಿಜಾಪೂರ ಪೂಜ್ಯರು ಶರಣ ಅಪ್ಪಣ್ಣ ಜ್ಯೋತಿ ಯಾತ್ರೆ ಕೈಕೊಂಡು ನಾಡಿನಾದ್ಯಂತ ಬಸವಾದಿ ಶರಣರ ತತ್ವ ಪ್ರಸಾರ ಮಾಡುತ್ತಿದ್ದಾರೆ. ಪೂಜ್ಯರ ಅಪೇಕ್ಷೆಯಂತೆ ೧೯೮೫ರಲ್ಲಿ ಪ್ರಕಟವಾದ ನನ್ನ ಈ ಕೃತಿಯನ್ನು ಎರಡನೇ ಮುದ್ರಣವಾಗಿ ಮುದ್ರಿಸಲಾಗುತ್ತಿದೆ.

ಈ ಗ್ರಂಥದ ಪ್ರಕಟನೆಗೆ ಸಹಕರಿಸಿದ ಪೂಜ್ಯರಿಗೆ ಹಾಗೂ ಬಸವಭಕ್ತರಿಗೆ ಶರಣು ಶರಣಾರ್ಥಿಗಳು.

ಮಾರ್ಚ ೨೦೦೮ -ಸಿದ್ಧಣ್ಣ ಲಂಗೋಟಿ
ರಾಮದುರ್ಗ ಜಿ।। ಬೆಳಗಾವಿ ಗೌ।। ಸಂಪಾದಕರು, ಬಸವಬೆಳಗು

ಪರಿವಿಡಿ

- ಇಲಕಲ್ಲ ಶ್ರೀಗಳವರ ಸೂಳ್ನುಡಿ ೩
- ಧಾರವಾಡ ಶ್ರೀಗಳವರ ಹರಕೆ ೫
- ತಂಗಡಗಿ ಶ್ರೀಗಳವರ ಪರಿಚಯ ೬
- ಲೇಖಕರ ಅರಿಕೆ ೮

ಶರಣದಂಪತಿಗಳಾದ ಹಡಪದ ಅಪ್ಪಣ್ಣ -ಲಿಂಗಮ್ಮರು

೧. ಲಿಂಗಾಯತಧರ್ಮ -ಅನುಭವಮಂಟಪ ಸ್ಥಾಪನೆ ೧೩
೨. ಹಡಪದ ಅಪ್ಪಣ್ಣ-ಲಿಂಗಮ್ಮರ ಶರಣ -ದಾಂಪತ್ಯ ಜೀವನ... ೧೬
೩. ಶರಣ ಅಪ್ಪಣ್ಣನವರ ಅನುಭಾವ ೧೮
೪. ಶರಣೆ ಲಿಂಗಮ್ಮನವರ ಅನುಭಾವ ೨೮
೫. ಶೂನ್ಯಸಂಪಾದನೆಯಲ್ಲಿ ಅಪ್ಪಣ್ಣನವರ ಪಾತ್ರ ೪೭
೬. ಕಲ್ಯಾಣ ಕ್ರಾಂತಿಯ ಸಂದರ್ಭದಲ್ಲಿ ಅಪ್ಪಣ್ಣನವರ ಪಾತ್ರ ೭೬
೭. ಶರಣ ಅಪ್ಪಣ್ಣ- ಲಿಂಗಮ್ಮರ ಸಂದೇಶ ೮೦
ಗ್ರಂಥ ಋಣ ೮೪

ಅರ್ಪಣೆ

೧೨ನೇಯ ಶತಮಾನದಲ್ಲಿ ಲಿಂಗವಂತ ಧರ್ಮ ಸ್ಥಾಪಿಸಿ

ಅನುಭವಮಂಟಪದಲ್ಲಿ ಸಹಸ್ರಾರು ಶರಣರನು ಅನುಗೊಳಿಸಿ

ಕಾಯಕಗೌರವ-ಕಾಯಕಘನತೆ -ಕಾಯಕದೈವತ್ವ ತೋರಿ,

ಕಾಯಕವೇ ಕೈಲಾಸವೆಂದು ಸಾರಿದ

ಕಾಯಕಯೋಗಿ, ಸಮತಾವಾದಿ, ಯುಗನಿರ್ಮಾಪಕ

ಧರ್ಮಗುರು ಬಸವಣ್ಣನವರ ದಿವ್ಯ ಚೇತನಕ್ಕೆ

ಭಕ್ತಿ -ಗೌರವಗಳಿಂದ

ಅರ್ಪಣೆ

ರಾಮದುರ್ಗ | ಸಿದ್ಧಣ್ಣ ಲಂಗೋಟಿ

||ಓಂ ಶ್ರೀ ಗುರು ಬಸವಲಿಂಗಾಯ ನಮಃ ||

ಶರಣ ದಂಪತಿಗಳಾದ

ಹಡಪದ ಅಪ್ಪಣ್ಣ - ಲಿಂಗಮ್ಮರು

೧. ಲಿಂಗಾಯತಧರ್ಮ-ಅನುಭವಮಂಟಪ ಸ್ಥಾಪನೆ :

ಕಲ್ಯಾಣವೆಂಬ ಪ್ರಣತಿಯಲ್ಲಿ
ಭಕ್ತಿರಸವೆಂಬ ತೈಲವನೆರೆದು
ಆಚಾರವೆಂಬ ಬತ್ತಿಯಲ್ಲಿ
ಬಸವಣ್ಣನೆಂಬ ಜ್ಯೋತಿಯ ಮುಟ್ಟಿಸಲು,
ತೊಳಗಿ ಬೆಳಗುತ್ತಿರ್ದಿತಯ್ಯಾ ಶಿವನ ಪ್ರಕಾಶ !
ಆ ಬೆಳಗಿನೊಳಗೋಪ್ಪುತಿರ್ದರಯ್ಯ,
ಅಸಂಖ್ಯಾತ ಭಕ್ತ ಮಹಾಗಣಂಗಳು!
ಶಿವಭಕ್ತರಿರ್ದ ಕ್ಷೇತ್ರ ಅವಿಮುಕ್ತ ಕ್ಷೇತ್ರವೆಂಬುದು ಹುಸಿಯೆ ?
ಶಿವಭಕ್ತರಿರ್ದ ದೇಶವು ಪಾವನವೆಂಬುದು ಹುಸಿಯೆ ?
ಗುಹೇಶ್ವರಲಿಂಗದಲ್ಲಿ ಎನ್ನ ಪರಮಾರಾಧ್ಯ
ಗುರು ಸಂಗನಬಸವಣ್ಣನ ಕಂಡು,
ಬದುಕಿದೆ ಕಾಣಾ ಸಿದ್ಧರಾಮಯ್ಯಾ.

೧೨ನೆಯ ಶತಮಾನದಲ್ಲಿ ಧರ್ಮಗುರು ಬಸವಣ್ಣನವರಿಂದ ಕರ್ನಾಟಕದಲ್ಲಿ (ಇಂದಿನ ಬಸವಕಲ್ಯಾಣ) ವಿಶ್ವಕ್ಕೆಯೇ ವಿನೂತನವಾದ ಲಿಂಗಾಯತ ಧರ್ಮವು ಸ್ಥಾಪಿತವಾಯಿತು. ಈ ಧರ್ಮವು ಉದಯವಾಗುವ ಪೂರ್ವದಲ್ಲಿ ನಮ್ಮ ದೇಶದ ಧಾರ್ಮಿಕ-ಸಾಮಾಜಿಕ ಸ್ಥಿತಿಯು ವಿರೂಪಗೊಂಡಿತ್ತು. ಶೈವ-ವೈದಿಕ ಮತ - ಸಿದ್ಧಾಂತಗಳು ಕೇವಲ ಕರ್ಮಠ ಭಕ್ತಿಯಲ್ಲಿಯೇ ಮುಳುಗಿ ಜನ-ಸಾಮಾನ್ಯರ, ದುಡಿಯುವ ಮುಗ್ಧ ಜನರಿಂದ ದೂರವಾಗಿದ್ದವು. ಕಾಪಾಲಿಕ ಕಾಳಾಮುಖ-ಶಾಕ್ತರ ಆಚರಣೆಗಳಂತೂ ರುದ್ರಭಯಾನಕವಾಗಿದ್ದವು. ಎಲ್ಲಿ ನೋಡಿದಡಲ್ಲಿ ಧಾರ್ಮಿಕ ಸ್ಥಾನಗಳಲ್ಲಿ ಪೂಜಾರಿ -ಪುರೋಹಿತರಿಂದ ಶೋಷಣೆಯೇ ನಡೆದಿತ್ತು. ದೇವರು-ಭಕ್ತರ ನಡುವೆ ಈ ದಲ್ಲಾಳಿಗಳು ಪ್ರಬಲವಾಗಿದ್ದರು. ಧಾರ್ಮಿಕ ಕಟ್ಟಳೆಗಳು ಸಮಾಜ ಜೀವನದಲ್ಲಿ ವಿಕೃತ ವ್ಯವಸ್ಥೆ ಉಂಟು ಮಾಡಿದ್ದವು. ಇದರಿಂದಾಗಿ ವರ್ಣಭೇದ, ವರ್ಗಭೇದ, ಲಿಂಗಭೇದ, ಆಶ್ರಮಭೇದಗಳು ಉಂಟಾಗಿದ್ದವು.

ಬ್ರಾಹ್ಮಣ-ವೈಶ್ಯ-ಕ್ಷತ್ರಿಯ-ಶೂದ್ರರೆಂದು ಹಾಗೂ ಈ ನಾಲ್ಕೂ ವರ್ಣಗಳಿಂದ ಭಿನ್ನವಾಗಿ ಚಾಂಡಾಲ -ಅಸ್ಪೃಶ್ಯವೆಂಬ 'ಪಂಚಮ' ಜನರನ್ನು ಒಂದು ಭಾಗವಾಗಿ ವಿಂಗಡಿಸಿ ಮಾನವನ ಜೀವನವನ್ನು ಪ್ರಾಣಿಗಳಿಗಿಂತ ಕಡೆಯದನ್ನಾಗಿ ಮಾಡಲಾಗಿತ್ತು. ಶೂದ್ರ-ಅಸ್ಪೃಶ್ಯ ಜನರನ್ನು ಅತ್ಯಂತ ಕೀಳಾಗಿ-ಹೇಯವಾಗಿ ನಡೆಸಿಕೊಳ್ಳಲಾಗುತ್ತಿತ್ತು. ಅದನ್ನು ಮನಗಂಡ ಬಸವಣ್ಣನವರು 'ಅನುಭವ ಮಂಟಪ' ಎಂಬ ಸಂಸ್ಥೆಯನ್ನು ಸ್ಥಾಪಿಸಿ, ತನ್ಮೂಲಕ ಅರಿವು-ಆಚಾರ-ಅನುಭಾವಗಳ ಹಂಬಲವಿರುವವರಿಗೆಲ್ಲ ಮುಕ್ತ ಅವಕಾಶ ನೀಡಿದರು.

"ಹೊಲೆಗಂಡಲ್ಲದೇ ಪಿಂಡದ ನೆಲೆಗಾಶ್ರಯವಿಲ್ಲ
ಜಲಬಿಂದುವಿನ ವ್ಯವಹಾರವೊಂದೇ "

ಎಂದು ಸಾರಿ, ವರ್ಣಾನಾಂ ಕಿಂ ಪ್ರಯೋಜನಂ? ಎಂದು ಕೇಳಿದರು. ಇದಲ್ಲದೇ ನೂರೆಂಟು ದೇವಾನುದೇವತೆಗಳ ಕಲ್ಪನೆಯನ್ನು ತೊಡೆದು ಹಾಕಿ ವಿಶ್ವದ ತುಂಬೆಲ್ಲಾ ತುಂಬಿರುವ ಪರಮಾತ್ಮ ಚೇತನ ತನ್ನಲ್ಲಿಯೇ ಇದೆಯೆಂದು ಮನಗಂಡು, ತನ್ನಂತರಂಗದ ಅರುಹಿನ ಚೇತವನವನ್ನೇ ವಿಶ್ವದಾಕಾರದಲ್ಲಿ ಚುಳುಕಾಗಿಸಿ 'ಇಷ್ಟಲಿಂಗ'ವನ್ನು ಕರಸ್ಥಲದಲ್ಲಿ ಪೂಜಿಸಲು ತಿಳಿಸಿದರು.

ಪರಾತ್ಪರ ಪರವಸ್ತುವಿನ ಕುರುಹಾದ ಇಷ್ಟಲಿಂಗವು ಮಾನವ-ಮಾನವರಲ್ಲಿಯ ಎಲ್ಲಾ ದೋಷಯುಕ್ತ ಬಂಧನಗಳನ್ನು ತೊಡೆಯಿತು. "ದಾಸೀಪುತ್ರನಾಗಲಿ, ವೇಶ್ಯಾಪುತ್ರನಾಗಲಿ, ಶಿವದೀಕ್ಷೆಯಾದ ಬಳಿಕ ಎಲ್ಲರೂ ಸಮಾನರು" ಎಂಬುದನ್ನು ಆಚರಣೆಯಲ್ಲಿ ತರಲಾಯಿತು.

ವ್ಯಕ್ತಿ-ಸಮಾಜ-ರಾಷ್ಟ್ರಗಳ ಸರ್ವಾಂಗ ಸುಂದರ ಬದುಕಿಗೆ, ಸಮೃದ್ಧ ಜೀವನಕ್ಕೆ ನೂರಾರು ಪ್ರಕಾರಗಳ ವೃತ್ತಿ -ಉದ್ಯೋಗಗಳು ಬೇಕು. ಈ ಉದ್ಯೋಗಗಳಲ್ಲಿಯೇ ಮೇಲು-ಕೀಳು ಎಂದು ಕಲ್ಪಿಸಿ ಜನರನ್ನು ಒಡೆದು ಆಳುವುದನ್ನು ಬಸವಣ್ಣನವರು ಸಹಿಸಲಿಲ್ಲ. ಅವರು ಉದ್ಯೋಗ ವೃತ್ತಿಗಳಿಗೆ 'ಕಾಯಕ' ಎಂಬ ಹೆಸರಿಟ್ಟು. ಅದರ ಮೌಲಿಕತೆಯನ್ನು ಸಾರಿದರು. ಪ್ರಧಾನಿಯ ಕಾಯಕದಿಂದ -ಸೇವಕನ ಕಾಯಕದವರೆಗೆ ಬ್ರಾಹ್ಮಣನ ಕಾಯಕದಿಂದ -ಭಂಗಿಯ ಕಾಯಕದವರೆಗೆ ಎಲ್ಲಾ ಕಾಯಕಗಳು ಸಮಾನವಾದವು. ಕಾಯಕ ಗೌರವ-ಕಾಯಕ ದೈವತ್ವವನ್ನು ಸಾರಿದರು. ಇದರಿಂದ ಸ್ವಾವಲಂಬನೆಯುಂಟಾಗಿ -ಪರಾವಲಂಬನೆ ದೂರವಾಯ್ತು, ದಾಸ್ಯ ಮನೋಭಾವ ತೊಲಗಿತು. ವರ್ಗಭೇದ ತನ್ನಿಂದತಾನೇ ಅಳಿಯಿತು.

ಶತಶತಮಾನಗಳಿಂದ ದೇವರು-ಧರ್ಮ-ಉಪಾಸನೆಯಿಂದ ವಂಚಿತರಾಗಿ, ಅಸ್ಪೃಶ್ಯರಿಗಿಂತ ಕೀಳಾಗಿ ಕಾಣಲ್ಪಡುತ್ತಿದ್ದ ಸ್ತ್ರೀಯರಿಗೆ ಬಸವಣ್ಣನವರು ಧಾರ್ಮಿಕ ಸ್ವಾತಂತ್ರ್ಯವನ್ನಿತ್ತರು. ಗಡ್ಡ ಮೀಸೆ ಬಂದರೆ ಗಂಡೆಂಬರು, ಮೊಲೆ ಮುಡಿ ಬಂದರೆ ಹೆಣ್ಣೆಂಬರು, ನಡುವೆ ಸುಳಿವ ಆತ್ಮ ಹೆಣ್ಣೂ ಅಲ್ಲ, ಗಂಡೂ ಅಲ್ಲವೆಂದು ತಿಳಿಯಪಡಿಸಿ, ಪುರುಷನಷ್ಟೇ ಸ್ತ್ರೀಗೂ ಕೂಡ ಸಮಾತನೆಯನ್ನು ತಂದಿತ್ತರು.

ಈ ರೀತಿಯಾಗಿ ಯಾವುದೇ ಪ್ರಕಾರದ ಮೇಲು-ಕೀಳು, ಭೇದಭಾವವಿಲ್ಲದೆ ಸಮಾನತೆ-ಸ್ವಾತಂತ್ರ್ಯ-ಬಂಧುತ್ವದ ತಳಹದಿಯ ಮೇಲೆ ಹೊಸದಾದ 'ಲಿಂಗವಂತ ಧರ್ಮ' ವನ್ನು ಸ್ಥಾಪಿಸಿದಾಗ, ಈ ಧರ್ಮದ ಹೃದಯದಂತಿರ್ದ ಅನುಭವಮಂಟಪಕ್ಕೆ ಕಾಶ್ಮೀರದಿಂದ ಕನ್ಯಾಕುಮಾರಿವರೆಗಿನ ನೂರಾರು-ಸಹಸ್ರಾರು ಶರಣಚೇತನಗಳು ಧಾವಿಸಿ ಬಂದವು. ಅಂದಿನ ಅನುಭವ ಮಂಟಪದ ಶರಣ-ಶರಣೆಯರ ಕಾಯಕಗಳೆಂದರೆ- ಅಗ್ಗವಣಿ ಕಾಯಕ, ಅಕ್ಕಿ ಆರಿಸುವುದು, ಎಚ್ಚರಿಕೆ ಕಾಯಕ, ಒಕ್ಕಲುತನ, ನೂಲುವುದು, ಹೆಣೆಯುವುದು, ಕನ್ನಡಿ ಕಾಯಕ, ಕಾಲುಕಣ್ಣಿ ಕಾಯಕ, ಕೂಗಿನ ಕಾಯಕ, ಕುಟ್ಟುವುದು, ಗಾಣ ಹೊಡೆಯುವುದು. ತಳವಾರ ಕಾಯಕ, ಬಡಿಗತನ, ಕಮ್ಮಾರಿಕೆ, ಕುಂಬಾರಿಕೆ, ಚರ್ಮ ಹದಮಾಡುವುದು, ಚಪ್ಪಲಿ ಹೊಲೆಯುವುದು, ಬಟ್ಟೆ ಒಗೆಯುವುದು, ಕ್ಷೌರದ ಕಾಯಕ, ಬುಟ್ಟಿ ಹೆಣೆಯುವುದು, ಹಗ್ಗ ಹೊಸೆಯುವುದು, ಕುರಿ ಕಾಯುವುದು, ದನಕಾಯುವುದು, ವೈದ್ಯ ಸೇವೆ, ಸತ್ತಿಗೆ ಕಾಯಕ, ಶಾಲೆ ಕಲಿಸುವುದು, ಸೂಜಿ ಕಾಯಕ, ಮನೆಕಟ್ಟುವುದು, ಹುಲ್ಲು ಕೊಯ್ಯುವುದು, ಕಟ್ಟಿಗೆ ತಂದು ಮಾರುವುದು, ನಾವೆ ನಡೆಸುವ ಅಂಬಿಗ ಕಾಯಕ, ನಟುವರ ಮದ್ದಳೇ ಕಾಯಕ, ಬಹುರೂಪದ ಕಾಯಕ, ನೃತ್ಯ, ಸಂಗೀತ, ಇತ್ಯಾದಿ

ಈ ಎಲ್ಲ ಕಾಯಕಗಳೂ ಸಮಾನ ಗೌರವ-ದೈವತ್ವ ಸ್ಥಾನಗಳನ್ನು ಹೊಂದಿದ್ದರಿಂದ ಎಲ್ಲ ಕಾಯಕಜೀವಿ ಶರಣರು ಸರ್ವಾಂಗ ಪರಿಪೂರ್ಣವಾದ ಲಿಂಗವಂತ ಸಮಾಜ-ಸಂಸ್ಕೃತಿ ನಿರ್ಮಿಸಿದರು. ಆದ್ದರಿಂದಲೇ ಇಂದಿಗೂ ಜನಪದವು ಬಸವಣ್ಣನವರನ್ನು ಈ ಕುರಿತು ಸ್ಮರಿಸುತ್ತಿದೆ.

ಕಾಯಕವ ಕಲಿಸುದಕೆ ನಾಯಕನು ಬಸವಣ್ಣ
ಚೆಲ್ಲಿದನು ತಂದು ಶಿವಬೆಳಕ । ನಾಡೊಳಗೆ
ಸೊಲ್ಲೆತ್ತಿ ಜಗವು ಹಾಡುವುದು॥

೨.ಹಡಪದ ಅಪ್ಪಣ್ಣ - ಲಿಂಗಮ್ಮರ ಶರಣದಾಂಪತ್ಯ - ಜೀವನ

ಕಲ್ಯಾಣದಲ್ಲಿ 'ಅನುಭವ ಮಂಟಪ' ಸ್ಥಾಪನೆಗೊಂಡು ಅಲ್ಲಿ ನೂರಾರು ಶರಣ-ಶರಣೆಯರು ತಮ್ಮ ತಮ್ಮ ಕಾಯಕಗಳನ್ನು ನಿರ್ವಹಿಸುತ್ತಾ 'ಅನುಭವ ಮಂಥನ' ಮಾಡುವ ವಿಚಾರವು ಚರಜಂಗಮರ ಮೂಲಕ ನಾಡಿನಾದ್ಯಂತ ಪಸರಿಸುತ್ತಿರಲು ಈ ವಾರ್ತೆಯನ್ನು ಕೇಳಿ ತಿಳಿದ ದಂಪತಿಗಳಾದ ಹಡಪದ ಅಪ್ಪಣ್ಣ ಲಿಂಗಮ್ಮರು ಕಲ್ಯಾಣಕ್ಕೆ ಬರುತ್ತಾರೆ.

ಬಸವಣ್ಣನವರು ಸ್ಥಾಪಿಸಿದ ಲಿಂಗವಂತ ಧರ್ಮದ ಒಂದು ಪ್ರಮುಖ ವೈಶಿಷ್ಟ್ಯವೆಂದರೆ ಸಹಜ-ಸರಳವಾದ ಗೃಹಸ್ಥ ಜೀವನಾದರ್ಶದ ಬದುಕು. ಬಸವಾದಿ ಶರಣರು ತಮ್ಮ ಸಮಕಾಲೀನ ಜೀವನದಲ್ಲಿ ದೇಶದ ಧಾರ್ಮಿಕ ರಂಗದಲ್ಲಿದ್ದಿರಬಹುದಾದ ಅನೀತಿಯುತ, ವಿಕೃತ ಕಾಮಲಾಲಸೆಯ, ವಿಪರೀತ ಭೋಗದ ಸನ್ಯಾಸಿಗಳನ್ನು ಕಂಡಿರಬೇಕು. ಒಂದು ಕಡೆ ಹೆಣ್ಣು ಮಾಯೆ ಎಂದು ಆಧ್ಯಾತ್ಮ ಬಾಳಿಗೆ ಅವಳು ಅಡ್ಡಿ, ಮಲ, ಹೇಯವೆಂದು ತಿಳಿದು ಹೇಡಿಯಂತೆ ಕಾಡು ಸೇರುತ್ತಿದ್ದ ಸನ್ಯಾಸಿಗಳ ವರ್ಗ; ಇನ್ನೊಂದೆಡೆ ಸಾರ್ವಜನಿಕ ರಂಗದಲ್ಲಿ ನೀತಿ-ಧರ್ಮ ಬೋಧಿಸುವ ಸೋಗು ಹಾಕಿ ತಮ್ಮ ಖಾಸಗಿ ಬದುಕಿನಲ್ಲಿ ವ್ಯಭಿಚಾರದ ಬಾಳನ್ನು ಬಾಳುತ್ತಿರುವ ವಿಕೃತಕಾಮಿಗಳಾದ ಕಾವಿಧಾರಿಗಳು; ಮಗುದೊಂದೆಡೆ ಹೆಣ್ಣನ್ನು ಕೇವಲ ಭೋಗವಸ್ತುವೆಂದು ಪರಿಗಣಿಸಿ ಅವಳನ್ನು ಅಡಿಗೆಮನೆ -ಹೆರಿಗೆ ಮನೆಗೆ ಮಾತ್ರ ಮೀಸಲಾಗಿಟ್ಟಿದ್ದಂತಹ ಕರ್ಮಠ ಜನರು; ಇವೆಲ್ಲವುಗಳನ್ನು ಕಂಡು ಬಸವಣ್ಣನವರು ವಿಕಾರ-ವಿಕೃತಭೋಗ ಇವುಗಳನ್ನು ತಮ್ಮ ಧರ್ಮದಲ್ಲಿ ಸೇರಿಸಲೇ ಇಲ್ಲ. ಇಂದ್ರಿಯ ನಿಗ್ರಹ ಮಾಡುತ್ತೇವೆ ಎಂಬ ಭಂಡರ ಮಾತನ್ನು ಖಂಡಿಸುತ್ತಾರೆ.

ಇಂದ್ರಿಯ ನಿಗ್ರಹವ ಮಾಡಿದರೆ ಹೊಂದುವವು ದೋಷಂಗಳು ;
ಮುಂದೆ ಬಂದು ಕಾಡುವವು ಪಂಚೇಂದ್ರಿಯಗಳು ।
ಸತಿಪತಿ ರತಿಸುಖವ ಬಿಟ್ಟರೆ ಸಿರಿಯಾಳ ಚಂಗಳೆಯರು ?
ಸತಿಪತಿ ರತಿಸುಖಭೋಗೋಪಭೋಗ ವಿಳಾಸವ ಬಿಟ್ಟನೇ
ಸಿಂಧುಬಲ್ಲಾಳನು?

ನಿಮ್ಮ ಮುಟ್ಟಿ ಪರಧನ ಪರಸತಿಯರಿಗೆಳೆಸಿದರೆ,
ನಿಮ್ಮ ಚರಣಕ್ಕೆ ದೂರ ಕೂಡಲಸಂಗಮದೇವಾ.

ಆದ್ದರಿಂದ, ಬಸವಾದಿ ಶರಣರು ಸತಿ-ಪತಿ ದಾಂಪತ್ಯ ಜೀವನವನ್ನು ತಿರಸ್ಕರಿಸಲಿಲ್ಲ. ಅದನ್ನು ಪುರಸ್ಕರಿಸಿದರು. ನಿಸರ್ಗದತ್ತವಾಗಿ ಮಾನವರ ಬಾಲ್ಯದಿಂದ ಮುಪ್ಪಾವಸ್ಥೆವರೆಗಿನ ಜೀವನದ ಹಂತಗಳನ್ನು ಸಾತ್ವಿಕ -ನೈತಿಕ ನೆಲಗಟ್ಟಿನ ಮೇಲೆ ಪೂರೈಸಿಕೊಳ್ಳಲು ಧರ್ಮದಲ್ಲಿ ಅವಕಾಶ ಕಲ್ಪಿಸಿದರು.

'ಮನ ಹೆಣ್ಣಿನೊಳಗಾದರೆ ವಿವಾಹವಾಗಿ ಕೂಡುವುದು'ಸಿದ್ಧರಾಮೇಶ್ವರ ಶರಣರ ವಾಣಿಯಿದು. ಯಾವುದೇ ವ್ಯಕ್ತಿಯು ಹೆಣ್ಣನ್ನು ಬಯಸಿದರೆ ಆತನು ವಿವಾಹವಾಗಿ ಅವಳೊಂದಿಗೆ ಜೀವನ ಸಾಗಿಸಬೇಕು. ವಿವಾಹದ ನಂತರ ತನ್ನ ಸತಿಯನ್ನು ಬಿಟ್ಟು ಪರಸ್ತ್ರೀಯರನ್ನು ಬಯಸಬಾರದು ಎಂಬ ನೀತಿ ಶಾಸನ ಮಾಡಿದರು.

ಸತಿ-ಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶಿವಂಗೆ ಎಂದು ಜೇಡರ ದಾಸಿಮಯ್ಯನವರೂ, ದಂಪತಿ ಏಕೋಭಾವವಾಗಬೇಕು ಎಂದು ಪ್ರಭು ದೇವರೂ ನುಡಿದಿದ್ದಾರೆ.

ದಾಂಪತ್ಯ ಬಾಳಿನ ಸತಿಯು ಮೋಕ್ಷಕ್ಕೆ ಬಾಧಕಳು ಎಂಬ 'ವಿತಂಡ ವಾದ'ವನ್ನು ತಿರಸ್ಕರಿಸಿ 'ಸತಿ ಹಿಡಿದೇ ಶರಣರು ಲಿಂಗಾಂಗ ಸಾಮರಸ್ಯ ಪಡೆವರೆಂದು' ಸಾರಿದರು-

ಹುಳಿವಿಡಿದು ಘೃತವ ಕಾಣ್ಬಂತೆ
ಅಕ್ಷರವಿಡಿದು ವಿದ್ಯೆಯನರಿವಂತೆ
ಅನ್ನವ ಭೋಗಿಸಿ ಚೈತನ್ಯವಕೊಂಬಂತೆ
ಕೂಡಲಸಂಗನ ಶರಣರು ಸತಿವಿಡಿದು
ನಿರ್ವಾಣಸತಿ ಕಾಣ್ಬರು ಕೇಳಾ ಪ್ರಭುವೇ.

ಬಸವಾದಿ ಶರಣರು ಭೋಗವನ್ನು ತಿರಸ್ಕರಿಸಲಿಲ್ಲ, ಆದರೆ ವಿಕೃತ ಭೋಗ ಬೇಡೆಂದರು. 'ಮರ್ತ್ಯ ಲೋಕವೆಂಬುದು ಕರ್ತಾರನ ಕಮ್ಮಟ'ವಾಗಿರುವುದರಿಂದ ಇಂದ್ರಿಯ ನಿಗ್ರಹಮಾಡದೇ, ಇಂದ್ರಿಯಗಳನ್ನು ಉದಾತ್ತೀರಕಣಗೊಳಿಸಿ 'ಲಿಂಗಭೋಗೋಪಭೋಗಿ'ಗಳಾದರು.

ಈ ರೀತಿಯಾಗಿ ನೀತಿಯುತ ಸಾತ್ವಿಕ ಸ್ವಾವಲಂಬನೆಯ ಕಾಯಕ ದಾಸೋಹಪೂರ್ಣ ಮಾನವಕುಲಕ್ಕೆ 'ದಾಂಪತ್ಯ ಜೀವನ'ವೇ ಆದರ್ಶವೆಂದು ಬಾಳಿ

ಬದುಕಿದರು. ವೈರಾಗ್ಯ -ವಿರಕ್ತಿ ಎಂಬುದು ಹೊರಗೆ ಧರಿಸುವ ಕೆಂಪು ಕಾವಿ ಬಟ್ಟೆಗಳಲ್ಲಾಗಲಿ, ಜಡೆ-ಮುಡಿ-ಗಡ್ಡಗಳಲ್ಲಾಗಲೀ, ಬೋಳು ತುರುಬಗಳಲ್ಲಾಗಲೀ ಇಲ್ಲ. ಅದು ಮನೋಸ್ಥಿತಿ ಎಂದು ಸಾರಿದರು.

ಪ್ರತಿಯೊಬ್ಬ ಗೃಹಸ್ಥ ದಂಪತಿಗಳು ಸಹಜವಾಗಿ ತಮ್ಮ ಬಾಳಿನಲ್ಲಿ ಮೋಹದಿಂದ -ನಿರ್ಮೋಹತ್ವ, ರಾಗದಿಂದ -ವಿರಾಗತ್ವ, ಕಾಮದಿಂದ-ನಿಃಷ್ಕಾಮವನ್ನು ಹೊಂದಲು ಸುಲಭವೆಂದು ತೋರಿದರು.

ನಿರಂಜನಜ್ಯೋತಿ ನೀಲಮ್ಮ ತಾಯಿಯವರು ತಿಳಿಸುವಂತೆ -

ಪುರುಷನೆನ್ನಲಾಗದು ಬಸವಣ್ಣನ ಎನಗೆ,
ಸ್ತ್ರೀ ಎನ್ನಲಾಗದು ಎನ್ನ ಬಸವಣ್ಣಂಗೆ
ಆನು ಬಸವಣ್ಣಂಗೆ ಶಿಶುವಾದೆ,
ಬಸವಣ್ಣ ಎನಗೆ ಶಿಶುವಾದ.

ಈ ಭಾವ ಶರಣ-ದಾಂಪತ್ಯದ ಬಾಳಿನಲ್ಲಿ ಸಹಜವಾಗಿ ಸಾಧಿಸಲ್ಪಡಬೇಕು. ಆಗ ಗಂಡ -ಹೆಂಡತಿ ಎಂಬ ಉಭಯಭಾವವಳಿದು ತಾಯಿ-ಮಗ, ತಂದೆ-ಮಗಳು ಎಂಬ ಭಾವವುಂಟಾಗುತ್ತದೆ. ಗೃಹಸ್ಥನ ಬಾಳಿನಲ್ಲಿ ಕಾಮವು ಪ್ರೇಮವಾಗಿ -ಪ್ರೇಮವು ವಾತ್ಸಲ್ಯವಾಗಿ -ವಾತ್ಸಲ್ಯ ಭಕ್ತಿಯಾಗಿ ಸಹಜವಾಗಿ ಪರಿವರ್ತನೆ ಹೊಂದುತ್ತದೆಂಬುದನ್ನು ನೂರಾರು ಶರಣರು ತಮ್ಮ ಜೀವನದಲ್ಲಿ ಸಾಧಿಸಿ ತೋರಿದ್ದಾರೆ.

ಸ್ವತಃ ಧರ್ಮಗುರು ಬಸವಣ್ಣನವರೇ ನೀಲಾಂಬಿಕೆ -ಗಂಗಾಂಬಿಕೆಯರೊಂದಿಗೆ ಶರಣ ದಾಂಪತ್ಯ ಬಾಳಿದವರು. ಮೋಳಿಗೆಯ ಮಾರಯ್ಯ ಮಹಾದೇವಮ್ಮ; ಆಯ್ದಕ್ಕಿ ಮಾರಯ್ಯ-ಲಕ್ಕಮ್ಮ, ಸಮಗಾರ ಹರಳಯ್ಯ-ಕಲ್ಯಾಣಮ್ಮ; ಶಿವದೇವ -ಅಕ್ಕನಾಗಮ್ಮ; ಉರಿಲಿಂಗಿಪೆದ್ದಿ-ಕಾಳವ್ವೆ, ಜೇಡರ ದಾಸಿಮಯ್ಯ-ದುಗ್ಗಳಾದೇವಿ; ದಸರಯ್ಯ-ವೀರಮ್ಮ; ಇತ್ಯಾದಿ ದಂಪತಿಗಳು ಆದರ್ಶ ಜೀವನ ಬಾಳಿದವರು.

ಇಂತಹ ಆದರ್ಶ ಶರಣ-ದಾಂಪತ್ಯ ಬಾಳಿಬೆಳಗಿದ ಮಹಾಚೇತನರೇ ಶರಣರು ಹಡಪದ ಅಪ್ಪಣ್ಣ - ಲಿಂಗಮ್ಮರು

ಶರಣ ಹಡಪದ ಅಪ್ಪಣ್ಣ-ಲಿಂಗಮ್ಮರುಗಳು ಹುಟ್ಟಿದ ಊರು ಕಪ್ಪಡಿ ಸಂಗಮ. ಶರಣ ಅಪ್ಪಣ್ಣನವರು 'ಕಪ್ಪಡಿ ಸಂಗಮ' 'ಪ್ರಾಂತದ ಮಾಂಡಲಿಕ' ಅರಸರಾಗಿದ್ದರು ಎಂದು ಪೂಜ್ಯ ಬಸವಪ್ರಿಯ ಅಪ್ಪಣ್ಣ ಸ್ವಾಮಿಗಳು ಬರೆದಿರುತ್ತಾರೆ.

(ಅವಿರಳಜ್ಞಾನಿ ಹಡಪದ ಅಪ್ಪಣ್ಣನವರು ಎಂಬ ಗ್ರಂಥದಲ್ಲಿ) ಲಿಂಗವಂತ ಧರ್ಮದಲ್ಲಿ ಮಾಂಸಪಿಂಡಕ್ಕೆ ಜನ್ಮವಿತ್ತ ತಂದೆ-ತಾಯಿಯತ ಬದಲಾಗಿ, ಮಾಂಸಪಿಂಡವ ಕಳೆದು ಮಂತ್ರಪಿಂಡವ ಮಾಡಿದ, ನರಜನ್ಮವ ತೊಡೆದು ಹರಜನ್ಮವ ಮಾಡಿದ, ಭವಿಯೆಂಬುದ ತೊಡೆದು ಭಕ್ತನೆಂದೆನಿಸಿದ ಸದ್ಗುರುವಿನ ಪರಂಪರೆಯೇ ಉಳಿದು ಬರುತ್ತದೆ. ಬಹುತರವಾಗಿ ಅಲ್ಲಮಾದಿ ಶರಣರು ತಮ್ಮ ವಚನಗಳಲ್ಲಿ ತಮ್ಮ ಬಾಳಿಗೆ ಬೆಳಕನ್ನಿತ್ತ, ಹೊಸ ಪರಂಪರೆಯನ್ನೇ ರೂಪಿಸಿದ ಧರ್ಮಗುರು ಬಸವೇಶ್ವರರನ್ನೇ ಸ್ತುತಿಸಿದ್ದಾರೆ.

'.... ಮಹಾಮಹಿಮ ಸಂಗನಬಸವಣ್ಣ ಎನಗೆಯೂ ಗುರು
ನಿನಗೆಯೂ ಗುರು ಜಗವೆಲ್ಲಕ್ಕೆಯೂ ಗುರು ಕಾಣಾ
ಗುಹೇಶ್ವರಾ' ಎಂದು ಪ್ರಭುದೇವರೂ'.

'... ಕಷ್ಟಕುಲದಲಿ ಹುಟ್ಟಿದ ಕರ್ಮವ ಕಳೆದು ಮುಟ್ಟಿ ಪಾವನವ ಮಾಡಿ ಕೊಟ್ಟನಯ್ಯಾ ಬಸವಣ್ಣನು ಎನ್ನ ಕರಸ್ಥಲಕೆ ಲಿಂಗವನು' ಎಂದು ಶರಣ ಡೋಹರ ಕಕ್ಕಯ್ಯನವರೂ ಸ್ತುತಿಸಿರುವಂತೆ, ಶರಣ ಹಡಪದ ಅಪ್ಪಣ್ಣನವರೂ ಕೂಡ ಶರಣಧರ್ಮದ ಮೂಲಿಗ ಬಸವಣ್ಣನವರನ್ನು ಕೆಳಗಿನಂತೆ ಸ್ತುತಿಸಿದ್ದಾರೆ.

ಎಲ್ಲಾ ಪುರಾತನರ ಶ್ರೀ ಚರಣಕ್ಕೆ ಇಲ್ಲಿರ್ದೇ ಶರಣೆಂದರೆ ಸಾಲದೆ?
ಬಸವಾ, ಬಸವಪ್ಪಾ, ಬಸವಯ್ಯಾ ಶರಣೆಂದರೆ ಸಾಲದೆ!
ಎಲ್ಲರ ಹೃದಯದಲ್ಲಿ ಜ್ಯೋತಿಯಂತೆ ಬೆಳಗುತ್ತಿಪ್ಪ
ಮಹಾಮಹಿಮನಾಗಿ, ಎನಗಿದೇ ದಿವ್ಯ ಮಂತ್ರ.
ಬಸವಪ್ರಿಯ ಕೂಡಲಚೆನ್ನ ಸಂಗಯ್ಯನಲ್ಲಿ
ಬಸವಾ ಬಸವಾ ಶರಣೆಂದರೆ ಸಾಲದೇ !

ಶರಣ ಅಪ್ಪಣ್ಣ - ಲಿಂಗಮ್ಮರುಗಳಿಗೆ ಹೆತ್ತ ತಂದೆ-ತಾಯಿಗಳಿಗಿಂತ ತಮ್ಮ ಅಧ್ಯಾತ್ಮ ಬಾಳಿನ ಗುರುತಂದೆ ಬಸವಣ್ಣ-ಚೆನ್ನಬಸವಣ್ಣ -ಅಲ್ಲಮಾದಿ ಶರಣರೇ ಅವರ ಸರ್ವಸ್ವವಾಗಿದ್ದಾರೆ.

ಶರಣ ಅಪ್ಪಣ್ಣನವರು ಹುಟ್ಟಿದ ಊರಿನ ಬಗ್ಗೆ ವಚನಸಾಹಿತ್ಯದಲ್ಲಿ ಕಾವ್ಯಗಳಲ್ಲಿ, ಶಾಸನಗಳಲ್ಲಿ, ಜಾನಪದದಲ್ಲಿ ಯಾವುದೇ ದಾಖಲೆಗಳು-ಉಲ್ಲೇಖಗಳು ಇಲ್ಲದಿದ್ದರೂ 'ಶಿವಶರಣ ಹಡಪದ ಅಪ್ಪಣ್ಣ ಮತ್ತು ಅವರ ಧರ್ಮ ಪತ್ನಿ ಶಿವಶರಣೆ

ಲಿಂಗಮ್ಮನವರ ವಚನಗಳು' ಎಂಬ 'ವಚನ ರತ್ನಮಾಲಾ'ಗ್ರಂಥ ಸಂಪಾದಿಸಿದ ಡಾ. ಎಚ್. ಸಿದ್ದಪ್ಪನವರು (ಆಂಧ್ರದ ಕರ್ನೂಲ ಜಿಲ್ಲೆಯ ಅದ್ವಾನಿ ತಾಲೂಕಿನ ನದೀಚ್ಯಾಗಿಯವರು) ಮಾತ್ರ 'ಶರಣ ಹಡಪದ ಅಪ್ಪಣ್ಣನವರ ಜನ್ಮಸ್ಥಳ ಮಂಗಳವೇಡೆ' ಎಂದು ತಿಳಿಸುತ್ತಾರೆ. ಈ ಕುರಿತು ಸ್ವತಃ ನಾನು ಡಾ. ಸಿದ್ದಪ್ಪನವರೊಂದಿಗೆ ಧಾರವಾಡದಲ್ಲಿ ದಿ. ೧೩-೭-೧೯೮೮ ರಂದು (ಹಡಪದ ಅಪ್ಪಣ್ಣನವರ ಜಯಂತ್ಯುತ್ಸವ ಕಾಲಕ್ಕೆ) ಚರ್ಚಿಸಿದಾಗ ದಾಖಲೆಗಳು ಇವೆ ಎಂದು ತಿಳಿಸಲಿಲ್ಲ. 'ಜನವಾಡಿಕೆ' ಮಾತ್ರವಿದೆ ಎಂದು ಹೇಳಿದರು.

ಒಟ್ಟಿನಲ್ಲಿ ಬಸವಾದಿ ಶರಣರನ್ನು ಚರಿತ್ರೆಯ ದೃಷ್ಟಿಗಿಂತ ಚಾರಿತ್ರ್ಯ ದೃಷ್ಟಿಯಿಂದ ಅರಿತುಕೊಳ್ಳುವುದು ಅವಶ್ಯವಿದೆ. ಬಸವಾದಿ ಶರಣರೂ ಕೂಡ ಇದನ್ನೇ ಬಲವಾಗಿ ನಂಬಿದವರು.

ಗುರುಕಾರುಣ್ಯ : 'ಅನುಭವ ಮಂಟಪ' ದಿಂದ ಮೂಡಿ ಬಂದ ಲಿಂಗವಂತ ಧರ್ಮದಲ್ಲಿ ಗುರು ಕಾರುಣ್ಯವು ಬಹು ವೈಶಿಷ್ಟ್ಯಪೂರ್ಣವಾಗಿದೆ. ಆಧ್ಯಾತ್ಮ ಸಾಧನೆ ಮಾಡಬೇಕೆಂದು ಬಯಸುವ ಯಾವುದೇ ವ್ಯಕ್ತಿಗೆ ಅರಿವು - ಆಚಾರವುಳ್ಳ ಯೋಗ್ಯ ಸದ್ಗುರುವು ಹಸ್ತ-ಮಸ್ತಕ ಸಂಯೋಗದಿಂದ ದೀಕ್ಷಾತ್ರಯದಿಂದ 'ಇಷ್ಟಲಿಂಗ'ವನ್ನು ಕರುಣಿಸುವನು. ಅಂತಪ್ಪ ಗುರುವನ್ನು ಶರಣರು ಸ್ತುತಿಸುತ್ತಾರೆ. ಆ ಸದ್ಗುರು ತೋರಿದ ಅರಿವಿನ ಶರಣ ಮಾರ್ಗದಲ್ಲಿ ಗುರುರೂಪವೇ ತಾವಾಗಿ ಬಾಳುತ್ತಾರೆ. ಶರಣ ಅಪ್ಪಣ್ಣ ಹಾಗೂ ಶರಣೆ ಲಿಂಗಮ್ಮನವರುಗಳ ಬಾಳು ಬೆಳಗಿಸಿದ ಕರುಣಾಮೂರ್ತಿ ಗುರು ಚೆನ್ನಬಸವಣ್ಣನೇ ಆಗಿದ್ದಾನೆ. ಕೆಲವು ವಚನಗಳಲ್ಲಿ ಚೆನ್ನಮಲ್ಲೇಶ್ವರ ಎಂಬ ಹೆಸರು ಉಲ್ಲೇಖವಾಗಿದ್ದರೂ ಅದು ಚೆನ್ನಬಸವಣ್ಣನವರನ್ನೇ ಕುರಿತಾಗಿದೆಯೆಂಬುದು ಗಮನಾರ್ಹ. ಉದಾಹರಣೆಗೆ-

'....ತಾನು ತಾನಾಗಿಪ್ಪ ಮಹಾಬೆಳಗಿನಲ್ಲಿ ಓಲಾಡಿ ಸುಖಿಯಾದೆನಯ್ಯಾ ಚೆನ್ನಬಸವಣ್ಣನ ಕರುಣದ ಶಿಶುವಾದ ಕಾರಣದಿಂದ.

(ವಿಜಾಪುರದ ಡಾ. ಪಿ. ಜಿ. ಹಳಕಟ್ಟಿಯವರ ಪ್ರತಿ.)

ಶರಣ ಅಪ್ಪಣ್ಣನವರು ತಮ್ಮ ವಚನಾಂಕಿತವನ್ನು 'ಬಸವಪ್ರಿಯ ಕೂಡಲಚೆನ್ನಬಸವಣ್ಣ ' (ಬಸವಪ್ರಿಯ ಕೂಡಲಚೆನ್ನ ಸಂಗಮದೇವ ಎಂದೂ ಇದೆ)ನೆಂದೂ, ಶರಣೆ ಲಿಂಗಮ್ಮನವರು ತಮ್ಮ ವಚನಾಂಕಿತವನ್ನು 'ಅಪ್ಪಣ್ಣಪ್ರಿಯ ಚೆನ್ನಬಸವಣ್ಣ'ನೆಂದೂ ತಿಳಿಸಿದ್ದಾರೆ.

(ಚೆನ್ನಬಸವಣ್ಣ ಅಥವಾ ಚೆನ್ನಮಲ್ಲೇಶ್ವರ ಎಂಬ ವಾದ-ವಿವಾದಕ್ಕಿಂತ ದೀಕ್ಷಾಗುರು ಚೆನ್ನಮಲ್ಲೇಶ್ವರನೆಂದೂ, ಜ್ಞಾನ (ಶಿಕ್ಷಾ) ಗುರು ಚೆನ್ನಬಸವಣ್ಣನೆಂದೂ ಪರಿಗಣಿಸಬಹುದೆಂದು ನನ್ನ ಅನಿಸಿಕೆ.)

ಶರಣರಾದ ಅಪ್ಪಣ್ಣನವರು ತಮಗಾದ ಗುರುಕಾರುಣ್ಯದ ಕುರಿತು ತಮ್ಮದೊಂದು ವಚನದಲ್ಲಿ ಕೆಳಗಿನಂತೆ ಬಹು ಮಾರ್ಮಿಕವಾಗಿ ತಿಳಿಸುತ್ತಾರೆ-

ಅಯ್ಯಾ, ಎನ್ನ ಗುರು ಎನಗೆ ಉಪದೇಶವ ಮಾಡಿದ ಭೇದವ
ಎಲ್ಲ ಗಣಂಗಳು ಕೇಳಿ:
ತ್ರಿವಿಧ ಮಲತ್ರಯಂಗಳ ಹರಿದು,
ಕರ್ಮೇಂದ್ರಿಯಂಗಳ ಜ್ಞಾನೇಂದ್ರಿಯ ಮಾಡಿ,
ಕಾಯ ಜೀವ ಪ್ರಾಣ ಈ ತ್ರಿವಿಧವರತ ಭೇದವನರುಹಿದ
ಉರಸ್ಥಲದ ಪರಂಜ್ಯೋತಿ ಲಿಂಗವ
ಎನ್ನ ಕಲಸ್ಥಲಕ್ಕೆ ಕೊಟ್ಟರು.
ಆ ಗುರು ಕೊಟ್ಟ ಲಿಂಗವೆಂಬ ದರ್ಪಣವ ನೋಡಿ
ಎನ್ನ ಮನವೆಂಬ ಸರ್ಪ ಆ ದರ್ಪಣದಲ್ಲಿ ಲೀಯವಾಯಿತ್ತು.
ಇದು ಕಾರಣ,
ಎನ್ನ ರೂಪೆಲ್ಲ ಉರಿಯುಂಡ ಕರ್ಪೂರದಂತಾಯಿತ್ತು.
ಆಲಿನುಂಗಿದ ಪರಿಮಳದಂತೆ, ಬಯಲು ನುಂಗಿದ
ಬ್ರಹ್ಮಾಂಡದಂತೆ
ಅಂಗ ಲಿಂಗ ಸಂಗ ಸಂಯೋಗವಾದ ಭೇದ.
ಇದ ಹಿಂಗದೆ ಶರಣಸಂಗವ ಮಾಡಿದವರಂಘ್ರಿಯಲ್ಲಿ
ಐಕ್ಯವಾದೆನಯ್ಯಾ.
ಬಸವಪ್ರಿಯ ಕೂಡಲಚೆನ್ನ ಬಸವಣ್ಣಾ,
ಇದನು ಕಂಗಳ ಪಟಲ ಹರಿದ ಲಿಂಗೈಕ್ಯರೇ ಬಲ್ಲರು.

ಗುರುಕರುಣೆ ಅಂದರೆ ಗುರೂಪದೇಶವಾದ ಬಳಿಕ ಪ್ರತಿಯೊಬ್ಬ ಭಕ್ತನ ಜೀವನವೇ ಪರಿವರ್ತನಗೊಳ್ಳುವದು. ಗುರುಮುಟ್ಟಿ ಗುರುವಾಗುತ್ತಾನೆ. ಆಣವ-ಮಾಯಾ-ಕಾರ್ಮಿಕ ಮಲತ್ರಗಳು ತೊಡೆದು, ವಾಕ್-ಪಾಣಿ-ಪಾದ-ಗುದ-ಗುಹ್ಯಗಳೆಂಬ

ಕರ್ಮೇಂದ್ರಿಯಗಳನ್ನು ಗುರುಲಿಂಗ -ಜಂಗಮ-ಲಿಂಗ-ಆಚಾರಲಿಂಗ-ಶಿವಲಿಂಗ-ಪ್ರಸಾದಲಿಂಗ ಸಂಪರ್ಕದಿಂದ ಸಂಸ್ಕರಿಸಿ ಜ್ಞಾನರೂಪವಾಗಿಸಿ, ಕಾಯ-ಜೀವ-ಪ್ರಾಣಗಳ ಭೇದವನರುಹಲು ಇಷ್ಟ-ಪ್ರಾಣ-ಭಾವಲಿಂಗಗಳನು ಸಂಬಂಧಿಸಿ, ಅಂತರಂಗಲಿಂಗದೊಳಗಿಪ್ಪ ಪರಂಜ್ಯೋತಿ ಸ್ವರೂಪವಾಗಿರುವ ನಿರಾಕಾರ ಚೇತನ (ಲಿಂಗವ) ವನ್ನು ಸಾಕಾರಗೊಳಿಸಿ ಅರುಹಿನ ಕುರುಹಾದ ಇಷ್ಟಲಿಂಗವನ್ನು ಕರಸ್ಥಲಕ್ಕೆ (ಬಾಹ್ಯಕ್ಕೆ) ಕೊಡುತ್ತಾನೆ ಸದ್ಗುರುವು.

ಕರಸ್ಥಲದ ಈ ಲಿಂಗವೆಂಬ ದರ್ಪಣದಲ್ಲಿ ಮನವೆಂಬ ಸರ್ಪವು ಲೀಯವಾಯಿತ್ತು ಎಂದರೆ ಮನವು ಲಿಂಗದಲ್ಲಿ ಲೀನವಾಗಿ ಮಹಾಲಿಂಗವೇ ತಾನಾಯ್ತು. ಭಕ್ತಾಂಗವೆಲ್ಲವೂ ಲಿಂಗಾಂಗವಾಯಿತ್ತು ಅಂದರೆ ಉರಿಯುಂಡ ಕರ್ಪುರದಂತೆ ಉರಿಯಲ್ಲಿಯೇ ಕೂಡಿ ಉರಿಯಲ್ಲಿ ಲೀನವಾಯಿತು. ಈ ರೀತಿಯ ಲಿಂಗಾಂಗ ಸಾಮರಸ್ಯದ ಸ್ಥಿತಿಯು ಗುರುಕರುಣೆಯಿಂದ ಸಾಧ್ಯವಾಯಿತು ಎಂದು ಶರಣ ಅಪ್ಪಣ್ಣನವರು ಅರುಹಿದ್ದಾರೆ.

ಶರಣ ಅಪ್ಪಣ್ಣನವರ ಪುಣ್ಯಾಂಗನೆ ಲಿಂಗಮ್ಮ ತಾಯಿಯವರೂ ಕೂಡ ತಮಗಾದ ಗುರುಕರುಣೆಯ ಬಗ್ಗೆ ತಿಳಿಸುತ್ತಾರೆ-

ಅಯ್ಯಾ, ನಾ ಮರ್ತ್ಯದಲ್ಲಿ ಹುಟ್ಟಿ ಕಷ್ಟ ಸಂಸಾರಿ ಎನಿಸಿಕೊಂಡೆ.
ಕತ್ತಲೆಯಲ್ಲಿ ಮುಳುಗಿ ಕರ್ಮಕ್ಕೆ ಗುರಿಯಾಗುತ್ತಿದ್ದಡೆ,
ಹೆತ್ತತಾಯಿ ಎಂಬ ಗುರುಸ್ವಾಮಿ ಎನ್ನ ಕೊರಳಿಗೆ
ಗಂಡನೆಂಬ ಲಿಂಗವ ಕಟ್ಟಿದನು.
ತಂದೆಯೆಂಬ ಜಂಗಮಲಿಂಗವು ಎನ್ನ ಪ್ರಾಣಕ್ಕೆ
ಪ್ರಸಾದವ ಊಡಿದನು.
ಪ್ರಾಣಕ್ಕೆ ಪ್ರಸಾದವನೂಡಲಾಗಲೇ ಕತ್ತಲೆ ಹರಿಯಿತ್ತು.
ಕರ್ಮ ಹಿಂಗಿತ್ತು, ಮನ ಬತ್ತಲೆಯಾಯಿತ್ತು.
ಚಿತ್ತ ಸುಯಿದಾನವಾಯಿತ್ತು; ನಿಶ್ಚಿಂತವಾಯಿತ್ತು
ನಿಜವನೆಮ್ಮಿ ನೋಡುವನ್ನಕ್ಕ,
ಎನ್ನ ಅತ್ತೆ ಮಾವರು ಅರತುಹೋದರು.
ಅತ್ತಿಗೆ ನಾದಿನಿಯರು ಎತ್ತಲೋಡಿ ಹೋದರು.

ಸುತ್ತಲಿರುವ ಬಂಧುಗಳೆಲ್ಲಾ ಬಯಲಾದರು.
ಎನ್ನ ತಂದೆ -ತಾಯಿ ಕಟ್ಟಿದ ಚಿಕ್ಕಂದಿನ ಗಂಡನ
ನೋಡುವ ನೋಟ ಹೋಗಿ ಎನ್ನ ಮನಕ್ಕೆ ಸಿಕ್ಕಿತ್ತು;
ಅಂಗ -ಲಿಂಗವೆಂಬ ಉಭಯವಳಿಯಿತ್ತು; ಸಂಗಸುಖ ಹಿಂಗಿತ್ತು.
ಮಂಗಳದ ಮಹಾಬೆಳಗಿನಲ್ಲಿ ಓಲಾಡಿ
ಸುಖಿಯಾದೆನಯ್ಯಾ, ಅಪ್ಪಣ್ಣಪ್ರಿಯ ಚೆನ್ನಬಸವಣ್ಣಾ.

ಶರಣೆ ಲಿಂಗಮ್ಮ ತಾಯಿಯೂ ಕೂಡ ಗುರುಕರುಣೆಯಿಂದಾಗುವ ಮಹತ್ತರವಾದ ಪರಿವರ್ತನೆ, ಅದರ ಪರಿಣಾಮವನ್ನು ಬಹು ಮಾರ್ಮಿಕವಾಗಿ (ಬೆಡಗಿನ ರೀತಿಯಿಂದ) ಅರುಹಿದ್ದಾರೆ.

ಮರ್ತ್ಯದಲ್ಲಿ ಅಂದರೆ ತಂದೆ-ತಾಯಿಗಳ ಉದರದಿಂದ ಮಾಂಸಪಿಂಡವಾಗಿ ಜನಿಸಿ, ಅಜ್ಞಾನದಲ್ಲಿ ಸಿಲುಕಿ ಕರ್ಮಕ್ಕೆ ಗುರಿಯಾಗಿ ಜೀವನವನ್ನೇ ವ್ಯರ್ಥ ಮಾಡಿಕೊಳ್ಳುತ್ತಿದ್ದೆ, ಆದರೆ ಗುರುಸ್ವಾಮಿ ಎಂಬ ಆಧ್ಯಾತ್ಮ ತಾಯಿಯು 'ಇಷ್ಟಲಿಂಗ'ವೆಂಬ ಲಿಂಗಪತಿಯನ್ನು ಕಟ್ಟಿದನು. ಅನುಭಾವಿಯಾದ ಜಂಗಮವು ತಂದೆಯಾಗಿ ಭಾವಕ್ಕೆ ಪರಿಣಾಮ (ಭಕ್ತಿ) ಪ್ರಸಾದವನುಣಿಸುವನು. ಜಂಗಮಾನುಭಾವದಿಂದ ಅಜ್ಞಾನ-ಮರವೆಯೆಂಬುದು ಹರಿದು ಕರ್ಮ ಹಿಂಗಿ ನಿರ್ಮಲ-ನಿಶ್ಚಯವಾಯಿತ್ತು, ಚಿತ್ತವು ನಿಶ್ಚಿಂತ ನಿರ್ಮಳವಾಯಿತ್ತು. ಕಲಸ್ಥಲದ ಲಿಂಗಚೇತನವ ಕಂಗಳತುಂಬಿ ನೋಡುತ್ತಾ ನೋಡುತ್ತಾ ಅತ್ತೆ-ಮಾವಂದಿರೆಂಬ ಕರ್ಮೇಂದ್ರಿಯ-ಜ್ಞಾನೇಂದ್ರಿಯಗಳು. ಅತ್ತಿಗೆ-ನಾದಿನಿಯರೆಂಬ ವ್ಯಸನ-ಮದಗಳು, ಅರಿಷಡ್ವರ್ಗವೆಂಬ, ಅಂಗ-ಲಿಂಗ (ಸತಿ-ಪತಿ) ಯೆಂಬ ಭಿನ್ನತೆ ಅಳಿದು ಎಲ್ಲವೂ ಲಿಂಗಮಯವಾಗಿ, ಆ ಲಿಂಗದ ಮಂಗಳದ ಮಹಾಬೆಳಗಿನಲ್ಲಿ ಸುಖಿಯಾದೆನೆಂದು ಲಿಂಗಮ್ಮ ತಾಯಿಯವರು ಅರುಹಿದ್ದಾರೆ.

ಈ ರೀತಿಯಾಗಿ ಆಧ್ಯಾತ್ಮ ಸಾಧನೆಗೈಯುತ್ತ, ಅನುಭವಮಂಟಪದಲ್ಲಿ ಅನುಭಾವ ಮಾಡುತ್ತಾ ಧರ್ಮಗುರು ಬಸವಣ್ಣನವರ ಮಹಾಮನೆಯಲ್ಲಿ ಊಳಿಗವ (ಕಾಯಕವ) ಮಾಡುತ್ತಾ ಬಸವಣ್ಣನವರ ಪ್ರತಿಯೊಂದು ಬಾಳಿನ ಕ್ಷಣಗಳಲ್ಲಿ ತಮ್ಮ ಸಹಕಾರ ನೀಡಿದ್ದಾರೆ, ಸೇವೆಗೈದಿದ್ದಾರೆ. **ಕಾಯಕ :** ಶರಣ ಅಪ್ಪಣ್ಣನವರ ಕಾಯಕ ಯಾವುದು? ಎಂಬ ಬಗ್ಗೆ ಇಂದಿಗೂ ವಿದ್ವಾಂಸರಲ್ಲಿ ಒಮ್ಮತವಿಲ್ಲ, ಚರ್ಚೆ ಸಾಗಿಯೇ ಇದೆ.

ಸಾಮಾನ್ಯವಾಗಿ ಪ್ರತಿಯೊಬ್ಬ ಶರಣರಿಗೆ, ಅವರ ಹೆಸರಿನ ಹಿಂದೆ ಅವರ ಕಾಯಕದ ಹೆಸರು ಉಲ್ಲೇಖಗೊಂಡಿರುವುದನ್ನು ಕಾಣುತ್ತೇವೆ. ಹಾಗೆಯೇ ಶರಣ ಅಪ್ಪಣ್ಣನವರಿಗೆ 'ಹಡಪದ' ಎಂಬ ಕಾಯಕದ ಶಬ್ದವು ಜೋಡಣೆಯಾಗಿರಬಹುದೆ? ಎಂಬ ವಿಚಾರವು ಉತ್ಪನ್ನವಾಗುವುದು. 'ಹಡಪ' ಎಂಬ ಶಬ್ದದ ಅರ್ಥ ಎರಡು ಬಗೆಯಾಗಿದೆ. ಕನ್ನಡ ನಿಘಂಟುವಿನಲ್ಲಿ ಹಡಪ ಎಂದರೆ ಕ್ಷೌರಿಕನ ಸಲಕರಣೆಯ ಚೀಲ, ಕೈಚೀಲ, ಕೈಪೆಟ್ಟಿಗೆ, ಅಡಿಕೆಯ ಚೀಲ, ಸಂಚಿ ಎಂದು ಹೆಸರಿದೆ. ಹಡಪಿಗ ಎಂದರೆ ಕ್ಷೌರಿಕ, ನಾಯಿಂದ ಎಂಬ ಅರ್ಥವಿದೆ. ಇಂದಿಗೂ ಕರ್ನಾಟಕದಲ್ಲಿ 'ಹಡಪದ' ಎಂಬ ಹೆಸರಿನ ಲಿಂಗವಂತ ಜನಾಂಗ ಮುಂದುವರೆದುಕೊಂಡು ಬಂದಿದೆ. ಬಹುತರವಾಗಿ ಈ ಹಡಪದ ಜನಾಂಗದವರು ಕ್ಷೌರಿಕ ವೃತ್ತಿಯನ್ನೇ ಕೈಗೊಂಡಿದ್ದಾರೆ. ಹಡಪದ, ಹಡಪಿಗ, ಕ್ಷೌರಿಕ, ನಾಯಿಂದ, ನಾವುದ, ಕಷ್ಟ ಮಾಡುವವರು (ಕಟಿಂಗ್) ಪದಗಳಿಂದ ಈ ಕಾಯಕದ ಜನರನ್ನು ಕರೆಯಲಾಗುತ್ತಿದೆ. ಅಂದಾಗ ಹಡಪದ ಎಂಬುದು ಕ್ಷೌರಿಕ ವೃತ್ತಿಯ ಹೆಸರೇ ಹೊರತು ಎಲೆ-ಅಡಿಕೆ ಕೊಡುವ ವೃತ್ತಿಯ ಹೆಸರಾಗಲಾರದು ಎಂದೇ ತೋರುತ್ತದೆ.

ಬಹುಶಃ ಅಪ್ಪಣ್ಣನವರು ಪ್ರಧಾನಮಂತ್ರಿಯ ಮನೆಯ ಕ್ಷೌರಿಕ (ನಾಯಿಂದ) ರಾಗಿರಬಹುದು. ಬಸವಣ್ಣನವರ ಹಾಗೂ ಅವರ ಮಹಾಮನೆಗೆ ಅತಿಥಿಗಳಾಗಿ ಬರುವ ಶರಣಗಣಂಗಳ ಕ್ಷೌರ ಮಾಡುವ ಕಾಯಕ ಮಾಡುತ್ತಿದ್ದಿರಬೇಕು. ಕಾಯಕದ ಸಮಯ ಮುಗಿದ ನಂತರ ಬರಹೋಗುವ ಶರಣರ ಆದರೋಪಚಾರಣೆ ಹಾಗೂ ಬಸವಣ್ಣನವರ ಅಂತರಂಗದ ಸಲಹೆಗಾರ, ಆಪ್ತಕಾರ್ಯದರ್ಶಿಯಾಗಿಯೂ ಕಾರ್ಯ ನಿರ್ವಹಿಸುತ್ತಿದ್ದರೆನ್ನಬಹುದು. 'ಹಡಪದ' ಎಂಬ ಕಾಯಕದ ಹೆಸರನ್ನುಳ್ಳ ಒಬ್ಬಿಬ್ಬರು ಶರಣರು ವಚನಕಾರರಾಗಿದ್ದಾರೆ- ಹಡಪದ ರೇಚಣ್ಣ ಹಾಗೂ (ಹಡಪದ ಕಾಯಕದ) ಕನ್ನಡಿ ಕಾಯಕದ ಅಮ್ಮಿದೇವಯ್ಯ. ಹಡಪದ ಅಪ್ಪಣ್ಣನವರ ವಚನಗಳಲ್ಲಾಗಲೀ ಅಥವಾ ರೇಚಣ್ಣನವರ ವಚನಗಳಲ್ಲಾಗಲೀ ನಾಯಿಂದ ಕಾಯಕದ ಉಪಕರಣಗಳ (ಸಾಮಾನುಗಳ) ಉಲ್ಲೇಖವೇ ಬರುವುದಿಲ್ಲ. ಆದರೆ ಶಟಣ ಅಮ್ಮಿದೇವಯ್ಯನ ವಚನಗಳಲ್ಲಿ ಮಾತ್ರ ಈ ಕಾಯಕದ ಸಲಕರಣೆಗಳ ಉಲ್ಲೇಖ ಸ್ಪಷ್ಟವಾಗಿ ಇದೆ. ಉದಾಹರಣೆಗೆ ಕೆಳಗಣ ಒಂದು ವಚನವನ್ನು ಗಮನಿಸಬಹುದು.

ಹಿಡಿಯಿಲ್ಲದ ಶಸ್ತ್ರ, ಕೀಲಿಲ್ಲದ ಕತ್ತರಿ
ಉಭಯ ಒಡಗೂಡದ ಚಿಮ್ಮುಟ, ರೂಹಿಲ್ಲದ ಚಣ

ಹಲ್ಲಿಲ್ಲದ ಹಣಿಗೆ, ಮಲವಿಲ್ಲದ ಬೆಳಗಿನ ಮುಕುರವ ಹಿಡಿದು
ಶರಣರೆಲ್ಲರಡಿವಿಡಿದಾಡ ಬಂದೆ.
ಚೆನ್ನಬಸವಣ್ಣಂಗೆ ಭೃತ್ಯನಾಗಿ, ಶರಣತಲೆಗೆ ಲೆಂಕನಾಗಿ
ಸತ್ಯಗುರುಚರದ ಕರ್ತೃಸ್ವರೂಪಕ್ಕೆ ಡಿಂಗರಿಗ
ಉಭಯ ಡಿಂಗರಿಗರ ಪ್ರತಿ ಡಿಂಡಿಗರಿಗರ ಕಂದನೆಂದು
ಪ್ರತಿಪಾಲಿಸಿಕೋ
ಚೆನ್ನಬಸವಣ್ಣಪ್ರಿಯ ಕಮಳೇಶ್ವರ ಲಿಂಗಾ.

ಆದರೆ ಶರಣ ಅಪ್ಪಣ್ಣನವರ ವಚನಗಳಲ್ಲಿ ಮಾತ್ರ ಈ ತೆರನಾದ ಕಾಯಕಕ್ಕೆ ಸಂಬಂಧಿಸಿದ ಯಾವುದೇ ಉಲ್ಲೇಖಗಳು ಇಲ್ಲ. ಬನವಾಸಿಯಲ್ಲಿ ಕೆತ್ತಲಾಗಿರುವ ಕಲ್ಲಿನ ಚಿತ್ರಗಳಲ್ಲಿ ಹಡಪದ ಅಪ್ಪಣ್ಣನವರ ಹೆಸರಿನ ಭಾವಚಿತ್ರದಲ್ಲಿ ಮಾತ್ರ ಒಬ್ಬ ವ್ಯಕ್ತಿಯ ರೂಹು ಇದ್ದು ಹೆಗಲಿಗೆ ಒಂದು ಚೀಲ ಹಾಕಲಾಗಿದೆ. ಬಹುಶಃ ಅಂದಿನ ಕಾಲದಲ್ಲಿ ಚೀಲದಲ್ಲಿ, ಅದೇ ತೆರನಾದ ಚೀಲಗಳಲ್ಲಿ ಕ್ಷೌರಿಕ ಕಾಯಕದ ಸಲಕರಣೆಗಳನ್ನು ಹಾಕಿಕೊಂಡು ಕಾಯಕಕ್ಕೆ ಹೋಗಿ ಬರುತ್ತಿದ್ದರೇನೋ! ಇತ್ತೀಚೆಗೆ ಹಾನಗಲ್ಲ ಮಠದಲ್ಲಿ ಸಂಗ್ರಹಿಲ್ಪಟ್ಟಿರುವ ಸುಮಾರು ೫೦ ಜನ ಶರಣರ ತೈಲಚಿತ್ರಗಳ ಪೈಕಿ ಹಡಪದ ಅಪ್ಪಣ್ಣನವರದು ಎನ್ನಲಾದ ಭಾವಚಿತ್ರದಲ್ಲಿ ಕೈಯಲ್ಲಿ ಬಿದಿರಿನ ಬುಟ್ಟಿಯಂತಹ ಸಣ್ಣಮುಚ್ಚಳದ ಬುಟ್ಟಿ ಇದೆ. ಅಪ್ಪಣ್ಣನವರ ವೇಷ-ಭೂಷಣ ಇಂದಿನ ಮಠಗಳಲ್ಲಿರುವ ಮರಿದೇವರುಗಳು ಹಾಕುವಂತೆ ಕಾವಿಬಣ್ಣದ ಕಿವಿ ಟೋಪಿ, ಉದ್ದ ಭಗವಾ (ನಿಲುವಂಗಿ) ಇದೆ. ಈ ಚಿತ್ರ ಸುಮಾರು ೧೫೦ ರಿಂದ ೨೦೦ ವರುಷಗಳದ್ದೆಂದು ಹೇಳಲಾಗುತ್ತಿದೆ. ಅಪ್ಪಣ್ಣ ಶರಣರು ಗೃಹಸ್ಥರು ಮೇಲಾಗಿ ಶರಣರು ಕಾವಿ ಧರಿಸಲಿಲ್ಲ. ಇದು ಕೇವಲ ಈ ಚಿತ್ರ ಬರೆಸಿದ ಮಠಾಧೀಶರ ಅಥವಾ ಬರೆದ ಕಲಾವಿದನ ಊಹೆ ಮಾತ್ರ ಎನ್ನಬಹುದು. ಹಡಪ ಎಂದರೆ ಎಲೆ-ಅಡಿಕೆ ಚೀಲ (ಸಂಚಿ) ಎಂಬ ಅರ್ಥಮಾಡಿಕೊಂಡು ಈ ಚಿತ್ರ ಬರೆದಿರಬಹುದೆಂದೆನಿಸುತ್ತದೆ. ಸಧ್ಯಕ್ಕೆ ಈ ಎರಡನ್ನು ಹೊರತುಪಡಿಸಿ ಮತ್ತ್ಯಾವ ದಾಖಲೆಗಳೂ ಸಿಗಲಾರವು. ಇವೂ ಕೂಡ ಇತ್ತೀಚಿನ ಕಲಾವಿದರ ಕಾಯಕ ಕಲ್ಪನೆಯೇ ಇರಬಹುದಷ್ಟೇ. ಶರಣ ಅಪ್ಪಣ್ಣನವರ ಒಂದು ವಚನದಲ್ಲಿ ಮಾತ್ರ 'ಹಡಪಿಗ' ಎಂಬ ಶಬ್ದ ಬಳಕೆಯಾಗಿದೆ, ಈ ವಚನ ಹೀಗಿದೆ-

ದೇವ ದೇವ ಮಹಾ ಪ್ರಸಾದ ......
ಹಣೆಯ ಹೊಣೆಯ ತೋರಿ ಉದರವ ಹೊರೆವ
ನಿಮ್ಮ ಮರೆಯಲಡಗಿಪ್ಪ ಹಡಪಿಗ ನಾನಯ್ಯ .....

ಈ ವಚನದಲ್ಲಿ 'ಹಡಪಿಗ' ಎಂಬ ಬಳಕೆಯ ಪೂರ್ವದಲ್ಲಿ 'ಹಣೆಯ ಹೊಣೆಯ ತೋರಿ ಉದರವ ಹೊರೆವ ನಿಮ್ಮ ಮರೆಯಲಿಪ್ಪ' ಎಂಬ ಕರ್ತವ್ಯ ಸೂಚಕ ಭಾವವುಳ್ಳ ವಿಚಾರವು ಅಡಕವಾಗಿದೆ. ಅಂದರೆ ತನ್ನ ಕರ್ತವ್ಯದ ಜವಾಬ್ದಾರಿಯನ್ನು ನಿಮಗೆ ತೋರುತ್ತ (ಭಾರವನ್ನು ನಿಮ್ಮ ಮೇಲೆಯೇ ಹಾಕಿ) ನನ್ನ ಹೊಟ್ಟೆ ತುಂಬಿಸಿಕೊಳ್ಳುವ ಸಲುವಾಗಿ ನಿಮ್ಮಗಳ ಬೆನ್ನಿನ ಆಶ್ರಯದಲ್ಲಿರುವ 'ಹಡಪಿಗ ನಾನು' ಎಂದಿದ್ದಾರೆ ಅಪ್ಪಣ್ಣನವರು. ಒಟ್ಟಿನಲ್ಲಿ ಅಪ್ಪಣ್ಣನವರು ಹಡಪದ ಎಂಬ ಕಾಯಕದ ಸಮಾಜಕ್ಕೆ ಸೇರಿರುವ ಅಥವಾ ಸ್ವತಃ ಹಡಪದ (ಕ್ಷೌರಿಕ) ಕಾಯಕ ಮಾಡುವ ವ್ಯಕ್ತಿಯೇ ಆಗಿದ್ದಾರೆನ್ನಬಹುದು. ಸ್ಪಷ್ಟ ದಾಖಲೆಗಳು ಸಿಗುವವರೆಗೆ ಈ ವಾದ ವಿವಾದಗಳಿಗೆ ಮುಕ್ತಿಯಿಲ್ಲವೆನ್ನಬಹುದು.

ಇಂತಹ ಶರಣ ಅಪ್ಪಣ್ಣನವರನ್ನು ಬಸವಣ್ಣನವರು ಸದಾಕಾಲ ತಮ್ಮ ಹತ್ತಿರದಲ್ಲಿ, ತಮ್ಮ ಮಹಾಮನೆಯಲ್ಲಿಯೇ ಇರಿಸಿಕೊಂಡಿದ್ದಕ್ಕೆ ಎರಡು ಕಾರಣಗಳನ್ನು ಗುರುತಿಸಬಹುದು. ಅಪ್ಪಣ್ಣನವರು ತುಂಬಾ ಚುರುಕು ಬುದ್ಧಿಯ, ಆಳ ಅನುಭಾವದ, ಸೂಕ್ಷ್ಮಮತಿಯುಳ್ಳ ವಿನಯವಂತ ವ್ಯಕ್ತಿಯಾಗಿದ್ದರು. ಎರಡನೆಯದಾಗಿ ಬಸವಪೂರ್ವದ ಸಮಾಜ ಜೀವನದಲ್ಲಿ ಕ್ಷೌರಿಕ ವೃತ್ತಿ ಮಾಡುವವರನ್ನು ಕೀಳೆಂದು ಪರಿಗಣಿಸುತ್ತಿದ್ದ ಕಾಲವದು. ಉಚ್ಚ ಕುಲದವರೆಂಬುವ ಜನರು ಬೆಳಿಗ್ಗೆದ್ದು ತಮ್ಮ ಯಾವುದೇ ಕೆಲಸ-ಕಾರ್ಯಗಳಿಗೆ ಹೋಗುವಾಗ ಎದುರಿಗೆ ಕ್ಷೌರಿಕ ವೃತ್ತಿಯ ಹಡಪಿಗರು ಬಂದರೆ 'ಅಯ್ಯೋ ಇವನೆಲ್ಲಿಂದ ಬಂದನಪ್ಪಾ,. ಮುಂಜಾನೆ ಎದ್ದು! ಇಂದು ನಮ್ಮ ಕೆಲಸವೆಲ್ಲಾ ಹಾಳಾದಂತೆಯೇ !! ಎಂದು ಅನ್ನುವ ಅಜ್ಞಾನಿಗಳನ್ನು ಸಮಾಜದಲ್ಲಿ ಅಲ್ಲಲ್ಲಿ ಕಾಣುತ್ತೇವೆ. ಆದರೆ ಬಸವಣ್ಣನವರು ಈ ಕಾಯಕದ ಬಗೆಗಿದ್ದ ಕೀಳರಿಮೆಯನ್ನು ಹೋಗಲಾಡಿಸಿ ಹಡಪದ ಜನಾಂಗಕ್ಕೆ ಇಷ್ಟಲಿಂಗ ಸಂಸ್ಕಾರವನಿತ್ತು ಅವರನ್ನೂ ಲಿಂಗ ಭಕ್ತರನ್ನಾಗಿ ಮಾಡಿದರು.

'ಕಂಡ ಭಕ್ತಂಗೆ ಕೈಮುಗಿಯುವಾತನೇ ಭಕ್ತ' ಅಂದರೆ ಬೆಳಗಿನ ಅಂದರೆ ಬೆಳಗಿನ ಜಾವದಲ್ಲಿ ಅಂಗದ ಮೇಲೆ ಲಿಂಗ, ರುದ್ರಾಕ್ಷಿ, ವಿಭೂತಿ ಧರಿಸಿರುವ ಯಾವುದೇ ಕಾಯಕದ ವ್ಯಕ್ತಿ ಕಂಡರೂ ಆತನನ್ನು 'ಶರಣೆಂದು' ಕೈಮುಗಿಯಬೇಕೆಂದು ಅರುಹಿದ್ದಾರೆ. ಅಷ್ಟೇ ಅಲ್ಲದೇ-

'ದೇವ ಸಹಿತ ಭಕ್ತ ಮನೆಗೆ ಬಂದರೆ
ಕಾಯಕವಾವುದೆಂದು ಬೆಸಗೊಂಡಡೆ
ನಿಮ್ಮಾಣೆ, ನಿಮ್ಮ ಪ್ರಮಥರಾಣೆ, ತಲೆದಂಡ ತಲೆದಂಡ'

ಎಂದು ಎಚ್ಚರಿಸಿದ್ದಾರೆ. ಆದ್ದರಿಂದಲೇ ಶರಣ ಅಪ್ಪಣ್ಣ ಹಾಗೂ ಲಿಂಗಮ್ಮನವರನ್ನು ತಮ್ಮ ಮನೆಯಲ್ಲಿಯೇ ಕಾಯಕವಿತ್ತು ಗೌರವಿಸಿದ್ದರೆಂದು ಕಂಡುಬರುತ್ತದೆ. ಒಟ್ಟಿನಲ್ಲಿ ಧರ್ಮಪಿತ ಬಸವಣ್ಣನವರ ಮಹಾಮನೆಯ ಕಾಯಕ ದಾಸೋಹದಲ್ಲಿ ಈ ಶರಣದಂಪತಿಗಳು ತಮ್ಮನ್ನು ತಾವೇ ಅರ್ಪಿಸಿಕೊಂಡು ಮಹಾನುಭಾವಿಗಳ ಸಂಗದಲ್ಲಿದ್ದು ಮಹಾನುಭಾವಿಗಳೇ ಆಗಿದ್ದರೆಂಬುದು ದಂಪತಿಗಳೀರ್ವರ ಸಾಧನೆ-ಸಿದ್ಧಿಗಳಿಂದ, ಅನುಭಾವದ ನಿಲುವಿನಿಂದ ಗೊತ್ತಾಗುತ್ತದೆ. ಆದ್ದರಿಂದಲೇ ಅಪ್ಪಣ್ಣನವರು ಧರ್ಮಗುರು ಬಸವಣ್ಣನವರ ಸೇವೆಯಲ್ಲಿ ತಮ್ಮನ್ನು ತಾವೇ ಸರ್ವಾರ್ಪಣ ಭಾವದಿಂದ ಅರ್ಪಿಸಿಕೊಂಡು ಶಬ್ದ ಮುಗ್ಧರಾಗಿ ನುಡಿದಿದ್ದಾರೆ.

ಎನ್ನ ಆಚಾರ ವಿಚಾರ ಬಸವಣ್ಣಂಗರ್ಪಿತವಾದವು
ಎನ್ನ ಅವಧಾನ ಅನುಭಾವ ಬಸವಣ್ಣಂಗರ್ಪಿತವಾಗವು.
ಎನ್ನ ಸರ್ವಾಚಾರ ಸಂಪತ್ತು ಬಸವಣ್ಣನಲ್ಲಿ ವೇದ್ಯವಾಯಿತ್ತು.
ಬಸವಪ್ರಿಯ ಕೂಡಲ ಚೆನ್ನಸಂಗಮದೇವರಲ್ಲಿ
ನಿಜನಿವಾಸಿಯಾಗಿರ್ದೆನು. ಅಲ್ಲದೇ,
ಎನ್ನ ತನು ನಿಮ್ಮ ಸೇವೆಯಲ್ಲಿ ಸವೆದು,
ಎನ್ನ ಮನ ನಿಮ್ಮ ನೆನಹಿನಲ್ಲಿ ಸವೆದು,
ಎನ್ನ ಅರಿವು ನಿಮ್ಮ ಘನದೊಳಗೆ ಸವೆದು,
ನಿಶ್ಚಲ ನಿಜೈಕ್ಯವಾಗಿ
ಬಸವಪ್ರಿಯ ಕೂಡಲಚೆನ್ನಸಂಗಯ್ಯಾ
ನೀ ನಾನೆಂಬುದ ಏನಾಯಿತ್ತೆಂದರಿಯೆ.

ಈ ರೀತಿಯಾಗಿ ಬಸವಮಹಾಗುರುವಿನ ಸೇವೆಯಲ್ಲಿ ತನ್ನ ಬಾಳನ್ನೇ ತೇಯ್ದುಕೊಂಡ ಮಹಾಶರಣ ಅಪ್ಪಣ್ಣ ಹಾಗೂ ಶರಣಗಣ ತಿಂಥಿಣಿಯ ದಾಸೋಹ-ಅನುಭಾವ ಕಾಯಕದದಲ್ಲಿ ತನ್ನ ತನು-ಮನ-ಭಾವಗಳನ್ನು ಸವೆಸಿದ ಮಹಾಶರಣೆ ಲಿಂಗಮ್ಮನವರ 'ಅನುಭಾವ ಸಂಪತ್ತಿ' ಬಹು ಉನ್ನತಮಟ್ಟದ್ದಾಗಿದೆ.

೩. ಶರಣ ಅಪ್ಪಣ್ಣನವರ ಅನುಭಾವ
(ಸಾಧನೆ-ಸಿದ್ಧಿ)

'ಎನ್ನ ಮಹಾತ್ಮನ ಚೇತನನಯ್ಯಾ ನಿಜಸುಖಿ ಅಪ್ಪಣ್ಣನು' ಎಂದು ಶರಣ ಮರುಳಶಂಕರ ದೇವರು ಶರಣ ಹಡಪದ ಅಪ್ಪಣ್ಣನವರ ನಿಲವನ್ನು ಸ್ತುತಿಸಿರುವುದನ್ನು ಕಂಡಾಗ ಅಪ್ಪಣ್ಣನವರ ಅನುಭಾವದ ನಿಲುವು ಅರ್ಥವಾಗದೇ ಇರದು.

ಸ್ವತಃ ಅಪ್ಪಣ್ಣ ಶರಣರೇ ತಮ್ಮದೊಂದು ವಚನದಲ್ಲಿ ಹೇಳುವಂತೆ -

ಕೀಡೆ ತುಂಬಿಯ ಬಿಡದೆ ನೆನೆಯೇ
ನೋಡಲಾಕ್ಷಣ ತುಂಬಿಯಾಗಿಹುದು.
ರೂಢಿಯೊಳು ಅಗಮ್ಯ ಶರಣರ ಪಾದವೇ ಗೂಡಾಗಿ ನಿಂದಿರೆ,
ಬಸವಪ್ರಿಯ ಕೂಡಲ ಚೆನ್ನಸಂಗನ ಬಸವ ತಾನೇ.

ಅಂದರೆ, ಕೀಡೆಯು ತುಂಬಿಯ ಸಂಪರ್ಕದಿಂದಾಗಿ ಅದನ್ನು ನೆನೆ ನೆನೆದು ಕೊನೆಗೆ ತುಂಬಿಯೇ ತಾನಾಗಿ ಮಾರ್ಪಡುವದು. ಅದೇ ರೀತಿಯಲ್ಲಿ ಬಸವಾದಿ ಶರಣರ ಅರಿವು- ಆಚಾರಗಳ ಸಂಗದಲ್ಲಿ ಸದಾಕಾಲವಿದ್ದರೆ ಆ ಶರಣ ಸ್ವರೂಪವೇ ತಾನಾಗಿ ನಿಂತೆ ಎಂಬ ಅನುಭಾವ ವ್ಯಕ್ತಪಡಿಸಿದ್ದಾರೆ. ಇದು ಶರಣ ಅಪ್ಪಣ್ಣನವರ ವಿನಯ.

ಇಂತಹ ಸದುವಿನಯದ ಅಪ್ಪಣ್ಣ ಶರಣ, ಸದುವಿನಯದ ಸಾಕಾರ ಮೂರ್ತಿ ಬಸವ ಮಹಾನುಭಾವರ ಸಂಪರ್ಕದಲ್ಲಿದ್ದು ಗುರುಸ್ವರೂಪವೇ ತಾವಾಗಿದ್ದಾರೆ.

ಒಬ್ಬ ಅನುಭಾವಿ ಕೇವಲ ತಾನೊಬ್ಬನೇ ದಿವ್ಯತೆಯನ್ನು ಸಾಧಿಸಿದರೆ ಸಾಲದು, ತನ್ನೊಂದಿಗೆ ಸಮಾಜವನ್ನೂ ಮೇಲೆತ್ತಬೇಕು. ಸಮಾಜ ಜೀವನವನ್ನು ಹಸನಾಗಿಬೇಕಾಗುತ್ತದೆ. ಆದ್ದರಿಂದಲೇ ಶರಣ ಅಪ್ಪಣ್ಣನವರು ಅನುಭಾವ ಸಾಧನೆಯ ಬಗ್ಗೆ ಎಚ್ಚರಿಸಿರುತ್ತಾರೆ-

ಸಾವಾಗ ದೇವನೆಂದರೆ ಸಾವು ಬಿಡುವದೆ ?
ಇದಾವ ಮಾತೆಂದು ನುಡಿವಿರಿ ಎಲೆ ಅಣ್ಣಗಳಿರಾ ?
ಬಾಳುವಲ್ಲಿ ಬದುಕುವಲ್ಲಿ ಗುರು-ಲಿಂಗ-ಜಂಗಮವನರಿಯದೇ

ಹಾಳು-ಹರಿಯ ತಿಂದ ಶುನಕದಂತೆ ಕಾಲ್ಗೆಡೆದು ಓಡಾಡಿ
ಏಳಲಾರದೆ ಬಿದ್ದಾಗ, ಶಿವ ಶಿವಾ ಎಂದರೆ ಅಲ್ಲಿ ದೇವನಿಪ್ಪನೆ?
ಇದ ನೋಡಿ ನಾಚಿ ನಗುತಿರ್ಪ
ನಮ್ಮ ಬಸವಪ್ರಿಯ ಕೂಡಲ ಚೆನ್ನಬಸವಣ್ಣಾ.

ನೆರೆಕೆನ್ನೆಗೆ ತೆರೆಗಲ್ಲಕೆ ಶರೀರಗೂಡು ಹೋಗದ ಮುನ್ನ, ಮುಪ್ಪಿಂದೊಪ್ಪಳಿಯದ ಮುನ್ನ, ಮೃತ್ಯು ಮುಟ್ಟದ ಮುನ್ನ ಜೀವನದಲ್ಲಿ ಸಾಧನೆ ಮಾಡಬೇಕು ಎಂದು ಧರ್ಮಗುರು ಬಸವಣ್ಣನವರು ತಿಳಿಸುವಂತೆ, ಶರಣ ಅಪ್ಪಣ್ಣನವರು ಕೂಡ ಮಾನವನನ್ನು ಎಚ್ಚರಿಸುತ್ತಾರೆ. ಮನುಷ್ಯ ತನ್ನಲ್ಲಿ ಕಸುವಿದ್ದಾಗ, ಯೌವ್ವನವಿದ್ದಾಗ ನಾಯಿಯಂತೆ ಅತ್ತಿತ್ತ ತಿರುಗಿ ತಿನಬಾರದ್ದೆಲ್ಲವನ್ನೂ ತಿಂದು, ದುರಾಚಾರ -ದುರ್ವಿಚಾರಗಳನ್ನು ತುಂಬಿಕೊಂಡು ರೋಗ-ರುಜಿನಗಳಿಗೆ ಒಡಲು ಮಾಡಿಕೊಂಡು ಸಾಯುವಾಗ ಶಿವಶಿವಾ ಎಂದರೆ ಸಾವು ಬಿಡುವುದೇ? ಸಾಧ್ಯವಿಲ್ಲ, ಕಾರಣ ಬಾಳುವಲ್ಲಿ -ಬದುಕುವಲ್ಲಿ ಅರಿವು-ಆಚಾರ-ಅನುಭಾವ (ಗುರು-ಲಿಂಗ-ಜಂಗಮ) ಗಳನ್ನರಿತು ಜೀವನ ಸಾಗಿಸಿದರೆ ಅಲ್ಲಿ ದೇವನಿರುವನು. ಇಲ್ಲದಿದ್ದರೆ ನಿಮ್ಮ ಬಾಳು ವ್ಯರ್ಥ ಎಂದು ನುಡಿದಿದ್ದಾರೆ.

ಪ್ರತಿಯೊಬ್ಬ ಮಾನವನು ಶರಣ ಮಾರ್ಗವನ್ನು ಅನುಸರಿಸಬೇಕೆಂದು ಅರುಹುತ್ತಾರೆ-

ಅಯ್ಯಾ ಹುಟ್ಟಿದ ಮನುಜರೆಲ್ಲ ಹೊಟ್ಟೆ ಹೊಟ್ಟೆ ಎಂದು
ಹೊಟ್ಟೆಗೆ ಹರಿದು ಹೊಟ್ಟೆಗೆ ಕುದಿದು ಹೊಟ್ಟೆಯನೇ ಹೊರೆದು
ಹೊಟ್ಟೆಯನೇ ತುಂಬಿ ತಾವು ಬಂದ ಬಟ್ಟೆಯನರಿಯದೆ
ಕೆಟ್ಟಿತ್ತು ಜಗವೆಲ್ಲ,
ಅದಂತಿರಲಿ
ಇನ್ನಿಹ ಶರಣರ ಮತವೆಂತೆಂದರೆ ಹೊಟ್ಟೆ ಎಂಬುದನೆ
ಹೊಟ್ಟು ಮಾಡಿ ತೂರಿ, ಅಲ್ಲಿರ್ದ ಘಟ್ಟಿಯಾಗಿರ್ದ
ಪ್ರಸಾದವನೆ ಹೊಟ್ಟೆಯೆಂದು ಓಡಿಮುಟ್ಟಿ
ನಿಮ್ಮೊಳವಡವೆರದು ಬಟ್ಟಬಯಲಾದರು ಕಾಣಾ
ಬಸವಪ್ರಿಯ ಕೂಡಲ ಚೆನ್ನಬಸವಣ್ಣಾ.

ಜಗತ್ತಿನಲ್ಲಿ ಹುಟ್ಟಿ ಬಂದ ಮಾನವನು ಕೇವಲ ಇಂದ್ರಿಯ ಭೋಗ-ಭೋಗವೆಂದು ಊಟ ತಿಂಡಿಗಳಿಗಾಗಿಯೇ ಬಳಲಿ ಬಳಲಿ ಹಾಳಾಗಬಾರದು. ತಿನ್ನಲಿಕ್ಕಾಗಿ ಬದುಕಬಾರದು, ಬದುಕಿಗಾಗಿ ತಿನ್ನಬೇಕು-ಉಣ್ಣಬೇಕು. ಅಂದರೆ ಮಾತ್ರ ಮಾನವನು ಜೀವನದಲ್ಲಿ ಏನಾದರೂ ಹೆಚ್ಚಿನದನ್ನು ಸಾಧಿಸಲು ಅನುಕೂಲವಾಗುತ್ತದೆ. ಬಸವಾದಿ ಶರಣರು ಈ ರೀತಿಯಾಗಿ ಸಾಧಿಸಿದ್ದಾರೆಂದು ಶರಣ ಅಪ್ಪಣ್ಣನವರು ತಿಳಿಸುತ್ತಾರೆ.

ವೇದ ಶಾಸ್ತ್ರ ಆಗಮ ಪುರಾಣಗಳ ಬಗ್ಗೆ :

ಬಸವಾದಿ ಶರಣರು ತಮ್ಮ ಧರ್ಮ-ಸಂಸ್ಕೃತಿಯಲ್ಲಿ ಗ್ರಂಥಾದಿಗಳ ಪ್ರಾಮಾಣ್ಯವನ್ನೊಪ್ಪದೇ ಅನುಭವಕ್ಕೆ ಮಹತ್ವದ ಸ್ಥಾನವಿತ್ತರು. ಬಸವ ಮಹಾಗುರುವಿನ ಸಾನಿಧ್ಯದೊಳಿರ್ದ ಅಪ್ಪಣ್ಣ ಶರಣರೂ ಕೂಡ ಅನುಭಾವಕ್ಕೆಯೇ ಪ್ರಾಧಾನ್ಯತೆ ಇತ್ತವರು-

ವೇದವನೋದಿದವರೆಲ್ಲ ನಮ್ಮ ಶರಣರು ಹೋದ
ಹಾದಿಯನರಿಯದೆ,
ಸೋಹಂ ಎಂದು ಅಹಂಕರಿಸಿ, ಅನಿತ್ಯದೇಹಿಗಳಾಗಿ,
ಅನಾಮಿಕರಾಗಿ ಹೋದರು.

ಶಾಸ್ತ್ರವನೋದಿದವರೆಲ್ಲ ನಮ್ಮ ಶರಣರು ಹೋದ
ಹಾದಿಯನರಿಯದೆ,
ಶರಣ ಸಂನ್ಯಾಸಿ ಯೋಗಿ ಜೋಗಿಯಾಗಿ
ಹೀಗೆ ಕೆಲಬರು ಕೆಟ್ಟರು.

ಆಗಮವನೋದಿದವರೆಲ್ಲ ನಮ್ಮ ಶರಣರು ಹೋದ
ಹಾದಿಯನರಿಯದೆ,
ಕ್ರಿಯಾಪಾದ ಚರ್ಯಾಪಾದ ಜ್ಞಾನಪಾದವೆಂದು
ನಾನಾಪರಿಯ ಕರ್ಮಭಕ್ತಿಯ ಮಾಡಿ
ಲಿಂಗ ಜಂಗಮದ ಮರ್ಮವನರಿಯದೆ
ಅಧರ್ಮಿಗಳಾಗಿ ಹೋದರು.

ಪುರಾಣವ ನೋದಿದವರೆಲ್ಲ ನಮ್ಮ ಪುರಾತರು ಹೋದ
ಹಾದಿಯನರಿಯದೆ,
ಪುರದ ಬೀದಿಯೊಳಗೆ ಮಾತು ಕಥೆಯ ಪಸಾರವನಿಕ್ಕಿ ಮಾಡಿ
ಫಲಪದ ಮುಕ್ತಿಗೆ ಸಲ್ಲದೇ ಹೋದರು.
ಇದು ಕಾರಣ ಈ ಚತುರ್ವಿಧದೊಳಗಾವಂಗವೂ ಅಲ್ಲ.
ಎಮ್ಮ ಬಸವಪ್ರಿಯ ಕೂಡಲಚೆನ್ನಬಸವಣ್ಣನ ಶರಣನ
ಪರಿ ಬೇರೆ

ವೇದ-ಶಾಸ್ತ್ರ-ಪುರಾಣ-ಆಗಮಂಗಳೆಲ್ಲವೂ ಕೊಟ್ಟಣವ ಕುಟ್ಟುತ್ತ ನುಚ್ಚು ತೌಡು, ಇವ ಕುಟ್ಟಲೇಕೆ? ಬೇಡವೆನ್ನುತ್ತಾರೆ ಶರಣರು. ಆದ್ದರಿಂದ ಶರಣ ಅಪ್ಪಣ್ಣನವರು 'ಶರಣ ಪರಿ ಬೇರೆ' ಎಂದು ಹೇಳಿ, ಅದನ್ನು ಇಲ್ಲಿ ಕೆಳಗಿನಂತೆ ವಿವರಿಸುತ್ತಾರೆ-

ಮರೆದರೆ ಮಾಯೆ, ಅರಿದರೆ ಮಾಯೆ ಇಲ್ಲ.
ಅರಿವು ಮರವೆ ಎರಡ ನೂಂಕಿ ನಿಂದರೆ,
ಮುಂದೆ ಕಣ್ಣು ತೆರಪಾಗಿ ತೋರುವ ಬಯಲೇ
ಲಿಂಗದ ಬೆಳಗು.

ಆ ಲಿಂಗದ ಬೆಳಗೆ ನೆಮ್ಮುಗೆಯಾದರೆ ಲಿಂಗೈಕ್ಯವು.
ಆ ಲಿಂಗೈಕ್ಯವು ನಿಜವಾದರೆ ನಿಶ್ಚಿಂತವು.
ನಿಶ್ಚಿಂತದಲ್ಲಿ ಲೀಯವಾದರೆ ನಿರವಯವು.
ಇದೀಗ ನಮ್ಮ ಮುನ್ನಿನ ಆದ್ಯರ ನಡೆನುಡಿ.
ಇದನರಿಯದೆ ವೇದ ಪುರಾಣ ಶಾಸ್ತ್ರ ಆಗಮ
ಇವನೊಂದನು ಓದಿದರೆ ಹಾಡಿದರೆ ಕೇಳಿದರೆ
ಕಾಯ ವಾಯವೆಂದರು
ನಮ್ಮ ಬಸವಪ್ರಿಯ ಕೂಡಲ ಚೆನ್ನಬಸವಣ್ಣ.

ಕೇವಲ ಮೂಢನಂಬಿಕೆ, ಅಂಧಶ್ರದ್ಧೆ, ಕಾಲ್ಪನಿಕ ದೇವಾನುದೇವತೆಗಳ ಸೃಷ್ಟಿ ಅವುಗಳ ಚಿತ್ರ-ವಿಚಿತ್ರ, ಹುಟ್ಟು-ಹೋರಾಟ, ಭೋಗ-ರಾಗ, ದ್ವೇಷ-ಅಸೂಯೆ, ಕರ್ಮಕಾಂಡ ಇತ್ಯಾದಿಗಳನ್ನು ಶರಣರು ಒಪ್ಪುವುದಿಲ್ಲವಾದ್ದರಿಂದ-

ವೇದವೆಂಬುದು ಓದಿನ ಮಾತು.
ಶಾಸ್ತ್ರವೆಂಬುದು ಸಂತೆಯ ಸುದ್ದಿ.
ಪುರಾಣವೆಂಬುದು ಪುಂಡರಗೋಷ್ಠಿ.
ತರ್ಕವೆಂಬುದು ತಗರ ಹೋರಟೆ.
ಭಕ್ತಿಯೆಂಬುದು ತೋರುಂಬ ಲಾಭ.
ಗುಹೇಶ್ವರನೆಂಬುದು ಮೀರಿದ ಘನವು.

ಎನ್ನುತ್ತಾರೆ ಅಲ್ಲಮ ಪ್ರಭುದೇವರು.

ಈ ರೀತಿಯಾಗಿ ಶರಣಧರ್ಮದ ಆಚಾರ-ವಿಚಾರಗಳಿಗೆ ಸಂಬಂಧಿಸದ ಶಾಸ್ತ್ರಾದಿ ಗ್ರಂಥಗಳನ್ನು ಓದಬಾರದು, ಹಾಡಬಾರದು, ಕೇಳಬಾರದು ಎನ್ನುತ್ತಾರೆ ಶರಣ ಅಪ್ಪಣ್ಣನವರು.

ಏಕದೇವೋಪಾಸನೆ ಕುರಿತು :

ಬಸವಾದಿ ಶರಣರು ವಿಶ್ವದಾಕಾರದಲ್ಲಿ, ವಿಶ್ವದ ತುಂಬ ಓತ ಪ್ರೋತವಾಗಿ ತುಂಬಿರುವ ಪರಮಾತ್ಮ ಚೇತನವನ್ನು ತನ್ನಂತರಂಗದ ಅರುಹಿನ ಕುರುಹಾಗಿ 'ಇಷ್ಟಲಿಂಗ' ರೂಪದಲ್ಲಿ ಪೂಜಿಸಲು ಹೇಳಿದ್ದಾರೆ. ನೂರೆಂಟು ದೇವಾನುದೇವತೆಗಳನ್ನು ಕಲ್ಪಿಸಿ, ನಿರ್ಮಿಸಿ ಶೋಷಣೆ ಮಾಡುವ ಪುರೋಹಿತಶಾಹಿ-ಯನ್ನು ಖಂಡಿಸಿದ್ದಾರೆ. ಆದ್ದರಿಂದಲೇ ಅಪ್ಪಣ್ಣನವರು ಬಹುದೇವೋಪಾಸನೆಯನ್ನು ಖಂಡಿಸುತ್ತಾರೆ-

ಕಲ್ಲದೇವರ ನಂಬಿ ಪೂಜಿಸಿದವರೆಲ್ಲರೂ ಕಲಿಯುಗದ
ಕತ್ತಲೆಯೊಳಗಾಗಿ ಕತ್ತೆಗಳಾಗಿ ಹೋದರು ನೋಡಾ.
ಅದೇನು ಕಾರಣವೆಂದರೆ -
ತಮ್ಮ ದೇವರು ಇಕ್ಕಿದೋಗರವನೊಲ್ಲದು
ಒಡನೆ ಮಾತಾಡದು.
ಗುಡಿಯ ಕಲ್ಲು ಮೇಲೆ ಬಿದ್ದರೆ
ಒಡೆದು ಹೋಳಾಗಿಹೋಗುತ್ತದೆ.
ಇಂತಪ್ಪ ಕಲ್ಲ ಪೂಜಿಸಿ ಸಲ್ಲದೇ ಹೋದರು
ಗುರುಲಿಂಗ ಜಂಗಮಕ್ಕೆ.

ಅದಂತಿರಲಿ :
ಮಣ್ಣುದೇವರೆಂದು ಪೂಜಿಸಿ ಮಜ್ಜನಕ್ಕೆ ನೀಡಲಮ್ಮದೆ
ಲಜ್ಜೆಗೆಟ್ಟು ನಾಯಾಗಿ ಬೊಗಳಿ ಹೋದರು.
ಅದಂತಿರಲಿ:
ಮರನ ದೇವರೆಂದು ಪೂಜಿಸಿ
ಧೂಪ ದೀಪವ ಮುಂದಿಡಲಮ್ಮದೆ
ಆವೊಂದು ವ್ಯಾಪಾರಕ್ಕೊಳಗಾಗಿ ತಾಪತ್ರಯಕ್ಕೆ ಸಿಕ್ಕಿ
ಪಾಪಿಗಳಾಗಿ ಸತ್ತು ಹೋದರು,
ಸಲ್ಲದೇ ಶಿವನಲ್ಲಿಗೆ.
ಎಮ್ಮ ಭಕ್ತರ ಪರಿ ಹಾಗಲ್ಲ ಕೇಳಿರಣ್ಣಾ -
ಎನ್ನ ದೇವನು ನಡೆವ ನುಡಿವ
ಇಕ್ಕಿದರೆ ಉಂಬ, ಕೊಟ್ಟರೆ ತಕ್ಕೊಂಬ,
ಪೂಜಿಸಿದರೆ ಪೂಜೆಗೊಂಬ ಅನೇಕ ಓಜೆಯಲಿ
ತನ್ನ ನಂಬಿದ ಭಕ್ತರಿಗೆ ಬುದ್ಧಿಯ ಹೇಳುವ
ಶುದ್ಧಾತ್ಮನ ತೋರುವ ತಾ ಮುದ್ದಿಯನಲ್ಲಿ
ಸಜ್ಜನ ಸದ್ಭಕ್ತರಲ್ಲಿ ಇದ್ದು ಇಲ್ಲದಂತಿಪ್ಪ
ಇಂತಹ ಪ್ರಸಿದ್ಧ ಜಂಗಮಲಿಂಗವ ಪೂಜಿಸಿ
ಸ್ವಯಂಲಿಂಗಿಗಳಾದರು ಎಮ್ಮ ಶರಣರು.
ಅವರು ಹೋದ ಹಾದಿ ಸಿಕ್ಕಿತ್ತು.
ಆ ಹಾದಿಗೊಂಡು ಹೋಗಿ ಅವರ ಪಾದವ ಕಂಡು
ಕೆಟ್ಟು ಬಟ್ಟ ಬಯಲಾದೆನಯ್ಯಾ
ಬಸವಪ್ರಿಯ ಕೂಡಲ ಚೆನ್ನಬಸವಣ್ಣಾ,

ಈ ರೀತಿ ಕಲ್ಲು-ಕಟ್ಟಿಗೆ-ಮಣ್ಣು ಮುಂತಾದ ತನ್ನ ಬಿಟ್ಟು ಹೊರಗಿರುವ ದೇವತೆಗಳನ್ನು (deities) ಕಲ್ಪಿಸಿಕೊಂಡು ವ್ಯರ್ಥವಾಗಿ ಹೋಗುವುದನ್ನು ಕಂಡು ಶರಣ ಅಪ್ಪಣ್ಣನವರು ವಿಡಂಬಿಸಿದ್ದಾರೆ. ತಮ್ಮ ದೇವರ ಸ್ವರೂಪವನ್ನು ಕೆಳಗಿನಂತೆ ಅರುಹಿದ್ದಾರೆ-

ಜಗದಗಲ ಮುಗಿಲಗಲ! ಪಾದ ಪಾತಾಳದಿಂದತ್ತತ್ತ;
ಮಕುಟ ಬ್ರಹ್ಮಾಂಡದಿಂದತ್ತತ್ತ.
ವಿಶ್ವಬ್ರಹ್ಮಾಂಡವನು ತನ್ನ ಕುಕ್ಷಿಯೊಳು ನಿಕ್ಷೇಪವ
ಮಾಡಿಕೊಂಡಿಪ್ಪ ದೇವನೀಗ ಎನ್ನ ದೇವ.
ಆ ದೇವನೊಳಗೆ ನಾನಡಕ, ನನ್ನೊಳಗೆ ಆ ದೇವನಡಕ.
ಇಂತಪ್ಪ ಆ ದೇವನ ನಂಬಿ,
ನಾ ಕೆಟ್ಟು ಬಟ್ಟ ಬಯಲಾದೆ.
ಈ ದೇವನನರಿಯದೇ ಜಗವೆಲ್ಲ ಕಲ್ಲುದೇವರು,
ಮಣ್ಣದೇವರು, ಮರದೇವರು ಎಂದು,
ಇವನಾರಾಧಿಸಿ ಕೆಟ್ಟರೆಲ್ಲ!
ಸ್ವರ್ಗ ಮರ್ತ್ಯ ಪಾತಾಳದವರೆಲ್ಲರು ಎನ್ನ ದೇವನವನರಿದು
ಅರ್ಚಿಸಲಿಲ್ಲ, ಪೂಜಿಸಲಿಲ್ಲ, ಭಾವಿಸಲಿಲ್ಲ.
ಇದು ಕಾರಣ, ಆವ ಲೋಕದವರಾದರೂ ಆಗಲಿ
ಎನ್ನ ದೇವನನರಿದರೆ ಭವವಿಲ್ಲ, ಬಂಧನವಿಲ್ಲ.
ನೆರೆನಂಬಿದರೆ ನಮ್ಮ ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

ಈ ರೀತಿ ಬಹುದೇವೋಪಾಸನೆಯನ್ನು ತಿರಸ್ಕರಿಸಿ, ಏಕದೇವೋಪಾಸನೆಯನ್ನು ಪ್ರತಿಪಾದಿಸಿದ್ದಾರೆ ಶರಣ ಅಪ್ಪಣ್ಣನವರು. ಇಂಥ ದೇವರನ್ನು ನೆರೆ ನಂಬಿದ ಬಳಿಕ ಬೇರೆ ದೇವರೆಂದು, ಆ ದೇವರುಗಳ ಸ್ಥಾನಗಳೆಂದು ಹಲವು ಹನ್ನೊಂದೆಡೆ ಹಲುಬಿದರೆ ತಿರುಗಿದರೆ ಅದು ಲಿಂಗದ್ರೋಹವೆನ್ನುತ್ತಾರೆ.

ತೀರ್ಥ ಕ್ಷೇತ್ರಗಳ ಕುರಿತು :

ಶರಣ ಅಪ್ಪಣ್ಣನವರು ತೀರ್ಥ ಕ್ಷೇತ್ರಗಳ ಬಗ್ಗೆ ಅಲ್ಲಿಗೆ ಯಾತ್ರೆಗೆ ಹೋಗುವ ಲಿಂಗಾಯತರ ಬಗ್ಗೆ ಕಟುವಾಗಿ ಖಂಡಿಸಿದ್ದಾರೆ. ವಿಶ್ವವನ್ನೊಳಕೊಂಡ ದೇವರೇ ಇಷ್ಟಲಿಂಗರೂಪದಲ್ಲಿ ಕೈಗೆ ಬಂದಿರುವಾಗ ಮತ್ತೆ ಬೇರೆ ದೇವರೆಂದು ತಿರುಗಬಾರದು; ಈ ರೀತಿ ತಿರುಗುವವರ ಮುಖವನ್ನು ನೋಡಬಾರದೆನ್ನುತ್ತಾರೆ.

ತೀರ್ಥಯಾತ್ರೆ ಲಿಂಗದರುಶನಕ್ಕೆ ಹೋಗಿ,
ಕರ್ಮವ ಹಿಂಗಿಸಿಕೊಂಡೆನೆಂಬ ಭಂಗಿತರ ಮಾತ ಕೇಳಲಾಗದು.

ಅದೇನು ಕಾರಣವೆಂದರೆ-
ತೀರ್ಥವಾವುದು, ಯಾತ್ರೆ ಯಾವುದು ಬಲ್ಲರೆ ನೀವು ಹೇಳಿರೆ.
ಮಹಾಘನ ಗುರುಪಾದತೀರ್ಥದಿಂದ ವೆಗ್ಗಳ ತೀರ್ಥವುಂಟೆ?
ಜಗತ್ಪಾವನ ಜಂಗಮ ದರುಶನದಿಂದ ಬೇರೆ ಯಾತ್ರೆ ಉಂಟೆ ?
ಇಂಗಿತವನರಿದ ಬಳಿಕ
ತನ್ನ ಲಿಂಗದ ಮೇಲಿರ್ಪ ಲಿಂಗವಲ್ಲದೆ ಬೇರೆ ಲಿಂಗ ಉಂಟೆ ?
ಇದನರಿಯದೆ ಇನ್ನು ತೀರ್ಥಯಾತ್ರೆ ಲಿಂಗದರುಶನ ಉಂಟೆಂಬ
ಅಂಗಹೀನರ ಮುಖವ ನೋಡಲಾಗದು
ಬಸವಪ್ರಿಯ ಕೂಡಲ ಚೆನ್ನಬಸವಣ್ಣಾ.

ಮರೆವಿನ ಮಾನವರ ಬಾಳುವೆ ಬಗ್ಗೆ :

ಶರಣ ಅಪ್ಪಣ್ಣನವರು ಮರೆವಿನ ಸೃಷ್ಟಿಯ ಮಾನವರ ಬಾಳುವೆಯನ್ನು ನೋಡಿ ವಿಡಂಬಿಸುತ್ತಾರೆ.

ಹೊತ್ತಾರೆಯಿಂದ ಅಸ್ತಮಯ ತನಕ ಸುತ್ತಿರ್ದ ಮಾಯಾ ಪ್ರಪಂಚವನೆ
ಅಳೆವುತ್ತ ಸುರಿವುತ್ತಲಿರ್ದು, ಕತ್ತಲೆಯಾದರೆ
ಕಾಳು ವಿಷಯದೊಳಗೆ ಮುಳುಗಿತ್ತು, ಸತ್ತು ಹುಟ್ಟಿತ್ತು.
ಮತ್ತೆ ಬೆಳಗಾಗಿರ್ದು ನಾನು ತತ್ತ್ವ ಬಲ್ಲೆನೆಂದು
ನುಡಿವ ಕತ್ತಲೆ ಮನುಜರು !
ಅತ್ತ ಹೊದ್ದದೆ, ಇತ್ತಲೆ ನಿಂದು ನಾಚಿ ನಗುತಿರ್ದ
ನಮ್ಮ ಬಸವಪ್ರಿಯ ಕೂಡಲ ಚೆನ್ನಬಸವಣ್ಣ.

ಬೆಳಗಿನಿಂದ ಸಂಜೆಯವರೆಗೆ ಕೇವಲ ಇಂದ್ರಿಯ ಭೋಗಗಳಲ್ಲಿಯೇ, ಸುತ್ತಾಡುತ್ತ ಕೇವಲ ಭೋಗದ ಗಳಿಕೆಯಲ್ಲಿಯೇ ಅಳೆಯುತ್ತಾ-ಸುರಿಯುತ್ತಾ, ಕತ್ತಲೆಯಾದ ನಂತರ ಇಡೀ ರಾತ್ರಿಯೆಲ್ಲಾ ವಿಕೃತ ಮನೋವಿಕಾರದ ಕೂಟದಲ್ಲಿಯೇ ಮುಳುಗಿ, ಸತ್ತು ಹುಟ್ಟಿ ತಿರುಗಿ ಬೆಳಗೆದ್ದು ನಾನು ಎಲ್ಲವನ್ನೂ ತಿಳಿದುಕೊಂಡವನು ಎಂಬ ಅಜ್ಞಾನಿಯ ಅಹಂಕಾರದ ನುಡಿ ನೋಡಿ ಶರಣ ಅಪ್ಪಣ್ಣನವರು ಬೆರಗಾಗುತ್ತಾರೆ. ಇಂಥವರನ್ನು ಕತ್ತಲೆಯ ಮನುಜರೆಂದು (ಅಜ್ಞಾನದ ಪಶುಗಳೆಂದು) ಕರೆಯುತ್ತಾರೆ.

ಇನ್ನು ಕೆಲವರು ಆಡಂಬರಕ್ಕಾಗಿ ಲಿಂಗವಂತರೆಂದು ಕರೆದುಕೊಳ್ಳುವ ಖಾನೇಸುಮಾರಿ ಜನರ ಬಾಳುವೆಯನ್ನೂ ವಿಡಂಬಿಸುತ್ತಾರೆ-

ಆಟದಲಿ ಕೆಲಹೊತ್ತುಗಳೆದು, ಕೂಟದಲಿ-ಕೆಲಹೊತ್ತುಗಳೆದು
ನೋಟದಲಿ ಕೆಲಹೊತ್ತುಗಳೆದು,
ಊಟದ ಹೊತ್ತಿಗೆ ಲಿಂಗವ ಕೂಡಿಹೆನೆಂಬವನೊಬ್ಬ,
ಊಟ ಮಾಟ ಕೂಟದಲಿ ಕೋಟಲೆಗೊಳುತಿದ್ದೆನೆಂಬುವ -
ನೊಬ್ಬ ಪೋಟ.
ಇವರಿಬ್ಬರ ನೋಟ ಬೇಟಕ್ಕೆ ಸಿಕ್ಕದೆ ದಾಂಟಿ ಹೋದನು
ನಮ್ಮ ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

ಭಕ್ತ-ಗುರು-ಜಂಗಮ ಸ್ವರೂಪ :

ಶರಣ ಹಡಪದ ಅಪ್ಪಣ್ಣನವರು ಗುರು-ಜಂಗಮ-ಭಕ್ತ-ಲಿಂಗ ಸ್ವರೂಪವನ್ನು ಬಹುಮಾರ್ಮಿಕವಾಗಿ ವಿವರಿಸಿದ್ದಾರೆ-

ಭಕ್ತನಾದರೂ ಆಗಲಿ ಗುರುವಾದರೂ ಆಗಲಿ
ಲಿಂಗವಾದರೂ ಆಗಲಿ ಜಂಗಮತಾನಾದರೂ ಆಗಲಿ
ಈ ಮರ್ತ್ಯದಲ್ಲಿ ಒಡಲುವಿಡಿದು ಹುಟ್ಟಿದ ಮೇಲೆ
ಮಾಯೆಗೆದ್ದೆವೆಂದರೆ ಸಾಧ್ಯವಲ್ಲ ಕೇಳಿರಣ್ಣಾ.
ಮತ್ತೆಯೂ ಗೆಲಬಹುದು ಮತ್ತೊಂದು ಭೇದಾದಿ ಭೇದದಲ್ಲಿ.

ಅದೆಂತೆಂದರೆ-

ಭಕ್ತನಾದರೆ ತನುವ ಗುರುವಿಂಗಿತ್ತು
ಮನವ ಲಿಂಗಕ್ಕಿತ್ತು ಧನವ ಜಂಗಮಗಿತ್ತು
ಮರೆದರೆ ಮಾಯಾಪಾಶ ಹರಿಯಿತ್ತು
ಇದರ ಗೊತ್ತು ಹಿಡಿದು ನಿಂತರೆ ಆತನೇ ಭಕ್ತನೆಂಬೆ.
ಗುರುವಾದರೆ ಸಕಲಾಗಮಂಗಳನೆಲ್ಲಾ ಅರಿದು ತತ್ವವ ಹುಸಿಯೆಂದು
ನಿತ್ಯವ ನಂಬಿ ತನ್ನವತ್ತಿವಿಡಿದಾ ಶಿಷ್ಯಂಗೆ ಪರತತ್ವವ ತೋರಿ
ಪ್ರಾಣಲಿಂಗವ ಕರದಿಕೊಟ್ಟು, ಆ ಲಿಂಗ ಅಂಗವೆಂಬುಭಯದೊಳಗೆ

ತಾನಡಗಿ ತನ್ನೊಳಗೆ ಶಿಷ್ಯನಡಗಿ, ನಾನುನೀನೆಂಬುಭಯವಳಿದರೆ
ಗುರುವೆಂಬೆ.
ಜಂಗಮವಾದರೆ ಬಾಯಲೆಕ್ಕಕ್ಕೆ ಬಾರದೆ ಒಂದು ಆಶ್ರಿತವೆನಿಸಿಕೊಳ್ಳದೆ
ಆಶೆಯಳಿದು ಲಿಂಗಜಂಗಮವಾಗಿ ನಿರ್ಗಮನೀಯವಾಗಿ
ಭರ್ಗೋದೇವಾಯೆಂಬ ಏಕೋದೇವನ ದ್ವಿತೀಯನೆಂಬ ಶೃತಿಗೆ ತಂದು
ತಾ ಪರಮನಲ್ಲಿ ನಿಂದು ಪರಿಪೂರ್ಣೀಕರಿಸಿಕೊಂಡು
ಅಣುವಿಂಗೆ ಅಣು ಮಹತ್ತಿಂಗೆ ಮಹತ್ತು ಘನಕ್ಕೆ ಘನವೆಂಬ
ವಾಕ್ಯಕ್ಕೆ ಸಂದು ತಾನಿಂದು ಜಗವನೆಲ್ಲವನಾಡಿಸುವ
ಅಂತರಾತ್ಮಕನಾಗಿ ಅಡಗಿದರೆ ಜಂಗಮವೆಂಬೆ.....
ಬಸವಪ್ರಿಯ ಕೂಡಲಚೆನ್ನಬಸವಣ್ಣ.

ಭಕ್ತನು ತನು-ಮನ-ಧನಗಳನ್ನು ಅಂದರೆ ಅರಿವೆಂಬ ಗುರುವಿಂಗೆ ತನುವರ್ಪಿಸಿ, ಆಚಾರವೆಂಬ ಲಿಂಗಕ್ಕೆ ಮನವರ್ಪಿಸಿ, ಅನುಭಾವವೆಂಬ ಜಂಗಮಕ್ಕೆ ಭಾವಧನವನರ್ಪಿಸಿದರೆ ಮಾತ್ರ ಮಾಯಾಪಾಶ ನಾಶವಾಗುತ್ತದೆ. ಅರಿವಿನಿಂದ ಗುರುವಾಗಿರ್ಪವನು ಶಿಷ್ಯನಂತರಂಗದೊಳಗಿನ ಚೇತನವನ್ನು ಆತನ ಕರಕ್ಕೆ ಕೊಟ್ಟು ಗುರುಮುಟ್ಟಿ ಆತನನ್ನೂ ಗುರುವಾಗಿಸಿದರೆ ಅದು ನಿಜವಾದ ಗುರುತ್ವ.

ಅನುಭಾವದಿಂದ ಜಂಗಮವೆನಿಸಿಕೊಂಡವನು ಇಷ್ಟಲಿಂಗ ನಿಷ್ಠೆಯಿಂದ ಕೂಡಿದವನಾಗಿ ಆಸೆ-ಆಮಿಷೆಗಳಿಲ್ಲದೆ ಜಗತ್ ಕಲ್ಯಾಣಕ್ಕಾಗಿ ದುಡಿಯಬೇಕು. ಈ ರೀತಿ ಭಕ್ತತ್ವ-ಗುರುತ್ವ-ಜಂಗಮತ್ವ ಹೊಂದಬೇಕೆಂದು ಶರಣ ಅಪ್ಪಣ್ಣನವರು ತಿಳಿಸುತ್ತಾರೆ. ಭಕ್ತ-ಗುರು-ಜಂಗಮವೆಂಬುದು ಹುಟ್ಟಿನಿಂದ, ಆನುವಂಶಿಕದಿಂದ ಬರುವುಗಳಲ್ಲ. ಪ್ರತಿಯೊಬ್ಬ ಲಿಂಗಧಾರಿಯು ತನ್ನ ಆಧ್ಯಾತ್ಮ ಸಾಧನೆಯಲ್ಲಿ ಸಾಧಿಸಿ ಅಳವಡಿಸಿಕೊಳ್ಳುವ ಸ್ಥಿತಿಗಳೇ ಭಕ್ತತ್ವ-ಲಿಂಗತ್ವ-ಗುರುತ್ವ-ಜಂಗಮತ್ವಗಳಾಗಿವೆ. 'ತನ್ನ ಬಿಟ್ಟು ಇನ್ನುಳಿದವರೆಲ್ಲರೂ ತನಗೆ ಜಂಗಮರು' ಎಂದು ಪ್ರತಿಯೊಬ್ಬನೂ ತಿಳಿದುಕೊಳ್ಳಬೇಕು. ಇನ್ನು ಸಕಲ ಸಚರಾಚರವೆಲ್ಲ ಜಂಗಮ, ಸಮಾಜವೇ ಜಂಗಮವಾಗಿದೆ.

ಇನ್ನು 'ಜಂಗಮ'ವೆಂದು ಜಾತಿಯಿಂದಲೋ, ಕಾವಿ ಕಾಷಾಂಬರ ತೊಟ್ಟು ಭಿಕ್ಷೆ ಬೇಡುತ್ತ ತಿರುಗುವವರನ್ನೂ ಬಸವಾದಿ ಶರಣರು ಖಂಡಿಸಿದ್ದಾರೆ. ಶರಣ ಅಪ್ಪಣ್ಣನವರೂ ಕೂಡ ಈ ಕುರಿತು ವಿಡಂಬನೆ ಮಾಡಿದ್ದಾರೆ-

ಜಂಗಮ ಜಂಗಮವೆಂದು ನುಡಿದು,
ಜಗದ ಹಂಗಿಗರಾಗಿ ಇರಲಾಗದು.
ಜಗದ ಕರ್ತನ ಕೈಯಲ್ಲಿ ಹಿಡಿದುಕೊಂಡು
ಜಂಗುಳಿಗಳ ಬಾಗಿಲ ಕಾಯಲಾಗದು.
ಜಂಗಮದ ಸುಳುಹು ಎಂತಿರಬೇಕೆಂದರೆ
ತನ್ನ ನಂಬಿದ ಸಜ್ಜನ ಸದ್ಭಕ್ತರಲ್ಲಿಗೆ ಲಿಂಗವಾಗಿ ಗಮಸಿ,
ತಾ ಕಂಡ ಲಿಂಗಾಂಗವನು ಅಲ್ಲಿಯೇ ನಿಕ್ಷೇಪಿಸಿ,

ತಾ ನಿರ್ಗಮನಿಯಾಗಿ ಸುಳಿಯಬಲ್ಲರೆ ಜಂಗಮಲಿಂಗವದು.
ಇಂತಲ್ಲದೇ ಕಂಡವರ ಕಾಡಿ ಬೇಡಿ,
ಕೊಟ್ಟರೆ ಕೊಂಡಾಡಿ ಕೊಡದಿದ್ದಡೆ ಜರಿದು,
ತಾನು ನಿರೋಧಕ್ಕೆ ಗುರಿಯಾಗಿ
ನೋವುತ್ತ ಬೇವುತ್ತ ಧಾವತಿಗೊಂಬ
ಗಾವಿಲರ ಎಂತು ಜಂಗಮವೆಂಬೆ
ಬಸವಪ್ರಿಯ ಕೂಡಲಚೆನ್ನಬಸವಣ್ಣ.

ಈ ರೀತಿಯಾಗಿ ಜಂಗಮ ವಿಚಾರವನ್ನು ಶರಣ ಅಪ್ಪಣ್ಣರು ಅರುಹಿದ್ದಾನೆ.

ಶೀಲದ ವಿಚಾರ :

ವ್ಯಕ್ತಿಯ ಧಾರ್ಮಿಕ ಆಚರಣೆಯಲ್ಲಿ 'ಶೀಲ' ವೆಂಬುದು ಬೆಳೆದು ಬಂದಿದೆ. ಶೀಲವೆಂಬುದನ್ನು ಸ್ನಾನ, ಜಳಕ, ಮಡಿ-ಮೈಲಿಗೆ, ಮುಟ್ಟು-ತಟ್ಟು ಇತ್ಯಾದಿ ಬೆಳೆಸಿಕೊಂಡು ಇಂದು ವಿಕೃತಗೊಳಿಸಿದ್ದಾರೆ. ಬಸವಾದಿ ಶರಣರು ಇಂತಹ ಶೀಲ - ನೇಮ-ಮಡಿ-ಹುಡಿಗಳನ್ನು ಒಪ್ಪಿಲ್ಲ. ಶರಣ ಅಂಬಿಗರ ಚೌಡಯ್ಯನಂತೂ ಅತಿ ಕಟುವಾಗಿ-'ನೇಮಸ್ತನೆಂಬ ಕ್ರೂರಕರ್ಮಿ, ಶೀಲವಂತನೆಂಬ ಸಂದೇಹಿ, ಭಾಷೆವಂತನೆಂಬ ಬ್ರಹ್ಮೇತಿಕಾರ ಈ ಮೂವರು ಕುಳ್ಳಿರ್ದಲ್ಲಿ ಕುಳ್ಳಿರಲಾಗದು, ಇವರು ಹೋದ ದಾರಿಯ ಹೋಗಲಾಗದು, ಈ ಮೂವರಿಗೂ ಗುರುವಿಲ್ಲ ಲಿಂಗವಿಲ್ಲ'ವೆಂದು ಜರಿದಿದ್ದಾರೆ.

ಶರಣ ಅಪ್ಪಣ್ಣನವರೂ ಕೂಡ 'ಶೀಲವಂತಿಕೆ'ಯ ಬಗ್ಗೆ ಕಟುವಾಗಿ ಜರೆದಿರುವುದನ್ನು ಕಾಣುತ್ತೇವೆ.

ಶೀಲವಂತರು, ಶೀಲವಂತರು ಎಂದೇನೋ ?
ಶೀಲವಂತಿಕೆಯನಾರು ಬಲ್ಲರು?
ಶೀಲವಾದರೆ ಶಿವನೊಳು ಬೆರೆವುದೆ ಶೀಲ
ಶೀಲವಾದರೆ ಗುರುಲಿಂಗ ಜಂಗಮವ ತನ್ನೊಳಗರಿವುದೇ ಶೀಲ.
ಅದಕ್ಕೆ ಮೀರಿದ ಶೀಲವಾದರೆ,
ಹಸಿವು ತೃಷೆ ನಿದ್ರೆ ವಿಷಯವ ಕೆಡಿಸುವುದೇ ಶೀಲ.
ಅದಕ್ಕೆ ತುರಿಯಾತೀತ ಶೀಲವಾದರೆ,
ಬಾಲನಾಗಿ ತನ್ನ ಲೀಲಾವಿನೋದವ ಭೂಮಿಯ
ಮೇಲೆ ನಟಿಸುವುದೇ ಶೀಲ.

ಇದನರಿಯದೆ,
ಶೀಲ ಶೀಲವೆಂದು ಮನೆಮನೆಗೆ ಶೀಲವಲ್ಲದೆ,
ತನ್ನ ತನಗೆ ಕಾಯಕೃತ್ಯ ವಲ್ಲದೆ,
ಇದನರಿದು ಮಹಾಘನವನೆ ಮರೆದು,
ಮನವನೇ ಬಳಲಿಸಿ, ಘನವ ಮಾಡಿ,
ತನುವಹೊರೆದೆನೆಂಬ ಬಿನುಗರ ನುಡಿಯ ಮೆಚ್ಚುವನೇ
ನಮ್ಮ ಬಸವಪ್ರಿಯ ಕೂಡಲಚೆನ್ನಬಸವಣ್ಣ.

ಈ ರೀತಿ ಶೀಲದ ಬಗ್ಗೆ ತಾತ್ವಿಕವಾಗಿ, ಮಾರ್ಮಿಕವಾಗಿ ಶರಣ ಅಪ್ಪಣ್ಣನವರು ತಿಳಿಸಿದ್ದಾರೆ.

ಪಾಪ-ಪುಣ್ಯದ ಬಗ್ಗೆ :

ಶರಣ ಹಡಪದ ಅಪ್ಪಣ್ಣನವರು ಪಾಪ-ಪುಣ್ಯ ಕುರಿತು ಬಹು ಮಾರ್ಮಿಕವಾಗಿ ವಿವೇಚಿಸಿದ್ದಾರೆ-

ಅನ್ನವ ನಿಕ್ಕಿದರೇನು ? ಹೊನ್ನ ಕೊಟ್ಟರೇನು ?
ಹೆಣ್ಣ ಕೊಟ್ಟರೇನು ? ಮಣ್ಣ ಕೊಟ್ಟರೇನು ?
ಪುಣ್ಯವುಂಟೆಂಬರು.
ಅವರಿಂದಾದೊಡವೆ ಏನು ಅವರೀವುದಕ್ಕೆ ?

ಇದಕ್ಕೆ ಪುಣ್ಯವಾವುದು, ಪಾಪವಾವುದು?
ನದಿಯ ಉದಕವ ನದಿಗೆ ಅರ್ಪಿಸಿ,
ತನತನಗೆ ಪುಣ್ಯವುಂಟೆಂಬ ಬಡಹಾರುವರಂತೆ
ಸದಮಳ ಶಾಶ್ವತ ಮಹಾಘನಲಿಂಗವನರಿಯದೆ,
ಇವೇನ ಮಾಡಿದರೂ ಕಡೆಗೆ ನಿಷ್ಫಲವೆಂದಾತ ನಮ್ಮ
ಬಸವಪ್ರಿಯ ಕೂಡಲಚೆನ್ನಬಸವಣ್ಣ

ಸಾಮಾನ್ಯವಾಗಿ, ಭಾರತದ ಧಾರ್ಮಿಕ-ಸಾಮಾಜಿಕ ಜೀವನದಲ್ಲಿ ಪಾಪ-ಪುಣ್ಯದ ವಿಷಯವನ್ನು ಪುರೋಹಿತಶಾಹಿ ಜನ ವಿರೂಪಗೊಳಿಸಿ, ಮುಗ್ಧ-ಅಜ್ಞ ಜನರನ್ನು ಶೋಷಣೆ ಮಾಡುವ ಸಲುವಾಗಿ ಭದ್ರವಾಗಿ ಬೇರೂರಿಸಿದ್ದಾರೆ. ಅಜ್ಞ-ಮುಗ್ಧಜನರ ಜೀವನ ಯಾವುದೇ ಘಟನೆ-ಸಂಗತಿಗಳಿಗೆ ಜೋತಿಷ್ಯ-ಶಾಸ್ತ್ರ-ಭವಿಷ್ಯ ಹೇಳುತ್ತಾ ಅನ್ನ, ಹೊನ್ನು, ಹೆಣ್ಣು ಮಣ್ಣುಗಳ, ಪ್ರಾಣಿ-ಪಶುಗಳ ರೂಪದಲ್ಲಿ ದಾನ-ಧರ್ಮ ಮಾಡುವ, ಅನ್ನ ಸಂತರ್ಪಣೆ ಮಾಡಿಸುವ ಪ್ರಾಯಶ್ಚಿತ್ತಾದಿಗಳನ್ನು ಹೇಳಿ, ಪಾಪ-ಪರಿಹಾರ, ಪುಣ್ಯಗಳಿಕೆಯ ಬಗ್ಗೆ ತಿಳಿಸುತ್ತಾರೆ. ಆದರೆ ಶರಣರು ಇದನ್ನು ಒಪ್ಪುವುದಿಲ್ಲ. ಪರಮಾತ್ಮನಿತ್ತ ವಸ್ತುಗಳನ್ನು ಯಾರಿಗೆ ಕೊಟ್ಟು ಯಾರು ಪುಣ್ಯಗಳಿಸುವುದು ? ನದಿಯ ನೀರನು ನದಿಗೆ ಅರ್ಪಿಸಿದರೆ ಪುಣ್ಯ ಬರುವುದೇ ಎಂದು ಹಾಸ್ಯಮಯವಾಗಿ ವಿಡಂಬಿಸುತ್ತಾರೆ ಅಪ್ಪಣ್ಣನವರು. ಪರಮಾತ್ಮನನ್ನು ಅರಿಯದೇ ಯಾವುದೇ ಕರ್ಮವನ್ನು ಮಾಡಿದರೂ ಅದು ನಿರರ್ಥಕವೆಂದು ನುಡಿಯುತ್ತಾರೆ. ಕಾರಣ ಪಾಪ-ಪುಣ್ಯವೆಂಬುದು ತಮ್ಮಿಷ್ಟ ಕಾಣಿರೇ ಎಂದಿದ್ದಾರೆ ಬಸವಣ್ಣನವರು. 'ಅಯ್ಯಾ ಎಂದರೆ ಸ್ವರ್ಗ, ಇಂತಹ ಸದುವಿನಯ ಸದಾಚಾರದ ಜೀವನವೇ ಪುಣ್ಯ; ಎಲವೋ ಎಂದಡೆ ನರಕ, ಇಂತಹ ಕಠೋರ ದುರಾಚಾರದ ಹೇಯ ಬಾಳುವೆಯೇ ಪಾಪ;' ಎನ್ನುತ್ತಾರೆ.

ಅರಿವು -ಆಚಾರಗಳೆರಡೂ ಬೇಕು :

ಶರಣ ಜೀವನಕ್ಕೆ ಆರಿವು-ಆಚಾರಗಳೆರಡೂ ಬೇಕು. ಅರಿವಿಲ್ಲದ ಆಚಾರ ಕರ್ಮಠತನವಾದರೆ ಆಚಾರವಿಲ್ಲದ ಅರಿವು ಹೆಳವ-ನಿರುಪಯುಕ್ತವೆನಿಸುತ್ತದೆ. ಆದ್ದರಿಂದ ಶರಣರು ನುಡಿಯು ನಡೆಯಲ್ಲಿ ಬರಬೇಕು, ಅರಿವು ಆಚಾರದಲ್ಲಿ ಅಳವಡಬೇಕು ಎಂದು ಅರುಹಿದ್ದಾರೆ. ಆದ್ದರಿಂದಲೇ ಶರಣ ಅಪ್ಪಣ್ಣನವರು ನುಡಿಯುತ್ತಾರೆ-

ಆಚಾರದ ಅರಿವು ಹೊರಗಾದ ಮೇಲೆ,
ಅಂಗದ ಮೇಲೆ ಲಿಂಗವಿದ್ದು, ಫಲವೇನು ?
ಕುರುಡನ ಕಯ್ಯ ಕನ್ನಡಿ ಇದ್ದ ಹಾಗೆ,
ಬರಡಾವಿಗೆ ಶಿಶು ಹುಟ್ಟಿದ ಹಾಗೆ
ಕರಡಿಗೆ ಕಣ್ಣು ಬೇನೆ ಬಂದ ಹಾಗೆ,
ಕುರುಡಿಗೆ ಮಕ್ಕಳಾದ ಹಾಗೆ,
ದೀನನ ಮನೆಯಲ್ಲಿ ಹೊನ್ನಿದ್ದ ಹಾಗೆ
ಇವರೇನ ಮಾಡಿದರೇನು ?-
ತಮ್ಮ ಹಾನಿ ವೃದ್ಧಿಯನರಿದನ್ನಕ್ಕ
ಕಾಲ ಕಾಮಾದಿಗಳ ಬಾಯೊಳಗೆ ಸಿಕ್ಕಿ
ಅಗಿದಗಿದು ತಿನಿಸಿಕೊಳ್ಳುತಿಪ್ಪರಲ್ಲದೆ
ಎನ್ನದೇವ ಬಸವಪ್ರಿಯ ಕೂಡಲ ಚೆನ್ನಬಸವಣ್ಣ.

ಈ ರೀತಿಯಾಗಿ ಜ್ಞಾನ -ಕ್ರಿಯೆ; ಕ್ರಿಯೆ-ಜ್ಞಾನಗಳೆರಡೂ ಬೇಕೆನ್ನುತ್ತಾರೆ.

ಷಟಸ್ಥಲ ದರ್ಶನ :

ಶರಣರ ಆಧ್ಯಾತ್ಮಾನುಭವದ ನಿಲವನ್ನರಿಯಬೇಕಾದರೆ ಅವರ ಶಿವಯೋಗ (ಲಿಂಗಾಂಗಸಾಮರಸ್ಯ) ಸಾಧನೆಯ ಷಟ್‌ಸ್ಥಲ ದರ್ಶನವನ್ನು ಕಾಣಬೇಕು. ಇಷ್ಟಲಿಂಗೋಪಾಸನೆಯ ಸದ್ಭಕ್ತನು ತನ್ನತಂರಂಗ ಸಾಧನೆಯಲ್ಲಿ ಆರು ಹಂತಗಳನ್ನು ಅನುಭವಿಸುತ್ತಾ ಸಾಗಿ ನಿರ್ವಯಲಾಗುತ್ತಾನೆ. ಈ ಆರು ಹಂತಗಳಿಗೆ ಷಟ್‌ಸ್ಥಲಗಳೆಂದು ಕರೆಯಲಾಗಿದೆ. ಪ್ರತಿಯೊಂದು ಸ್ಥಲದಲ್ಲಿಯೂ ಲಿಂಗಾಂಗ ಸಾಮರಸ್ಯದ ಅನುಭವ ಪಡೆಯುವನು. ಆದ್ದರಿಂದಲೇ ಷಟ್‌ಸ್ಥಲವು ಏಕಕಾಲಕ್ಕೆ ಕ್ರಮಸಮುಚ್ಚಯವೂ - ಸಮಸಮುಚ್ಚಯವೂ ಆಗಿದೆ. ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗಿ, ಶರಣ, ಐಕ್ಯ ಈ ಆರು ಸ್ಥಲಗಳಲ್ಲಿಯೂ ಬಹಿರಂಗದ ಆಚರಣೆಯಲ್ಲಿ ಕೆಲವೊಂದು ಲಕ್ಷಣಗಳು ಅಳವಡಬೇಕೆಂದು ಶರಣ ಅಪ್ಪಣ್ಣನವರು ಅರುಹುತ್ತಾರೆ-

ಭಕ್ತನಾದರೆ, ಮುಕ್ತಿಪಥಗತಿಗೆ ನಿಲುಕದಂತಿರಬೇಕು.
ಮಹೇಶ್ವರನಾದರೆ, ಮನದಲ್ಲಿ ಮನ್ಮಥ ಹೊಗದಂತಿರಬೇಕು.
ಪ್ರಸಾದಿಯಾದರೆ, ತನ್ನ ಪ್ರಾಣವೇ ಅಗ್ನಿ ಸ್ವರೂಪವೆಯಾಗಿರಬೇಕು.
ಪ್ರಾಣಲಿಂಗಿಯಾದರೆ, ಪ್ರಾಣವ ನಿಲ್ಲಿಸಿ ಲಿಂಗಪ್ರಾಣೆಯಾಗಿರಬೇಕು.

ಶರಣನಾದರೆ, ತನ್ನ ಮರಣಬಾಧೆಯ ಗೆಲಿದಿರಬೇಕು.
ಐಕ್ಯನಾದರೆ, ಅನ್ನಪಾನಾದಿಗೆ ಇಚ್ಛೆ ಇಲ್ಲದಿರಬೇಕು.
ನಿರ್ವಯಲಾದರೆ ಸರ್ವರ ಕಣ್ಣಿಗೆ ಬಯಲು ಬಯಲಾಗಿರಬೇಕು.
ಈ ಷಟ್‌ಸ್ಥಲ ಸಂಪನ್ನತೆಯಲ್ಲಿ ಇರಬಲ್ಲಡೆ
ಎಮ್ಮ ಬಸವಪ್ರಿಯ ಕೂಡಲ ಚೆನ್ನಬಸವಣ್ಣಾ.

ಈ ರೀತಿ ಆರು ಸ್ಥಲಗಳಲ್ಲಿ ಆರು ಲಕ್ಷಣ ಅಳವಟ್ಟು, ಅಂತಿಮವಾಗಿ ನಿರ್ವಯಲ ಸ್ಥಿತಿಯನ್ನು ಅನುಭವಿಸಬೇಕು ಎನ್ನುತ್ತಾರೆ ಶರಣ ಅಪ್ಪಣ್ಣನವರು.

ಇಂತಹ ಸಾಧನೆಯ ಲಿಂಗಾನುಭಾವವನ್ನು ಬೆಡಗಿನ ವಚನ, ರೂಪದಲ್ಲಿ ಬಹು ಮನೋಜ್ಞವಾಗಿ ಮಾರ್ಮಿಕವಾಗಿ ತಿಳಿಯಪಡಿಸಿದ್ದಾರೆ.

ಬೆಡಗಿನ ವಚನ :

ವಚನ ಸಾಹಿತ್ಯದಲ್ಲಿ ಬೆಡಗಿನ ವಚನಗಳಿಗೆ ಬಹು ಮಹತ್ವದ ಸ್ಥಾನವಿದೆ. ಬೆಡಗಿನ ವಚನಗಳಲ್ಲಿ ಸಾಮಾನ್ಯವಾಗಿ ವಾಚ್ಯಾರ್ಥ ಲಕ್ಷ್ಯಾರ್ಥಗಳೆರಡೂ ಉಂಟು. ಈ ಅರ್ಥ ಮಥನದಿಂದ ಅನುಭಾವದ ಸ್ಥಿತಿಯನ್ನು ಗೌಪ್ಯವಾಗಿ ಹೇಳುವ ಉದ್ದೇಶವೂ ಇದ್ದಿರಬಹುದು. ಇನ್ನೊಂದು ರೀತಿಯಿಂದ ಹೇಳುವುದಾದರೆ - "ಸಂಸ್ಕೃತವನ್ನು ಅರ್ಥೈಸಲು ಆಳವಾದ ಪಾಂಡಿತ್ಯ ಅನುಭವ- ಅಭ್ಯಾಸ ಬೇಕು. ಕನ್ನಡವೇನು ಬಹಳ ಹಗುರು, ದನಕಾಯುವ ಹುಡುಗರೂ ಅರ್ಥ ಹೇಳಬಲ್ಲರು" ಎಂದು ಸಂಸ್ಕೃತ ಪಂಡಿತರು ಬಹುಶಃ ಬಸವಾದಿ ಶರಣರ ಮುಂದೆ ಟೀಕಿಸಿರಬಹುದೆಂದು ಕಾಣುತ್ತದೆ.

ಒಟ್ಟಿನಲ್ಲಿ ಬೆಡಗಿನ ವಚನಗಳು ಸಾವಿರಾರು ದೊರೆಯುತ್ತವೆ. ಶರಣ ಬಸವಣ್ಣನವರೂ ಕೂಡ ತಾವು ಕಂಡುಂಡ ಅನುಭಾವಾಮೃತವನ್ನು, ಆ ಸಾಧನೆಯ ವಿವರವನ್ನು ತಮ್ಮ ಹತ್ತಾರು ವಚನಗಳಲ್ಲಿ ಬಹು ಮನೋಜ್ಞವಾಗಿ ಅನುಭಾವಪೂರ್ಣವಾಗಿ ವಿವರಿಸಿದ್ದಾರೆ. ಇಲ್ಲಿ ಒಂದು ವಚನವನ್ನು ನೋಡಬಹುದು.

ನಾನೊಂದು ಊರಿಗೆ ಹಾದಿಯ ಕೇಳಿಕೊಂಡು ಹೋಗುತ್ತಿರಲಾಗಿ,
ಮುಂದೆ ಅರಣ್ಯದೊಳಗೆ ಮೂರು ಬಟ್ಟೆಯಾಯಿತ್ತು.
ಎರಡು ಪಥವ ಬಿಟ್ಟು ಒಂದು ಪಥವ ಹಿಡಿದು ಬರುತ್ತಿರಲು,
ಮುಂದೆ ಮೂರು ಬಟ್ಟೆಯೂ ಒಂದಾದುವು.

ಆ ಮೂರು ಬಟ್ಟೆಯು ಕೂಡಿದ ಬಳಿಯಲಿ ಒಂದು ಬೆಟ್ಟ ಹುಟ್ಟಿತ್ತು.
ಆ ಬೆಟ್ಟವನು ಏರಬಾರದು, ಇಳಿಯಬಾರದು.
ಆ ಬೆಟ್ಟವ ಬಿಟ್ಟು ಹೋದರೆ ಎನಗೆ ಪಥವಿಲ್ಲವೆಂದು,
ಸುತ್ತಿ ಸುತ್ತಿ ನೋಡುತ್ತಿರಲಾಗಿ,
ಆರು ಮೆಟ್ಟಿನದೊಂದು ಏಣಿ ಹಾಕಿರುವುದ ಕಂಡೆ.
ಆ ಏಣಿಯ ಮೆಟ್ಟಿ ಮೆಟ್ಟಿ ಆ ಬೆಟ್ಟದ ತುಟ್ಟ ತುದಿಯನೇರಿ
ನೋಡಲಾಗಿ ಬಟ್ಟ ಬಯಲಾಗಿದ್ದಿತ್ತು.
ಆ ಬಟ್ಟ ಬಯಲೊಳಗೆ ಹೋಗುತ್ತಿರಲಾಗಿ
ನಾ ಎತ್ತ ಹೋದೆನೆಂದರಿಯೆನಯ್ಯಾ
ಬಸವಪ್ರಿಯ ಕೂಡಲ ಚೆನ್ನಬಸವಣ್ಣಾ.

ಇಂತಹ ಬೆಡಗಿನ ವಚನಗಳನ್ನು ಅರ್ಥೈಸುವಾಗ ಗಮನದಲ್ಲಿಟ್ಟುಕೊಳ್ಳಬೇಕಾದ ಒಂದು ಮುಖ್ಯ ಅಂಶವೆಂದರೆ, ದ್ವೈತ-ಅದ್ವೈತ-ವಿಶಿಷ್ಟಾದ್ವೈತ-ಭೇದಾಭೇದ ಇತ್ಯಾದಿ ಸಿದ್ಧಾಂತಗಳ ಹಿನ್ನೆಲೆಯಿಂದ ಅರ್ಥೈಸದೇ, ಕೇವಲ ಬಸವಾದಿ ಶರಣರ ಅನುಭವ ಸಿದ್ಧಾಂತದ ತಳಹದಿಯಲ್ಲಿಯೇ ನಿಂದು ಅರ್ಥೈಸಿದರೆ ಅದು ನಿಜವಾದ ಅನುಭಾವವು ಹೊರಹೊಮ್ಮುತ್ತದೆ. ಇಲ್ಲದಿದ್ದರೆ ಅರ್ಥವು ಅನರ್ಥವಾಗಿ ಅಭಾಸವೆನಿಸುತ್ತದೆ. ಶರಣರ ಸಿದ್ಧಾಂತದಲ್ಲಿ ಜೀವ-ಜಗತ್ತು-ದೇವ ಮೂರೂ ಅವಿನಾಭಾವ ಸಂಬಂಧವುಳ್ಳವುಗಳಾಗಿ, ಮೂರೂ ಸತ್ಯವೇ ಆಗಿರುವುದರಿಂದ ಮರ್ತ್ಯಲೋಕವು ಕರ್ತಾರನ ಕಮ್ಮಟವಾಗಿಯೂ, ಜೀವ ದೇವರು ಅವಿನಾಭಾವ ಸಂಬಂಧದಲ್ಲಿ ಸದ್ಗತವಾಗಿಯೂ ಇರುತ್ತವೆ. ಆದ್ದರಿಂದ ಪ್ರಾಪಂಚಿಕ ಬದುಕು ಹೇಯವಾಗದೇ ಶ್ರೇಯವಾಗಿದೆ. ತ್ಯಾಜ್ಯವೆನಿಸದೇ ಪೂಜ್ಯವೆನಿಸಿದೆ. ಈ ಹಿನ್ನೆಲೆಯಲ್ಲಿ ಬೆಡಗಿನ ವಚನಗಳ ಅನುಭಾವವನ್ನು ಸವಿದು ಆನಂದಿಸಬೇಕು.

ಮೇಲಣ ವಚನದಲ್ಲಿ ಶರಣ ಅಪ್ಪಣ್ಣನವರು ಷಟ್‌ಸ್ಥಲ ದರ್ಶನದ 'ಲಿಂಗಾಂಗಸಾಮರಸ್ಯ'ದ ಅನುಭಾವವನ್ನು ತಿಳಿಯಪಡಿಸುತ್ತಿದ್ದಾರೆ. "ನಾನೊಂದು ಊರಿಗೆ ಹಾದಿಯ ಕೇಳಿಕೊಂಡು ಹೋಗುತ್ತಿರಲಾಗಿ" ಎಂದರೆ 'ಲಿಂಗಾಂಗಸಾಮರಸ್ಯ'ವೆಂಬ ಸ್ಥಿತಿಯ ಬಗ್ಗೆ, ಅದನ್ನು ತಲುಪುವ ದಾರಿಯ ಕುರಿತು ಅರಿವು-ಆಚಾರ-ಅನುಭಾವವುಳ್ಳ ಯೋಗ್ಯ ಸದ್ಗುರುವನ್ನು ಕೇಳಿಕೊಂಡು ಗುರುತೋರಿದ ಮಾರ್ಗ ಇಷ್ಟಲಿಂಗೋಪಾಸನೆಯ ವಿಚಾರ ವಿಡಿದು ಸಾಧನೆಗೈಯುತ್ತಿರಲಾಗಿ ;

"ಮುಂದೆ ಅರಣ್ಯದೊಳಗೆ ಮೂರು ಬಟ್ಟೆಯಾಯಿತ್ತು" ಎಂದರೆ ಅರುವಿನೊಳಗಿರುವ ಚಿದಾರಣ್ಯದಲ್ಲಿ ಭಕ್ತಿ-ಜ್ಞಾನ-ಕ್ರಿಯೆಗಳೆಂದು ಮೂರು ದಾರಿಗಳು ಗೋಚರವಾದವು;

"ಎರಡು ಪಥವ ಬಿಟ್ಟು ಒಂದು ಪಥವ ಹಿಡಿದು ಬರುತ್ತಿರಲು" ಎಂದರೆ ಜ್ಞಾನ-ಕ್ರಿಯೆಗಳೆಂಬ ಎರಡು ದಾರಿ ಬಿಟ್ಟು ಭಕ್ತಿ ಎಂಬ ಶ್ರೇಷ್ಠಮಾರ್ಗವಿಡಿದು ಮುಂದೆ ಸಾಗಲು ;

"ಮುಂದೆ ಮೂರು ಬಟ್ಟೆಯೂ ಒಂದಾದುವು" ಎಂದರೆ ಭಕ್ತಿ ಪಥದಲ್ಲಿಯೇ ಕ್ರಿಯಾ-ಜ್ಞಾನಗಳೆರಡೂ ಸಮಾವೇಶಗೊಂಡವು;

:ಆ ಮೂರು ಬಟ್ಟೆಯೂ ಕೂಡಿದ ಬಳಿಯಲಿ ಒಂದು ಬೆಟ್ಟ ಹುಟ್ಟಿತ್ತು" ಅಂದರೆ ಭಕ್ತಿಮಾರ್ಗದಲ್ಲಿ ಜ್ಞಾನ -ಕ್ರಿಯೆಗಳು ಕೂಡಿಕೊಂಡ ಸ್ಥಿತಿಯಲ್ಲಿ ಪರಾತ್ಪರ ಪರವಸ್ತು ಲಿಂಗದೇವನ ಅಸ್ತಿತ್ವ ಸ್ವರೂಪದ ಬೆಟ್ಟವು ಕಾಣಿಸಿಕೊಂಡಿತು;

"ಆ ಬೆಟ್ಟವನು ಏರಬಾರದು, ಇಳಿಯಬಾರದು," ಅಂದರೆ ಮಹಾಲಿಂಗದೊಂದಿಗೆ ನೇರವಾಗಿ ಸಂಪರ್ಕ ಸಾಧಿಸಲು ಸಧ್ಯಕ್ಕೆ ಸಾಧ್ಯವಿಲ್ಲ. ಯಾಕೇಂದರೆ ಲಿಂಗದಲ್ಲಿ ಆವ್ಹಾನ -ವಿಸರ್ಜ ನೆಗಳಿಲ್ಲ;

"ಆ ಬೆಟ್ಟವ ಬಿಟ್ಟು ಹೋದರೆ ಎನಗೆ ಪಥವಿಲ್ಲವೆಂದು ಸುತ್ತಿ ಸುತ್ತಿ ನೋಡುತ್ತಿರಲಾಗಿ ಆರು ಮೆಟ್ಟಿನದೊಂದು ಏಣಿ ಹಾಕಿರುವುದ ಕಂಡೆ" ಅಂದರೆ ಇಂತಹ ಮಹಾಲಿಂಗದೇವನನ್ನು ಹೊರತುಪಡಿಸಿ ಬೇರೆ ಮಾರ್ಗವೇ ಇಲ್ಲವೆಂದು ವಿಮರ್ಶಾಬುದ್ಧಿಯಿಂದ ಚಿಂತನಗೈಯುತ್ತಿರಲು 'ಭಕ್ತ, ಮಹೇಶ, ಪ್ರಸಾದಿ, ಪ್ರಾಣಲಿಂಗ, ಶರಣ, ಐಕ್ಯವೆಂಬ ಷಟ್‌ಸ್ಥಲಂಗಳ ಆರು ಮೆಟ್ಟಿಲಿನ ಏಣಿ (ನಿಚ್ಚಣಿಕೆ) ಗೋಚರವಾಯಿತು.

"ಆ ಏಣಿಯ ಮೆಟ್ಟಿ ಮೆಟ್ಟಿ ಆ ಬೆಟ್ಟದ ತುಟ್ಟ ತುದಿಯನೇರಿ ನೋಡಲಾಗಿ ಬಟ್ಟ ಬಯಲಾಗಿದ್ದಿತ್ತು. "ಅಂದರೆ ಷಟ್‌ಸ್ಥಲ ಮಾರ್ಗವೆಂಬ ಏಣಿಯ ನೇರುತ್ತ ಸಾಗಿದಂತೆ ಕೊನೆಗೆ ಆ ಬೆಟ್ಟದ ತುದಿಯು ಬಟ್ಟ ಬಯಲು, ನಿರಾಕಾರ ನಿಶ್ಶೂನ್ಯವಾಗಿತ್ತು.

"ಆ ಬಟ್ಟ ಬಯಲೊಳಗೆ ಹೋಗುತ್ತಿರಲಾಗಿ ನಾ ಎತ್ತ ಹೋದೆನೆಂದರಿಯೆನಯ್ಯಾ" ಅಂದರೆ ಆ ಅಂತಿಮ ನಿರಾಕಾರ ಮಹಾಲಿಂಗದೇವ

ಸ್ವರೂಪದಲ್ಲಿ ಅಂಗನು ಸಮರಸವಾದ ಬಳಿಕ ಅಂಗ-ಲಿಂಗಗಳೆರಡರ ಉಭಯ ಸ್ವರೂಪಗಳೂ ಅಳಿದು ಎರಡೂ ಬಯಲೊಳಗೆ ಬಯಲಾಗಿ ಬಿಟ್ಟವು.

ಈ ರೀತಿ ಲಿಂಗಾಂಗ ಸಾಮರಸ್ಯದ ದಿವ್ಯಾನುಭವವನ್ನು ಶರಣ ಅಪ್ಪಣ್ಣನವರು ತಮ್ಮದೇ ಆದ ವಿಶಿಷ್ಟ ಬೆಡಗಿನ ಶೈಲಿಯ ಮೂಲಕ ವಿವರಿಸಿದ್ದಾರೆ.

ಅಪ್ಪಣ್ಣನವರ ಬೋಳೀ ವಚನಗಳು :

ವಚನ ಸಾಹಿತ್ಯದಲ್ಲಿ ಬೆಡಗಿನ ವಚನಗಳಂತೆ 'ಬೋಳೀ ವಚನಗಳು' ಬಹು ಮಹತ್ವಪೂರ್ಣವಾಗಿವೆ. ಬೋಳೀ ಎಂದರೆ ನಿರ್ವಯಲ, ನಿರಾಕಾರ, ಬರಿದಾದ ಸ್ಥಿತಿ. ಅಂತಹ ನಿರ್ವಯಲ ಸ್ಥಿತಿಯ ಪರಮಾನಂದಾನುಭವವನ್ನು ಅಪ್ಪಣ್ಣನವರು ಸುಮಾರು ೨೪ ಬೋಳೀ ವಚನಗಳಲ್ಲಿ ಅರುಹಿದ್ದಾರೆ.

(೧) ಕಟ್ಟಬೇಕು ಮನವ ಮೆಟ್ಟಬೇಕು ಕರಣವ
ಸುಟ್ಟುರುಹಬೇಕು ಮದವ ಸಪ್ತ ವ್ಯಸನಗಳ
ತೊಟ್ಟಿಲವ ಮುರಿದು ಕಣ್ಣಿಯ ಹರಿದು
ಆ ಬಟ್ಟ ಬಯಲಲ್ಲಿ ನಿಂದರೆ
ಬಸವಪ್ರಿಯ ಕೂಡಲ ಚೆನ್ನಬಸವಣ್ಣ.

(೨) ಈಡಾಪಿಂಗಳ ಸುಷುಮ್ನನಾಳದ ಗಾಥಗಮ್ಯಗಳ
ಅರಿದು ನೋಡಿ ಬ್ರಹ್ಮರಂಧ್ರುವ ತಟಹಾಯ್ದು ಕಾಡ್ಯಾಡಿ
ಪಶ್ಚಿಮದೊಳು ಬೆರೆದರೆ ಬಸವಪ್ರಿಯ ಕೂಡಲ
ಚೆನ್ನಬಸವಣ್ಣ ತಾನೆ.

ಈ ರೀತಿಯಾಗಿ ಲಿಂಗಾನುಭವದ ನಿಲುಕಡೆಯ ಕುರಿತು, .ಯೋಗದ ಅಂತಿಮ ಸಾಧನೆಯ ಕುರಿತು ಇಂತಹ ವಚನಗಳಲ್ಲಿ ಅನುಭಾವವು ಹರಿಯುತ್ತಿದೆ.

ಅಪ್ಪಣ್ಣನವರ ಮಂತ್ರಗೋಪ್ಯ :

ಪ್ರಭುದೇವ, ಚೆನ್ನಬಸವಣ್ಣಾದಿಗಳಂತೆ ಶರಣ ಅಪ್ಪಣ್ಣನವರೂ ಕೂಡ 'ಮಂತ್ರಗೋಪ್ಯ' ವಿವರಿಸಿದ್ದಾರೆ. ಒಟ್ಟು ಹನ್ನೆರಡು ನುಡಿಗಳಲ್ಲಿ ಪರವಸ್ತುವು ಓಂ ನಮಃ ಶಿವಾಯ ಎಂಬ ಆದಿಯಕ್ಷರದಿಂದ ಜಗತ್ತಿನ ಉದಯ ಅಂಗನಿಗೆ ಗುರು ಕರುಣೆ, ಅಂಗನ ಸಾಧನೆ-ಸಿದ್ಧಿಗಳು ವಿವರಿಸಲ್ಪಟ್ಟಿವೆ-

(೧) ಆಧಾರವನ್ನೊತ್ತಿ ಊರ್ಧ್ವಮುಖವನು ಮಾಡಿ
ಮೇದಿನಿಯ ದಪ್ಪಗ್ನಿ ಮಂದ ಮಾಡಿ
ಶೋಧಿಸಿದ ಕರ್ಪುರದಂತಿಪ್ಪ ದೇಹದೊಳು
ವೇದಿಸಿತು ಗುರು ಕರುಣವೆಂಬ ಜ್ಯೋತಿ.

(೨) ನವಬಾಗಿಲಂಗಳಿಗೆ ನವಲಿಂಗ ಕಾವಲವು
ಕವಿವ ತಮಂಧಕ್ಕೆ ದಿವಾಕರನು
ಅವರೊಳಗಿಹ ಷಡುಸ್ಥಲ ಬ್ರಹ್ಮವಂ ನೋಡಿ
ಅವಿರಳವಾಗಿ ತೋರಿದಾ ಘನವು.

ಅಪ್ಪಣ್ಣ ಶರಣರ ವಚನ ಜ್ಯೋತಿ

ಆದಿ ನಿರಾಳ, ಮಧ್ಯ ನಿರಾಳ,
ಊರ್ಧ್ವ ನಿರಾಳ.
ಪ್ರಮಾಣು ನಿರಾಳ, ಅಪ್ರಮಾಣು ನಿರಾಳ,
ಅಕಾರವು ನಿರಾಳ, ಉಕಾರವು ನಿರಾಳ,
ಮಕಾರವು ನಿರಾಳ,
ನಿರಾಳವೆಂಬುದು ನಿರಾಳ, ಸುರಾಳವೆಂಬುದು ನಿರಾಳ,
ಅವಿರಳವೆಂಬುದು ನಿರಾಳ,
ಬಂದೆನೆಂಬುದು ನಿರಾಳ, ಹೋದೆನೆಂಬುದು ನಿರಾಳ.
ಅದೆಂತೆಂದಡೆ
ಪ್ರಣವ ನಿರಾಳವಾದ ಕಾರಣ ಪ್ರತಿಯಿಲ್ಲ.
ಪ್ರತಿಯಿಲ್ಲವಾಗಿ ಅಪ್ರತಿಮ ನಮ್ಮ ಶರಣ
ಬಸವ ಪ್ರಿಯ ಕೂಡಲಚೆನ್ನಸಂಗಮದೇವ.

೪. ಶರಣೆ ಲಿಂಗಮ್ಮನವರ ಅನುಭಾವ
(ಸಾಧನೆ - ಸಿದ್ಧಿ)

ಶರಣ ಹಡಪದ ಅಪ್ಪಣ್ಣನವರ ಪುಣ್ಯಾಂಗನೆ ಲಿಂಗಮ್ಮ, ಅನುಭಾವದ ನಿಲವಿನಲ್ಲಿ ಅಪ್ಪಣ್ಣನವರಿಗಿಂತ ಒಂದು ತೂಕ ಹೆಚ್ಚೇನೋ ಎಂಬಂತಹ ಸಾಧನೆ. ಶರಣ ಸಂಸ್ಕೃತಿಯಲ್ಲಿ ಶರಣೆಯರದು ಬಹು ಮಹತ್ತರ ಪಾತ್ರವಿದೆ. ಬಾಳ ಗಾಡಿಗೆ ಸತಿ-ಪತಿಗಳಿಬ್ಬರೂ ಎರಡು ಗಾಲಿಗಳಿದ್ದಂತೆ. ಎರಡೂ ಭದ್ರವಾಗಿದ್ದರೇನೇ ಜೀವನಗಾಡಿ ಸರಾಗವಾಗಿ ಸಾಗುವುದು. ಅಂತೆಯೇ ಬಸವಾದಿ ಶರಣರು 'ಸತಿಪತಿಗಳೊಂದಾದ ಭಕ್ತಿ ಹಿತವಾಗಿಪ್ಪುದು ಶರಣಂಗೆ' ಎಂದಿದ್ದಾರೆ.

ಶರಣ ಅಪ್ಪಣ್ಣ-ಲಿಂಗಮ್ಮರದು ಭಕ್ತಿ ದಾಂಪತ್ಯ. ಅಲ್ಲಿ ವಿರಸಕ್ಕೆಡೆಯಿಲ್ಲ. ಲಿಂಗಾನುಭಾವದ ನಿಲುಕಡೆಯ ನಿಬ್ಬೆರಗಿನಲ್ಲಿ ಈರ್ವರೂ ದಿವ್ಯಾನಂದ ಹೊಂದಿದವರು. ಅಪ್ಪಣ್ಣ ಶರಣ ಧರ್ಮಗುರು ಬಸವಣ್ಣನವರ ಪಡಿನೆಳಲಾಗಿ ಸೇವೆಗೈದರೆ ಲಿಂಗಮ್ಮ ಶರಣೆ ಮಾಮನೆಯ ಪ್ರಸಾದ ದಾಸೋಹದ ಜವಾಬ್ದಾರಿ ಹೊತ್ತು ಕಾಯಕ ಜೀವನ ಬಾಳಿದವಳು.

ಶರಣೆ ಲಿಂಗಮ್ಮಳ ಅಂತರಂಗ ಸಾಧನೆ-ವಚನಾನುಭವ ನೋಡಿದರೆ ಬಸವಾಲ್ಲಮಚೆನ್ನಬಸವರೂ ಬೆರಗಾಗಿ ನಿಲ್ಲಬೇಕು. ಇಂತಹ ದಿವ್ಯ ಸ್ಥಿತಗೇರಿದರೂ ಸದುವಿನಯದ ಮಂಗಲಮೂರ್ತಿ ಆ ತಾಯಿ. ಜ್ಯೋತಿ ಮುಟ್ಟಿ ಜ್ಯೋತಿಯೇ ಆಗುವಂತೆ ಕರುಣಾಮೂರ್ತಿ ಬಸವಾದಿ ಶರಣರ ಸಾನಿಧ್ಯದಲ್ಲಿ ಈ ತಾಯಿಯೂ ಗುರು-ಲಿಂಗ-ಜಂಗಮ-ಪ್ರಸಾದ ಸ್ವರೂಪವೇ ತಾನಾಗಿ ನಿಂದವಳು. ಅಂತೆಯೇ 'ತುಂಬಿದ ಕೊಡ ತುಳುಕದು' ಎಂಬಂತೆ ಅಹಂಕಾರ ತಲೆಗೇರದೇ ವಿನಯಭಾವದಿಂದ ತನ್ನ ಸಾಧನೆಯನ್ನು ಬಸವಾದಿ ಶರಣರ ಕರುಣೆಯೆಂದೇ ಮುಂದಿಡುವಳು.

ಬಸವೇಶ್ವರ, ಚೆನ್ನಬಸವೇಶ್ವರ, ಮಡಿವಾಳಯ್ಯ
ಅಲ್ಲಮಪ್ರಭು ಹಡಪದಪ್ಪಣ್ಣ-
ತಮ್ಮೆಲ್ಲರ ತೊತ್ತಿನ ಪಡಿದೊತ್ತಿನ ಮಗಳೆಂದು
ಹೊತ್ತು ಹೊತ್ತಿಗೆ ಎಚ್ಚರವ ಪಾಲಿಸಿ
ರಕ್ಷಣೆಯ ಮಾಡಿದ ಕಾರಣದಿಂದ,

ತಮ್ಮೆಲ್ಲರ ಶ್ರೀಪಾದದಲ್ಲಿಯೇ ನಿಜಮುಕ್ತಳಾದೆನಯ್ಯಾ
ಅಪ್ಪಣ್ಣಪ್ರಿಯ ಚೆನ್ನಬಸವಣ್ಣಾ.

ಮರವೆಯ ಮಾನವ -ಅರಿವಿನ ಶರಣ :

ಶರಣೆ ಲಿಂಗಮ್ಮ ತಾಯಿಯವರು ಶರಣ ಜೀವನದ ಮಹತ್ವವನ್ನು ಅರಹುತ್ತಾ, ಇಂದಿನ ಮಾನವ ಜೀವನದ ವಿಕೃತ ಬಾಳುವೆಯನ್ನು ವಿಡಂಬಿಸಿದ್ದಾರೆ. ಹಾಗೂ ಅರಿವಿನ ಶರಣ ಜೀವನವನ್ನು ಎತ್ತಿ ತೋರಿಸಿದ್ದಾರೆ.

ಆಗದಾಗದು ಮರ್ತ್ಯದ ಮನುಜರಿಗೆ ಶಿವಸುಖ !
ಕಾಳು ವಿಷಯದಲ್ಲಿ ಬಿದ್ದು
ನುಡಿವುತ್ತ ಮರವೆ, ನಡೆವುತ್ತ ಮರವೆ,
ಮೆಟ್ಟುತ್ತ ಮರವೆ, ಕೇಳುತ್ತ ಮರವೆ, ನೋಡುತ್ತ ಮರವೆ.
ಇಂತು ಮರಹಿನೊಳಗಿದ್ದು
ಅರುಹ ಕಂಡೆಹೆವೆಂಬ ಅಣ್ಣಗಳಿರಾ, ನೀವು ಕೇಳಿರೋ.
ಇಂತು ಮರಹಿನೊಳಗಿದ್ದು
ಅರುಹ ಕಂಡಿಹೆವೆಂಬ ಅಣ್ಣಗಳಿರಾ, ನೀವು ಕೇಳಿರೋ.
ನಮ್ಮ ಶರಣರ ನಡೆ ಎಂತೆಂದಡೆ
ಐದು ಗುಣವನೆ ಅಳಿದು. ಐದು ಗುಣವನೆ ಹಿಡಿದು,
ನುಡಿವುತ್ತ ಲಿಂಗವಾಗಿ ನುಡಿವರು ;
ನಡೆವುತ್ತ ಲಿಂಗವಾಗಿ ನಡೆವರು :
ಮುಟ್ಟುತ್ತ ಲಿಂಗವಾಗಿ ಮುಟ್ಟುವರು ;
ಕೇಳುತ್ತ ಲಿಂಗವಾಗಿ ಕೇಳುವರು ;
ನೋಡುತ್ತ ಲಿಂಗವಾಗಿ ನೋಡುವರು;
ಸರ್ವಾಂಗವು ಲಿಂಗವಾಗಿ, ಅಂಗಲಿಂಗವೆಂಬ ಉಭಯವಳಿದು,
ಮಂಗಳದ ಮಹಾಬೆಳಗಿನಲಿ ಲಿಂಗವೇ ಗೂಡಾಗಿದ್ದ ಕಾರಣ
ಅಪ್ಪಣ್ಣ ಪ್ರಿಯ ಚೆನ್ನಬಸವಣ್ಣಾ.

ಮರೆವಿನ ಸೃಷ್ಟಿಯಲ್ಲಿ ಅಂದರೆ ಅಜ್ಞಾನದಲ್ಲಿ ಮುಳುಗಿರುವ ಭೋಗವಾದಿಗಳಿಗೆ ಶಿವಸುಖ ಸಾಧ್ಯವಾಗದು. ಘೋರವಾದ ವಿಷಯ ವಾಸನೆಯಲ್ಲಿ

ಬಿದ್ದು ಪರಧನ, ಪರಸತಿ, ಅಪಾನ ಪಾನ, ಅಭೋಜ್ಯ ಭೋಜನದಲ್ಲಿ ನಿರತರಾಗಿ ಇಂದ್ರಿಯ ಭೋಗದಲ್ಲಿಯೇ ಮೈಮರೆತಿರುವ ಮಾನವರಿಗೆ ಶಿವಸುಖ ಅದೆಂತು ಸಾಧ್ಯ ಎಂದು ಲಿಂಗಮ್ಮ ತಾಯಿಯವರು ಕೇಳುತ್ತಾರೆ. ಇಂಥವರ ನಡೆ-ನುಡಿ-ವ್ಯವಹಾರ-ಬದುಕು ಎಲ್ಲವೂ ಅಜ್ಞಾನದ್ದೇ ಆಗಿರುತ್ತದೆ. ಇಂಥವರು ಮರವೆಗೆ ಒಳಗಾಗಿದ್ದರೂ ಡಾಂಭಿಕವಾಗಿ ಆಡಂಬರದಲ್ಲಿ ನಾವು ಅರುಹ ಕಂಡಿದ್ದೇವೆ ಎಂದು ನುಡಿಯುವರು.

ಶರಣೆ ಲಿಂಗಮ್ಮನವರು ಇಂತಹ ಮರೆವಿನ ಪಂಡಿತರಿಗೆ ಬುದ್ಧಿ ಹೇಳುತ್ತ, ನಮ್ಮ ಶರಣರ ನಡೆ (ಜೀವನ) ಯಾವ ರೀತಿಯಲ್ಲಿದೆ ನೋಡಿ ಎಂದು ತಿಳಿಯಪಡಿಸುತ್ತಾರೆ.

ಶಬ್ದ, ಸ್ಪರ್ಶ, ರೂಪ, ರಸ, ಗಂಧಗಳೆಂಬ ಐದು ಇಂದ್ರಿಯ ಗುಣಗಳನ್ನು ಅಳಿದು, ಆ ಐದಿಂದ್ರಿಯಗಳಿಗೂ ಪ್ರಸಾದಲಿಂಗ, ಆಚಾರಲಿಂಗ, ಶಿವಲಿಂಗ, ಗುರುಲಿಂಗ, ಜಂಗಮಲಿಂಗಗಳ ಸಂಬಂಧ ಮಾಡಿಕೊಂಡು ಜೀವನ ಸಾಗಿಸುವರಾದ ಕಾರಣ, ನುಡಿವುದೆಲ್ಲಾ ಗುರುಲಿಂಗ ಸ್ವರೂಪ, ನಡೆವುದೆಲ್ಲಾ ಆಚಾರಲಿಂಗ ಸ್ವರೂಪ, ಮುಟ್ಟಿದ್ದೆಲ್ಲಾ ಜಂಗಮಲಿಂಗ ಸ್ವರೂಪ, ಕೇಳಿದ್ದೆಲ್ಲಾ ಪ್ರಸಾದಲಿಂಗ ಸ್ವರೂಪ, ನೋಡಿದ್ದೆಲ್ಲಾ ಶಿವಲಿಂಗ ಸ್ವರೂಪ, ಮನದಲ್ಲಿ ನೆನೆವುದೆಲ್ಲಾ ಮಹಾಲಿಂಗ ಸ್ವರೂಪವಾಗುವುದಾದ ಕಾರಣ ಸರ್ವಾಂಗವೂ ಲಿಂಗವಾಗುವುದು ಕೊನೆಗೆ ಅಂಗ-ಲಿಂಗವೆಂಬ ಉಭಯವೂ ಅಳಿದು ಆ ನಿಷ್ಕಲಲಿಂಗದ ಮಹಾಬೆಳಗಿನಲಿ ಶರಣನ ಬಾಳುವೆಯು ಬೆಳಕಿನ ಸ್ವರೂಪದಲ್ಲಿ ಸಾಗುವುದು.

ಈ ರೀತಿಯಾಗಿ ಶರಣ ಜೀವನ ಸಾಗುವುದೆಂದು ಶರಣೆ ಲಿಂಗಮ್ಮ ತಾಯಿಯವರು ತಿಳಿಯಪಡಿಸುತ್ತಾರೆ.

ಚಂಚಲ ಮನವನ್ನು ನಿಶ್ಚಲ ಮಾಡುವ ಬಗ್ಗೆ :

ಮನುಷ್ಯನನ್ನು ಇಂದ್ರಿಯ ವಿಷಯ ಭೋಗದಿಂದ ಲಿಂಗಭೋಗದತ್ತ ತಿರುಗಿಸಬೇಕಾದರೆ ಚಂಚಲವಾದ ಮನವನ್ನು ನಿಶ್ಚಲಮಾಡಬೇಕು. ಆದರೆ ನಿಶ್ಚಲಮಾಡುವೆನೆಂದು ತನುವ ಕರಗಿಸಿ ಬಳಲಿಸಿ ಕಳವಳಿಸಿ ಕಣ್ಣು ಕಾಣದ ಅಂಧಕರಂತೆ ಮುಂದುಗಾಣದೆ ಸಂದೇಹದಲ್ಲಿ ಮುಳುಗುವಂತಾಗುತ್ತದೆ. ಈ ರೀತಿ ಮಾಡಿದರೆ ಸಾಲದು, ನಿರರ್ಥಕ. ದೇವರನ್ನು ಕಾಣಬೇಕಾದರೆ ಮನವು ಗಾಳಿ ಬೀಸದ ಜಲದಂತೆ, ಮೋಡವಿಲ್ಲದ ಸೂರ್ಯನಂತೆ, ಬೆಳಗಿದ ದರ್ಪಣದಂತೆ ನಿರ್ಮಲವಾಗಬೇಕು.

ಚಂಚಲಯುಕ್ತವಾದ ಮನವಗೆದ್ದಿಹೆನೆಂದು ತನುವ ಕರಗಿಸಿ, ಕಾಯವ ಮರಗಿಸಿ, ನಿದ್ರೆಯ ಕೆಡಿಸಿ ವಿದ್ಯೆಯ ಕಲಿತಿಹೆನೆಂಬುದು ಬುದ್ಧಿಗೇಡಿತನ. ಬಸವಾದಿ ಶರಣರು ಮನವನು ಎಂತು ಗೆದ್ದರೆಂದರೆ -ಕಾಮಕ್ರೋಧವನು ನೀಗಿ, ಲೋಭ, ಮೋಹ, ಮದ, ಮತ್ಸರವನು ಛೇದಿಸಿ, ಆಸೆ ರೋಷವಳಿದು ಜಗದ ಪಾಶವ ಬಿಟ್ಟು, ಮರುಗಿಸುವ ಕಾಯವನೇ ಪ್ರಸಾದ ಕಾಯವ ಮಾಡಿ ಸಲುಹಿದರು. ಕೆಡಿಸುವ ನಿದ್ರೆಯನೆ ಯೋಗ ಸಮಾಧಿಯ ಮಾಡಿ ಸುಖವ ನೇಡಿಸಿ ಜಗವನು ಗೆದ್ದರು ಎಂದು ಶರಣೆ ಲಿಂಗಮ್ಮ ತಾಯಿಯವರು ತಿಳಿಸುತ್ತಾರೆ. ಇನ್ನೊಂದು ವಚನದಲ್ಲಿ ಮನವ ನಿಲ್ಲಿಸುವ ಬಗ್ಗೆ ಹೇಳುತ್ತಾರೆ-

ಮನವ ನಿಲಿಸಿಹೆನೆಂದು, ಆ ಮನದ ನೆಲೆಯ ಕಾಣದೆ,
ಅರುಹು ಮರವೆಗೊಳಗಾಗಿ, ಕಳವಳವ ಮುಂದು ಮಾಡಿ,
ಚಿಂತೆ ಸಂತೋಷವನೊಡಲು ಮಾಡಿ,
ಭ್ರಾಂತುಗೊಂಡು ತಿರುಗುವ ಮನುಜರಿರಾ, ನೀವು ಕೇಳಿರೋ-
ಮನವ ನಿಲಿಸುವುದಕ್ಕೆ ಶರಣರ ಸಂಗಬೇಕು
ಜನನ ಮರಣವ ಗೆಲಬೇಕು. ಗುರುಲಿಂಗಜಂಗಮದಲ್ಲಿ ವಂಚನೆಯಿಲ್ಲದೆ,
ಮನದ ಸಂಚಲವ ಹರಿದು,
ನಿಶ್ಚಿಂತವಾಗಿ ನಿಜವ ನಂಬಿ ಚಿತ್ತ ಸುಯಿದಾನವಾದಲ್ಲದೆ,
ಮನದೊಳಗೆ ಲಿಂಗವು ಅಚ್ಚೊತ್ತಿದಂತಿರದೆಂದರು,
ಬಸವಣ್ಣನ ಶರಣರು, ನಮ್ಮ ಅಪ್ಪಣ್ಣ ಪ್ರಿಯ ಚೆನ್ನಬಸವಣ್ಣ.

ಮನವ ನಿಲ್ಲಿಸಬೇಕಾದರೆ ಶರಣರ ಸಂಗ ಅವಶ್ಯಬೇಕು. ಮನವ ಗೆಲ್ಲಬೇಕಾದರೆ ತಪ-ಜಪ-ಧ್ಯಾನ-ಮೌನಗಳು ಬೇಕಾಗಿಲ್ಲ. ಶರಣರ ಸಂಗವೇ ಬೇಕು. ಶರಣರ ಸಂಗದಲ್ಲಿ ಮನದ ವಿಕಾರಗಳು ದೂರವಾಗುತ್ತವೆ. ಆದ್ದರಿಂದಲೇ ಧರ್ಮಪಿತ ಬಸವಣ್ಣನವರೂ ಕೂಡ 'ಕೂಡಲಸಂಗಮದೇವರನರಿವಡೆ ಶರಣರ ಸಂಗವೇ ಮೊದಲು ಮೊದಲು' ಎಂದು ಹೇಳಿದ್ದಾರೆ; ಆದ್ದರಿಂದ ಶರಣರ ಸಂಗದ ಮಹತ್ವವನ್ನು ಲಿಂಗಮ್ಮ ಶರಣೆಯು ತಿಳಿಸುತ್ತಾಳೆ. ಮರ ಮರ ಮಥನಿಸಿ ಅಗ್ನಿ ಹುಟ್ಟಿ ತರುಮರಾದಿಗಳ ಸುಡುವಂತೆ, ಶರಣರ ಅನುಭಾವ ಮಥನದಿಂದ ಮನದ ಕಲ್ಮಷ ದಹಿಸಿ ಮನ ನಿರ್ಮಲವಾಗಿ ಅಲ್ಲಿಯೇ ಪರಮಾತ್ಮನ ಇರವು ತೋರುತ್ತದೆ.

ದೇವರನ್ನು ಕಾಣುವ ಬಗೆ :

ಶರಣೆ ಲಿಂಗಮ್ಮ ತಾಯಿಯು ದೇವರನ್ನು ಕಾಣುವ ಬಗೆಯನ್ನು ತಮ್ಮ ಅನುಭಾವದಿಂದ ತಿಳಿಯಪಡಿಸುತ್ತಾರೆ. ದೇವನನು ಅರಸುವುದಕ್ಕೆ ಚಿತ್ತ ಆವ ರೀತಿ ಇರಬೇಕೆಂಬುದನ್ನು ಹೇಳಿದ್ದಾರೆ-

ಹೊತ್ತು ಹೊತ್ತಿಗೆ ಮೆತ್ತೆಹಾಕಿ ತಿಪ್ಪೆಯಲ್ಲಿ ಕರ್ಪುರವನರಸುವಂತೆ
ತಿಪ್ಪೆಯಂತಹ ಒಡಲೊಳಗೆ ಕರ್ತೃವನರಸಿಹೆನೆಂಬ ಅಣ್ಣಗಳಿರಾ,
ನೀವು ಕೇಳಿರೋ, ಹೇಳಿಹೆನು.
ಈ ಕರ್ತೃವನರಸುವುದಕ್ಕೆ ಚಿತ್ತ ಹೇಗಾಗಬೇಕೆಂದಡೆ-
ಜಲದೊಳಗಣ ಸೂರ್ಯನ ಪ್ರತಿಬಿಂಬದಂತಿರಬೇಕು.
ಮೋಡವಿಲ್ಲದ ಚಂದ್ರಮನಂತಿರಬೇಕು.
ಬೆಳಗಿದ ದರ್ಪಣದಂತಿರಬೇಕು.
ಇಂತು ಚಿತ್ತಶುದ್ಧವಾದಲ್ಲದೆ,
ಆ ಕರ್ತೃವಿನ ನೆಲೆಯ ಕಾಣಬಾರದೆಂದರು,
ನಮ್ಮ ಅಪ್ಪಣ್ಣ ಪ್ರಿಯ ಚೆನ್ನಬಸವಣ್ಣನ ಶರಣರು.

ಈ ರೀತಿ ಚಿತ್ತವು ಶುದ್ಧವಾದ ಬಳಿಕ ದೇವನನ್ನು ಕಾಣಲು (ಅನುಭವಿಸಲು) ಸಾಧ್ಯವೆನ್ನುತ್ತಾರೆ ಲಿಂಗಮ್ಮ ತಾಯಿಯವರು. ಈ ಮಹಾಘನವ ಕಾಂಬುವದಕ್ಕೆ ಹಸಿವು ಕೆಡಬೇಕು, ತೃಷೆಯಡಗಬೇಕು, ವ್ಯಸನ ನಿಲ್ಲಬೇಕು, ನಿದ್ರೆ ಹರಿಯಬೇಕು, ಜೀವನ ಬುದ್ಧಿ ಹಿಂಗಬೇಕು, ಮನ ಪವನ ಬಿಂದು ಒಡಗೂಡಬೇಕು, ಚಿತ್ತ ಒತ್ತಟ್ಟಿಗೆ ಹೋಗದಿರಬೇಕು, ಹೊತ್ತು ಹೊತ್ತಿಗೆ ಉತ್ತರವನೇರಿ ಬೆಚ್ಚು ಬೇರಿಲ್ಲದೆ ಲಿಂಗದೊಳಗೆ ಅಚ್ಯೋತ್ತಿದಂತೆ ಬೆರೆದಡೆ, ಕತ್ತಲೆ ಹರಿವುದು, ಮರವೆ ಹಿಂಗುವುದು, ನಿದ್ರೆ ಹರಿವುದು, ಹಸಿವು ಕೆಡುವುದು, ತೃಷೆಯಡಗುವುದು, ವ್ಯಸನ ನಿಲುವುದು, ಇವೆಲ್ಲವನೂ ಹಿಂಗಿಸಿ ತಾ ಲಿಂಗವ್ಯಸನಿಯಾದರೆ ಮುಂದೆ ಮಹಾಮಂಗಳದ ಬೆಳಗು ಕಾಣುವುದು ಎಂದು ಶರಣೆ ಲಿಂಗಮ್ಮ ತಾಯಿಯವರು ತಿಳಿಸುತ್ತಾರೆ.

ಲಿಂಗವ್ಯಸನಿಯಾದ ನಂತರ ಲಿಂಗಾಂಗಸಾಮರಸ್ಯವು ಸಹಜವಾಗಿ ಅಳವಡುತ್ತದೆಯೆಂದು ಶರಣೆಲಿಂಗಮ್ಮನವರು ಕೆಳಗಿನಂತೆ ಅರುಹಿದ್ದಾರೆ-

ಅಂಗವೆಂದಡೆ ಲಿಂಗದೊಳಡಗಿತ್ತು;
ಲಿಂಗವೆಂದಡೆ ಅಂಗದೊಳಡಗಿತ್ತು.
ಅಂಗದೊಳಡಗಿದ ಲಿಂಗವನೆ ಕಂಗಳಲ್ಲಿ
ಹೆರೆಹಿಂಗದೆ ನೋಡಿದಡೆ ಮಂಗಳದ ಮಹಾಬೆಳಗು ಕಾಣಿಸಿತ್ತು.
ಇಂತಪ್ಪ ಮಂಗಳದ ಮಹಾಬೆಳಗು ಕಾಣಿಸಿತ್ತು.
ಇಂತಪ್ಪ ಮಂಗಳದ ಮಹಾಬೆಳಗ ತೋರಿದ ಶರಣರಂಘ್ರಿಗೆ
ಎರಗಿ ಸುಖಿಯಾದೆನಯ್ಯಾ,
ಅಪ್ಪಣ್ಣಪ್ರಿಯ ಚೆನ್ನಬಸವಣ್ಣಾ.

ಈ ರೀತಿಯಾಗಿ ದಿವ್ಯಾನುಭವ ಪಡೆದ ಶರಣೆಯು ಇದನ್ನು ಸಾಧಿಸಿದ ಬಗೆಯನ್ನು ಬಹು ಮಾರ್ಮಿಕವಾಗಿ ಅರುಹುತ್ತಾರೆ-

ಕನಿಷ್ಠದಲ್ಲಿ ಹುಟ್ಟಿದೆ, ಉತ್ತಮದಲ್ಲಿ ಬೆಳೆದೆ,
ಸತ್ಯಶರಣರ ಪಾದವಿಡಿದೆ.
ಆ ಶರಣರ ಪಾದವಿಡಿದು ಗುರುವ ಕಂಡೆ,
ಲಿಂಗವ ಕಂಡೆ, ಜಂಗಮವ ಕಂಡೆ,
ಪಾದೋದಕವ ಕಂಡೆ, ಪ್ರಸಾದವ ಕಂಡೆ.
ಇಂತಿವರ ಕಂಡೆನ್ನ ಕಂಗಳ ಮುಂದಣ ಕತ್ತಲೆ ಹರಿಯಿತ್ತು.
ಕಂಗಳ ಮುಂದಣ ಕತ್ತಲೆ ಹರಿಯಲೊಡನೆ
ಮಂಗಳದ ಮಹಾಬೆಳಗಿನೊಳಗೋಲಾಡಿ ಸುಖಿಯಾದೆನಯ್ಯಾ
ಅಪ್ಪಣ್ಣ ಪ್ರಿಯ ಚೆನ್ನಬಸವಣ್ಣಾ.

ಇಂತಹ ಕಂಗಳ ಮುಂದಣ ಬೆಳಗ ಕಾಣದೆ ಕಂಡ ಕಂಡವರ ಹಿಂದೆ ಹರಿದು ಇನ್ನು ಬೇರೆ ಕಂಡೆನೆಂಬ ಭಂಗಿತರಿಗೆ ಶರಣೆ ಎಚ್ಚರಿಸುತ್ತಾಳೆ. ತನ್ನಲ್ಲಿ ತಾನು ಸುಯಿದಾನಿಯಾಗಿ ನೋಡಲರಿಯದೆ, ಭಿನ್ನಗಣ್ಣಿಲಿ ನೋಡಿಹೆನೆಂದು ತನ್ನ ಮರೆದು ಇನ್ನುಂಟೆಂದು ಅರಸುವುದು ಸರಿಯಲ್ಲ. ಮನವು ಮಹದಲ್ಲಿ ನಿಂದುದೇ ಲಿಂಗವು, ಕರಣಂಗಳರತುದೆ ಕಂಗಳ ಮುಂದಣ ಬೆಳಗು. ಇದನ್ನು ತಿಳಿದುಕೊಳ್ಳದೇ ಬಂಡಿಯ ಮೇಲಿನ ಹೆಳವನಂತೆ ಕಂಡ ಕಂಡ ಕಡೆಗೆ ಹಲುಬಿದಡೆ ಲಿಂಗದೇವನನರಿಯುವುದು ಸಾಧ್ಯವೇ ಇಲ್ಲ ಎನ್ನುತ್ತಾರೆ.

ಬೆಡಗಿನ ವಚನಗಳು :

ಶರಣೆ ಲಿಂಗಮ್ಮನವರೂ ಕೂಡ ಬೆಡಗಿನ ವಚನಗಳನ್ನು ಬರೆದಿದ್ದಾರೆ. ಈ ಬೆಡಗಿನ ವಚನಗಳಲ್ಲಿ ನಿರೂಪಿತವಾಗಿರುವ ಅನುಭಾವವು ಆ ತಾಯಿಯ ಸಾಧನೆ-ಸಿದ್ಧಿಗಳ ದರ್ಶನವನ್ನೇ ಮಾಡಿಸುತ್ತದೆ.

(೧) ಒಂದು ಊರಿಗೆ ಒಂಭತ್ತು ಬಾಗಿಲು.
ಆ ಊರಿಗೆ ಆವರು ಕಾವಲು,
ಆರು ಮಂದಿ ಪ್ರಧಾನಿಗಳು,
ಇಪ್ಪತ್ತೈದು ಮಂದಿ ಪರಿವಾರ.
ಅವರೊಳಗೆ ತೊಟ್ಟನೆ ತೊಳಲಿ ಬಳಲಲಾರದೆ
ಎಚ್ಚತ್ತು ನಿಶ್ಚಿಂತನಾದ ಅರಸನ ಕಂಡೆ.
ಆ ಅರಸಿನ ಗೊತ್ತುವಿಡಿದು,
ಒಂಬತ್ತು ಬಾಗಿಲಿಗೆ ಲಿಂಗಸ್ಥಾಪ್ಯವ ಮಾಡಿ,
ಒಂದು ಬಾಗಿಲಲಿ ನಿಂದು,
ಕಾವಲವರ ಕಟ್ಟಿಸಿ, ಮೆಟ್ಟಿಸಿ,
ಪರಿವಾರವನೆ ಸುಟ್ಟು ಅರಸನ ಮುಟ್ಟಿ ಹಿಡಿದು ಓಲೈಸಲು,
ಸಪ್ತಧಾತು ಷಡುವರ್ಗವನೆ ಕಂಡು,
ಕತ್ತಲೆಯ ಕದಳಿಯ ದಾಂಟಿ
ನಿಶ್ಚಿಂತದಲ್ಲಿ ಬಚ್ಚಬರಿಯ ಬೆಳಗಿನೊಳಗೋಲಾಡಿ
ಸುಖಿಯಾದೆನಯ್ಯಾ, ಅಪ್ಪಣ್ಣಪ್ರಿಯ ಚೆನ್ನಬಸವಣ್ಣಾ.

ಲಿಂಗಾಂಗ ಸಾಮರಸ್ಯ ಸಾಧನೆಯಲ್ಲಿ, ಅಂಗನು (ಜೀವಾತ್ಮನು) ಶರೀರವಿಡಿದು ಸಾಧಿಸುವ ಸಾಧನೆಯ ವಿಚಾರವೇ ಇಲ್ಲಿ ಅಡಕವಾಗಿದೆ. 'ಒಂದು ಊರಿಗೆ ಒಂಬತ್ತು ಬಾಗಿಲು' ಎಂದರೆ ಶರೀರವೆಂಬ ಈ ಊರಿಗೆ ನವದ್ವಾರಗಳೇ (ನಯನದ್ವಯ, ನಾಸಿಕದ್ವಯ, ಕರ್ಣದ್ವಯ, ಬಾಯಿ, ಗುದ, ಗುಹ್ಯದ್ವಾರಗಳು) ಒಂಭತ್ತು ಬಾಗಿಲು.

'ಆ ಊರಿಗೆ ಐವರು ಕಾವಲು, ಆರು ಮಂದಿ ಪ್ರಧಾನಿಗಳು' ಅಂದರೆ ಕಣ್ಣು, ಕಿವಿ, ಮೂಗು, ನಾಲಿಗೆ, ಚರ್ಮಗಳೆಂಬ ಐವರು ಕಾವಲು ಕಾಯುತ್ತಿದ್ದಾರೆ. ಇದನ್ನು ಆಳುವ ಆರು ಮಂದಿ ಪ್ರಧಾನಿಗಳೆಂದರೆ ಕಾಮ, ಕ್ರೊಧ, ಲೋಭ, ಮೋಹ, ಮದ ಮತ್ಸರವೆಂಬುವುಗಳು.

'ಇಪ್ಪತ್ತೈದು ಮಂದಿ ಪರಿವಾರ'- ಪಂಚಮಹಾಭೂತಗಳು, ಪಂಚತನ್ಮಾತ್ರೆಗಳು, ಪಂಚಜ್ಞಾನೇಂದ್ರಿಯ, ಪಂಚಕರ್ಮೇಂದ್ರಿಯ, ಮನ, ಬುದ್ಧಿ, ಅಹಂಕಾರ, ಚಿತ್ತ, ಆತ್ಮಗಳೇ ಇಪ್ಪತ್ತೈದು ಪರಿವಾರ. 'ಅವರೊಳಗೆ ತೊಟ್ಟನೆ ತೊಳಗಿ ಬಳಲಲಾರದೆ ಎಚ್ಚತ್ತು ನಿಶ್ಚಿಂತನಾದ ಅರಸನ ಕಂಡೆ'- ಇಂತಹ ಊರಲ್ಲಿ ಅರಿವಿನಿಂದ ಜಾಗೃತವಾಗಿರುವ ಅರುಹಿನ ಲಿಂಗಚೇತವನೆಂಬ ಅರಸನಿದ್ದಾನೆ.

ಆ ಅರಸಿನ ಗೊತ್ತುವಿಡಿದು, ಒಂಬತ್ತು ಬಾಗಿಲಿಗೆ ಲಿಂಗಸ್ಥಾಪ್ಯವ ಮಾಡಿ, ಒಂದು ಬಾಗಿಲಲಿ ನಿಂತು'... ಅಂದರೆ -ಲಿಂಗಚೇತನದ ಸೂತ್ರವಿಡಿದು ನವದ್ವಾರಗಳಲ್ಲೆಲ್ಲ ಲಿಂಗಸ್ಥಾಪ್ಯವ ಮಾಡಿ, ಕಂಗಳದ್ವಾರದಲಿ ನಿಂದು; ಎಲ್ಲವನೂ ಗೆದ್ದು ಅಜ್ಞಾನವೆಂಬ ಕದಳಿಯ (ಭವಾರಣ್ಯ) ಗೆದ್ದು, ದಾಂಟಿ ನಿಶ್ಚಿಂತದಲ್ಲಿ ಬಚ್ಚಬರಿಯ ಬೆಳಗು-ನಿರಾಕಾರ ನಿಶ್ಶೂನ್ಯ ಸ್ಥಿತಿಯಲ್ಲಿ ಅನುಭಾವಹೊಂದಿ ಸುಖಿಯಾದೆನೆಂದು ಶರಣೆ ಲಿಂಗಮ್ಮನವರು ತಿಳಿಸುತ್ತಾರೆ.

(೨) ನಾನೊಂದು ಹಾಳೂರಿಗೆ ಹೋಗುತ್ತಿರಲು,
ಆ ಹಾಳೂರ ಹೊಕ್ಕಡೆ,
ಅಲ್ಲಿ ನಾಯಿಗಳು ಅಟ್ಟಿಕೊಂಡು ಬಂದವು.
ಹುಲಿ ಕರಡಿ ಅಡ್ಡಲಾದವು.
ಇವ ಕಂಡು ನಾ ಹೆದರಿಕೊಂಡು
ನನ್ನ ಕೈಗೊಂದು ಕಲ್ಲ ತೆಕ್ಕೊಂಡು ನೋಡುತ್ತ ಬರುತಿರಲು,
ಆ ನಾಯಿಗಳು ಓಡಿಹೋದವು, ಹುಲಿಕರಡಿಗಳು
ಅಲ್ಲಿಯೇ ಬಯಲಾದವು.
ಆ ಊರು ನಿರ್ಮಲವಾಯಿತ್ತು.
ಆ ನಿರ್ಮಲವಾದ ಊರು ಹೊಕ್ಕು ನೋಡಲು,
ಆ ನೋಡುವ ನೋಟವು, ಆ ಊರನಾಳುವ ಅರಸು,
ಆ ಊರೂ ಕೂಡಿ ಒಂದಾದವು.
ಆ ಒಂದಾದುದನೇ ನೋಡಿ, ದ್ವಂದ್ವವನೇ ಹರಿದು
ನಿಮ್ಮ ಸಂಗಸುಖದೊಳಗೋಲಾಡಿ ಸುಖಿಯಾದೆನಯ್ಯಾ
ಅಪ್ಪಣ್ಣಪ್ರಿಯ ಚೆನ್ನಬಸವಣ್ಣಾ.

ಲಿಂಗದೇವನಿರ್ಪ ಠಾವನು ನೋಡಲು (ಸಾಧನೆಗೈಯಲು) ಹೊರಟಾಗ ಪಂಚೇಂದ್ರಿಯಗಳು (ನಾಯಿಗಳು), ಸಪ್ತ ವ್ಯಸನ-ಅಷ್ಟಮದಗಳೆಂಬ ಹುಲಿ ಕರಡಿಗಳು. ಅಡ್ಡಬರುತ್ತವೆ. ಆಗ 'ಇಷ್ಟಲಿಂಗ' ವೆಂಬ ಲಿಂಗದೇವನ ಕುರುಹು (ಅರುಹಿನ ಚೇತನ) ನೋಡುತ್ತ, ಅನಿಮಿಷ ದೃಷ್ಟಿಯಿಂದ ಯೋಗ ಸಾಧಿಸಲು, ಎಲ್ಲವೂ ಬಯಲಾಗಿ ಈ ಅಂಗವು ನಿರ್ಮಲವಾಯಿತು. ಆಗ ಈ ಶುದ್ಧ ತನುವಿನೊಳಗೆ ಜ್ಞಾನ-ಜ್ಞಾತೃ-ಜ್ಞೇಯವೆಂಬ ತ್ರಿಪುಟಿ ಅಳಿದು ಎಲ್ಲವೂ ಒಂದಾದವು. ಇದನ್ನು ನೋಡಿ ಭೇದವಳಿದು ಪರವಸ್ತುವಿನೊಳಗೆ ಸಮರಸವನ್ನೈದು ಸುಖಿಯಾದೆನೆಂದು ಶರಣೆ ಲಿಂಗಮ್ಮತಾಯಿಯವರು ಅರುಹಿದ್ದಾರೆ.

ಇಂತಹ ದಿವ್ಯಾನುಭವ ಹೊಂದಿದ ತಾಯಿ ಲಿಂಗಮ್ಮನವರು ಅಂತಿಮವಾಗಿ ನುಡಿಯುತ್ತಾರೆ-

ಸಾಕಯ್ಯಾ, ಲೋಕದ ಹಂಗು ಹರಿಯಿತ್ತು,
ತನುವಿನಾಸೆ ಬಿಟ್ಟಿತ್ತು; ಮನದ ಸಂಚಲ ನಿಂದಿತ್ತು.
ನುಡಿಗಡಣ ಹಿಂಗಿತ್ತು; ಘನವ ಬೆರೆಯಿತ್ತು,
ಬೆಳಗ ಕೂಡಿತ್ತು.
ಬಯಲಿನೊಳಗೋಲಾಡಿ ಸುಖಿಯಾದೆನಯ್ಯಾ,
ಅಪ್ಪಣ್ಣಪ್ರಿಯ ಚೆನ್ನಬಸವಣ್ಣ.

ಮಂತ್ರ ಗೋಪ್ಯ :

ಶರಣೆ ಲಿಂಗಮ್ಮ ತಾಯಿಯವರು ಸಹ ಮಂತ್ರಗೋಪ್ಯವನ್ನು ನಿರೂಪಿಸಿದ್ದಾರೆ. ಒಟ್ಟು ೩೩ ಪದ್ಯಗಳಲ್ಲಿ ನಿರೂಪಿತವಾಗಿದೆ.

ಪ್ರಾಣನಾಥನೆ ಪರಮಾನಂದ ಯೋಗ ಪರಿ -
ಪೂರ್ಣವಾಗಿ ಪರವಾದ ಘನವ ||ಪಲ್ಲವಿ||

ಅಂಗಕಾಧಾರವೆ ಆದಿಶಕ್ತಿಯು ನೋಡು
ಲಿಂಗಕಾಧಾರವೇ ಜ್ಞಾನ ಶಕ್ತಿ,
ಸಂಗಕಾಧಾರವೆ ಷಟ್‌ಸ್ಥಲಾಂಗವು, ಪ-
ರಾಂಗಕಾಧಾರವು ಪರಬ್ರಹ್ಮ ನೋಡು- ||೧||

ಮೂರಾಗಿ ಆರಾಗಿ ಮೂವತ್ತು ಆರಾಗಿ
ನೂರುವೊಂದಾಗಿ ನಿಜಸ್ಥಲವೆನಿಸಿತ್ತು;
ಮೀರಿ ಇನ್ನೂರ ಹದಿನಾರಾಗಿ ತೋರುವದ
ಹಾರಲೊಡೆದು ನಿಂದು ಮಹಾಘನವನ್ನು- ||೨||

....

....

ನಿತ್ಯ ನಿರಂಜನ ಮುಟ್ಟಿಸಿದ ತೆರನಂತೆ
ಕರ್ತೃವೆ ನೀನೆನ್ನ ಒಳಹೊರಗೆ ಇರ್ದು
ಅಪ್ಪಣ್ಣಪ್ರಿಯ ಚೆನ್ನಬಸವಣ್ಣನೊಳು ನಿತ್ಯ
ಮುಕ್ತವಾಗಿಯೇ ನಿಂದ ಮಹಾಘನವನು ||೩೩||

ಈ ರೀತಿಯಾಗಿ ಒಟ್ಟು ೩೩ ಪದ್ಯಗಳಲ್ಲಿ (೩ ಭಾಗ, ಪ್ರತಿಯೊಂದರಲ್ಲಿ ೧೧ ಪದ್ಯಗಳು) ಮಂತ್ರಗೋಪ್ಯವನ್ನು ಶರಣೆ ಲಿಂಗಮ್ಮ ತಾಯಿಯು ನಿರೂಪಿಸಿದ್ದಾಳೆ.

೫. ಶೂನ್ಯಸಂಪಾದನೆಯಲ್ಲಿ ಅಪ್ಪಣ್ಣನವರ ಪಾತ್ರ

೧೨ನೆಯ ಶತಮಾನದಲ್ಲಿ ಕಲ್ಯಾಣ ಕ್ರಾಂತಿಯ ನಂತರ, ಶರಣರ ವಚನ ಸಾಹಿತ್ಯವು ನಾಡಿನಾದ್ಯಂತ ಬಚ್ಚಿಟ್ಟು, ಕಾಪಾಡಲಾಯಿತು. ತಾಡೋಲೆಗಳಲ್ಲಿ ಸಂಗ್ರಹಿಸಲ್ಪಟ್ಟಿದ್ದ ವಚನಗಳು ಮಠಗಳಲ್ಲಿ, ಶರಣರ ಮನೆತನಗಳಲ್ಲಿ ಪೂಜಿಸುತ್ತಾ ಬಂದವು. ೧೫-೧೬ನೇ ಶತಮಾನಗಳಲ್ಲಿ ಶರಣಜೀವಿಗಳಾದ ಕೆಲವರು ವಚನಗಳ ಅಧ್ಯಯನ ಮಾಡಿ, ಆ ವಚನಗಳಲ್ಲಿ ಸಂವಾದರೂಪದ ಸಂಬಂಧ ಕಲ್ಪಿಸಿಕೊಂಡು ತಾತ್ವಿಕವಾಗಿ, ಧಾರ್ಮಿಕವಾಗಿ, ಸಾಮಾಜಿಕವಾಗಿ ತತ್ತ್ವವನ್ನೊಳಗೊಂಡ ಮೌಲ್ಯಗಳನ್ನು ನಿರ್ಣಯಾತ್ಮಕವಾಗಿ ಕ್ರೋಢೀಕರಿಸಲು ಪ್ರಯತ್ನಿಸಿದರು. ಅವೇ ಶೂನ್ಯಸಂಪಾದನೆಗಳು ಅವು ಕೆಳಗಿನಂತಿವೆ.-

೧. ಶಿವಗಣಪ್ರಸಾದಿ ಮಹಾದೇವಯ್ಯನವರ ಶೂನ್ಯಸಂಪಾದನೆ (೧೪೨೦)
೨. ಕೆಂಚವೀರಣ್ಣೊಡೆಯರ ಶೂನ್ಯ ಸಂಪಾದನೆ (೧೪೯೫)
೩. ಗುಮ್ಮಳಾಪುರದ ಸಿದ್ಧಲಿಂಗದೇವರ ಶೂನ್ಯಸಂಪಾದನೆ (೧೫೦೦)
೪. ಗುಳೂರು ಸಿದ್ಧವೀರಣಾರ್ಯರ ಸಂಪಾದನೆ (೧೫೧೦)
೫. ಹಲಗೆಯದೇವರ ಶೂನ್ಯಸಂಪಾದನೆ (೧೫೨೦)

ಅಲ್ಲಮಪ್ರಭುದೇವರು ಇಡೀ ನಾಡನ್ನೆಲ್ಲ ಸಂಚರಿಸುತ್ತಾ ಬಂದು, ಕೊನೆಗೆ ಬಸವ ಮಹಾಗುರುವಿನ ಸಾನಿಧ್ಯಕ್ಕೆ ಆಗಮಿಸಿ 'ಸದ್ಭಕ್ತ'ನಾಗಿ ಶಿವಯೋಗ ಸಾಧಿಸಿ, ಅನುಭಾವಿಯಾದರು. ತಾವು ಕಂಡುಂಡ ಅನುಭವವನ್ನು ನಾಡಿಗೆಲ್ಲಾ ಸಾರುತ್ತಾ, ಅನುಭವಮಂಟಪದ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದರು. ಇಂತಹ ಮಹಾಜಂಗಮ ಪುಂಗವ ಪ್ರಭುದೇವರ ಜೀವನ ಸಾಧನೆಯೂ ಇಲ್ಲಿ ಅಡಕವಾಗಿದೆ.

ಧರ್ಮಗುರು ಬಸವೇಶ್ವರರ ಸಾನಿಧ್ಯದಲ್ಲಿ ೭೭೦ ಅಮರಗಣಂಗಳೆನ್ನಿಸಿಕೊಂಡ ಶರಣ-ಶರಣೆಯರು, ತಮ್ಮ ಅನುಭಾವದ ವಚನಗಳನ್ನು ರಚಿಸಿದ್ದಾರೆ. ಶರಣರಾದ ಅಪ್ಪಣ್ಣನವರೂ ಕೂಡ ಬಸವಮಹಾಗುರುವಿನ ಸಾನಿಧ್ಯದಲ್ಲಿದ್ದು ವಚನಗಳನ್ನು ರಚಿಸಿರುವುದನ್ನು ನಾವು ಕಂಡಿದ್ದೇವೆ. ಶೂನ್ಯಸಂಪಾದನಾಕಾರರು ಶರಣ ಅಪ್ಪಣ್ಣನವರ ವಚನಗಳನ್ನು ಏಳು ಅಧ್ಯಾಯಗಳಲ್ಲಿ ಬಳಸಿಕೊಂಡಿದ್ದಾರೆ ಅವು ಕೆಳಗಿನಂತಿವೆ-

೧. ಪ್ರಭು ಕಲ್ಯಾಣಕ್ಕೆ ಬಂದ ಸಂಪಾದನೆ
೨. ಮರುಳ ಶಂಕರ ದೇವರ ಸಂಪಾದನೆ
೩. ಪ್ರಭುದೇವರ ಪೂಜಾಸ್ತುತಿ ಸಂಪಾದನೆ
೪. ಪ್ರಭುದೇವರು ದೇಶಾಂತರ ಹೋಗಿ ಬಂದ ಸಂಪಾದನೆ
೫. ಪ್ರಭುದೇವರು ಶೂನ್ಯಸಿಂಹಾಸವನೇರಿದ ಸಂಪಾದನೆ
೬. ಪ್ರಭುದೇವರ ಆರೋಗಣೆ
೭. ಶರಣರ ಅವಸಾನ ಪರಾಮರಿಕೆ.

ಶೂನ್ಯ ಸಂಪಾದನೆಯ ೨೧ ಅಧ್ಯಾಯಗಳ ಪೈಕಿ ಈ ಮೇಲಣ ೭ ಅಧ್ಯಾಯಗಳಲ್ಲಿ ಶರಣ ಅಪ್ಪಣ್ಣನವರ ವಚನಗಳನ್ನು ಸಂಪಾದನೆಕಾರರು ಬಳಸಿಕೊಂಡು ಸಂವಾದ ರೂಪಿಸಿದ್ದಾರೆ.

೧. ಪ್ರಭು ಕಲ್ಯಾಣಕ್ಕೆ ಬಂದ ಸಂಪಾದನೆ :

ಅಲ್ಲಮಪ್ರಭುದೇವರು ಸೊನ್ನಲಿಗೆಗೆ ಬಂದು ಸಿದ್ಧರಾಮೇಶ್ವರರನ್ನು ಭೆಟ್ಟಿಯಾಗಿ, ಯೋಗದ ಹಲವಾರು ವಿಷಯ ಚರ್ಚಿಸಿದ ನಂತರ -'ಕರಸ್ಥಲದ ಘನ ಇಷ್ಟಲಿಂಗದ ವಿವರ' ನನಗೆ ತಿಳಿಸಿ ಪ್ರಭುವೇ ಎಂದು ಕರ್ಮಯೋಗಿ ಸಿದ್ಧರಾಮೇಶ್ವರರು ಕೇಳಲು ಪ್ರಭುದೇವರು -

....ಷಟ್‌ಸ್ಥಲದಂತುವ ಸಂಧಿಸಿ ಒಂದು ಮಾಡಿಕೊಂಡಿಪ್ಪ
ಕರಸ್ಥಲದನುವನು ಗುಹೇಶ್ವರನ ಶರಣ ಸಂಗನಬಸವಣ್ಣ ಬಲ್ಲ,
ಬೆಸಗೊಂಬ ಬಾರಾ ಸಿದ್ಧರಾಮಯ್ಯಾ.

ಎಂದು ಅರುಹಿ, ಸಿದ್ಧರಾಮನನ್ನು ಕರೆದುಕೊಂಡು, 'ನಮ್ಮ ಗುಹೇಶ್ವರ ಲಿಂಗದಲ್ಲಿ ಸಂಗನಬಸವಣ್ಣನ ಶ್ರೀಪಾದಕ್ಕೆ ಶರಣೆಂದು ಧನ್ಯರಾಗಬೇಕು ನಡೆಯಾ ಸಿದ್ಧರಾಮಯ್ಯಾ' ಎಂದು ಕಲ್ಯಾಣಕ್ಕೆ ಆಗಮಿಸುತ್ತಾರೆ.

ಕಲ್ಯಾಣದ ವೈಭವ, ಅದರ ಮಹಾತ್ಮ್ಯೆಯನ್ನು ಪ್ರಭುದೇವ-ಸಿದ್ಧರಾಮ ಇಬ್ಬರೂ ಸ್ತುತಿಸುತ್ತಾ, ಗಳಿಗೆಗೊಮ್ಮೆ ಮಹಾಗುರು ಬಸವೇಶ್ವರರನ್ನು ಸ್ತುತಿಗೈಯುತ್ತಾ ಕಲ್ಯಾಣಕ್ಕೆ ಬಾಗಿ, ಒಳ ಪ್ರವೇಶಿಸಿ, ಧರ್ಮಪಿತ ಬಸವರಾಜದೇವರ ಮಹಾತ್ಮೆಯಂ ಕೊಂಡಾಡುತ್ತ ಮಹಾಮನೆ'ಯನ್ನು ನೋಡಿ ಬೆರಗಾಗುತ್ತಾರೆ.

"ಮರ್ತ್ಯಲೋಕದ ಮಹಾಮನೆ ಹಾಳಾಗಿಹೋಗಬಾರದೆಂದು ಸಂಗನಬಸವಣ್ಣ ಕಲ್ಯಾಣದಲ್ಲಿ ಮನೆಯ ಕಟ್ಟಿದರೆ, ಮರ್ತ್ಯಲೋಕವೆಲ್ಲವೂ ಭಕ್ತಿ ಸಾಮ್ರಾಜ್ಯವಾಯಿತ್ತು. ಆ ಮನೆಗೆ ತಲೆಬಾಗಿ ಹೊಕ್ಕವರೆಲ್ಲರೂ ನಿಜಲಿಂಗಪದಮಂ ಪಡೆದರು. ಆ ಗೃಹವ ನೋಡಬೇಕೆಂದು ನಾನು ಹಲಕಾಲ ತಪಿಸಿದ್ದೆನು. ಕಪಿಲಸಿದ್ಧ ಮಲ್ಲಿನಾಥಾ ನಿಮ್ಮ ಶರಣಸಂಗನಬಸವಣ್ಣನ ಮಹಾಮನೆಗೆ ನಮೋ ನಮೋ ಎಂದು ಬದುಕಿದೆನು" ಎಂದೂ

"ಶಿವಗುರು ಬಸವಣ್ಣ, ಬಸವಗುರು ಶಿವನಾಗಿ ದೆಸೆಗೆಟ್ಟ ದೇವತಾ ಪಶುಗಳಿಗೆ ತಾ ಪತಿಯಾದನು. ಬಸವಣ್ಣನ ನೆನಹು ಸುಖಸಮುದ್ರವಯ್ಯಾ" ಎಂದೂ ಸಿದ್ಧರಾಮೇಶ್ವರರು ಸ್ತುತಿಸಿದರೆ,

"ಸಾಗರದೊಳಗಣ ಜ್ಯೋತಿಯಂತೆ ಗುಹೇಶ್ವಲಿಂಗದೊಳಗೆ ಎನ್ನ ಪರಾಮಾರಾಧ್ಯರು ಸಂಗನಬಸವಣ್ಣ, ಇಂತಪ್ಪ ಶರಣ ಸಂಗನಬಸವಣ್ಣನ ಅಂಗಳವ ಕಂಡೆನಾಗಿ ಗುಹೇಶ್ವರಲಿಂಗಕ್ಕೆ ಕಂಗಳತೃಪ್ತಿಯಾಯಿತ್ತು" ಎಂದು ಪ್ರಭುದೇವರೂ ಸ್ತುತಿಸುತ್ತಾರೆ.

ಈ ತೆರನಾಗಿ ಅಲ್ಲಮ-ಸಿದ್ಧರಾಮರು ಬಸವಗುರುವಿನ ಮಹಾಮನೆಯ ಬಾಗಿಲಲ್ಲಿ ಬಂದು ನಿಂದಾಗ, ಬಸವಣ್ಣನವರು ಪೂಜಾಕೋಣೆಯಲ್ಲಿ ಇಷ್ಟಲಿಂಗಪೂಜೆಯಲ್ಲಿ ನಿರತರಾಗಿದ್ದಾರೆ. ಬಸವಮಹಾಗುರುವಿನ ಕರುಣೆಯ ಕಂದ, ಆಪ್ತ ಸಲಹೆಗಾರ, ಶರಣಬಂಧು ಅಪ್ಪಣ್ಣನವರು ಪರಮ ಹರುಷಿತರಾಗಿ ಮಹಾಮನೆಯೊಳಗೆ ಹೋಗಿ ಬಸವಣ್ಣನವರಲ್ಲಿ ಬಿನ್ನವಿಸಿಕೊಳ್ಳುತ್ತಾರೆ.

ದೇವದೇವ, ಮಹಾಪ್ರಸಾದ.
ಕಂಗಳಲ್ಲಿ ಕರುಳಿಲ್ಲ; ಕಾಯದಲ್ಲಿ ಹೊರೆಯಿಲ್ಲ.
ನುಡಿಯಲ್ಲಿ ಕಡೆಯಿಲ್ಲ; ನಡೆಯಲ್ಲಿ ಗತಿ ಇಲ್ಲ.
ಇದೆಂತಹ ಸುಳುಹೆಂದರಿಯೆ !
ಇದೆಂತಹ ನಿಲವೆಂದು ತಿಳಿಯಬಾರದು.
ಮರುಳಿಲ್ಲದ ಮರುಳು, ಅರಿವಿಲ್ಲದ ಅರಿವು,
ಬಸವಪ್ರಿಯ ಕೂಡಲಚೆನ್ನ ಸಂಗಯ್ಯನ ಬರವು
ಕೌತುಕವಾಯಿತ್ತು ಚಿತ್ತೈಸಯ್ಯಾ ಸಂಗನಬಸವಣ್ಣಾ !

ಅನುಭಾವದ ನಿಲುವಿನ ಶರಣಜೀವಿಗಳು ಮಹಾಮನೆಯ ಹೆಬ್ಬಾಗಿಲಲಿ ಬಂದು ನಿಂತಿರುವುದನ್ನು ನೋಡಿದ ಕೂಡಲೇ ಗುರುತಿಸಿ, ಅವರ ವ್ಯಕ್ತಿತ್ವವನ್ನು ಬಹು ಮಾರ್ಮಿಕವಾಗಿ ಬಸವಣ್ಣನವರಿಗೆ ಪರಿಚಯಿಸಿಕೊಡುತ್ತಾರೆ ಅಪ್ಪಣ್ಣನವರು.

ಈಗ ಬಸವಣ್ಣನವರು 'ಕೂಡಲ ಸಂಗನ ಶರಣರು ಬಂದರೆ ಉಪಚಾರಕ್ಕೆ ಇಂಬಿಲ್ಲ. ಕರುಣದಿಂ ಬರಹೇಳಾ ಅಪ್ಪಣ್ಣಾ' ಎಂದು ವಿನಂತಿಸುತ್ತಾರೆ.

ಬಸವಗುರುವಿನ ಈ ವಿನಂತಿಯ ನಿರೂಪವ ಗ್ರಹಿಸಿದ ಅಪ್ಪಣ್ಣನವರು ಹೊರಗೆ ಬಂದು ಅಲ್ಲಮಪ್ರಭುವಿಗೆ ಒಳಪ್ರವೇಶಿಸಲು ನುಡಿಯುತ್ತಾರೆ.

ಮನಮನವೇಕಾರ್ಥವಾಗಿ,
ಕಾಯಕ್ಕೆ ಕಾಯ ಸಂಬಂಧವಾಗಿ
ಪ್ರಾಣಕ್ಕೆ ಪ್ರಾಣ ಸಮದರುಶನವಾಗಿದ್ದವರಲ್ಲಿ
ತೆರೆಮರೆ ಎಂಬುದಿಲ್ಲ ನೋಡಯ್ಯಾ !
ಸಂಗ ನಿಸ್ಸಂಗವಾಗಿಪ್ಪವರಲ್ಲಿ
ಉಪಚರ್ಯಕ್ಕೆ ಇಂಬಿಲ್ಲ ಸಂಗಯ್ಯನ ಶರಣ
ಬಸವಣ್ಣನಟ್ಟಿದರು ಕೃಪೆ ಮಾಡು ಗುರುವೆ.

ಕೂಡಲಸಂಗನ ಮಹಾಮನೆಯು ಶರಣರಿಗೆ ಮುಕ್ತವಾಗಿದೆ ತಮ್ಮ ಮನೆಗೆ ತಾವೇ ಬರಬೇಕಾದರೆ ಉಪಚಾರದ ಪ್ರಶ್ನೆಯೇ ಇಲ್ಲ ಎಂದು ಬಸವಣ್ಣನವರ ಹೃದಯದಿಂಗಿತವನ್ನು ಅಪ್ಪಣ್ಣನವರು ಅರುಹಲು ಆಗ ಪ್ರಭುದೇವರು-;ಅಂಗದ ಕೈಯಲ್ಲಿ ಕ್ರೀ ಇರಲು ಮಾತಿನ ಅದ್ವೈತವೆಂತಪ್ಪುದೋ ? ಇಂಥವರಲ್ಲಿಗೆ ತಾವು ಬರುವುದಿಲ್ಲ' ಎಂದು ನುಡಿಯಲು, ಅಪ್ಪಣ್ಣನವರು ಪ್ರಭುದೇವರ ಮನದಿಂಗಿತವನ್ನು ಬಸವರಾಜದೇವರ ಸಮ್ಮುಖದಲ್ಲಿ ಅರಿಕೆ ಮಾಡಿಕೊಳ್ಳುತ್ತಾರೆ.

ಅಂಗದ ಕಳೆ ಲಿಂಗದಲ್ಲಿ ಲೀಯವಾಗದು:
ಲಿಂಗದ ಕಳೆ ಅಂಗದಲ್ಲಿ ಲೀಯವಾಗದು.
ಮಾತಿನ ಮಾಲೆಯ ಬೊಮ್ಮವೇತರದೋ?
ಕಾಯ ಭಕ್ತನಾದರೆ ಭೃತ್ಯಾಚಾರವಿರಬೇಕು.
ಪ್ರಾಣಜಂಗಮವಾದರೆ ಅರಿವಿರಬೇಕು.

ಇಂತೀ ಭಕ್ತಿ ಜ್ಞಾನವುಳ್ಳವರಲ್ಲದೆ ಭಕ್ತರಲ್ಲ, ಶರಣರಲ್ಲ.
ಹಿರಿಯರು ಬಂದರೆ ಇದಿರೆದ್ದು ಬಾರದವರ ಮನೆಗೆ
ಅಡಿಯಿಡೆವೆಂದು ಬಸವಪ್ರಿಯ ಕೂಡಲ ಚೆನ್ನಸಂಗನ ಶರಣರು
ಕಾಡಿಹರು ಕೇಳಾ ಸಂಗನಬಸವಣ್ಣಾ.

ಬಸವಣ್ಣ-ಅಪ್ಪಣ್ಣ-ಅಲ್ಲಮ ಈ ಮೂವರ ಮಧ್ಯದಲ್ಲಿ ನಡೆಯುವ ಈ ಸಂವಾದವನ್ನು ಶೂನ್ಯಸಂಪಾದನಕಾರ ಮಾರ್ಮಿಕವಾಗಿ ಕಲ್ಪಿಸಿಕೊಂಡು ವಚನಗಳ ಸಂಯೋಜನೆ ಮಾಡಿ ಲಿಂಗವಂತರ ಆಚಾರ -ವಿಚಾರಗಳು, ಮನೆಗೆ ಹಿರಿಯರು-ಶರಣರು ಬಂದಾಗ ನಮ್ಮ ರೀತಿ -ನಡಾವಳಿಯು ಹೇಗಿರಬೇಕೆಂಬ ಬಗ್ಗೆ ವಿವರಿಸಲು ಯತ್ನಿಸಿದ್ದಾರೆನ್ನಬಹುದು.

ಈ ರೀತಿ ಅಪ್ಪಣ್ಣನವರು ನುಡಿಯಲು, ಬಸವಣ್ಣನವರು "ಭಕ್ತನ ಕಾಯ ಜಂಗಮ ಧರಿಸಿಪ್ಪ, ಜಂಗಮದ ಪ್ರಾಣ ಭಕ್ತ ಧರಿಸಿಪ್ಪ, ಭಕ್ತನಲ್ಲಿ ಭಕ್ತ ಜಂಗಮವೆರಡೂ ಸನ್ನಿಹಿತ, ಜಂಗಮದಲ್ಲಿಯೂ ಭಕ್ತ-ಜಂಗಮವೆಂಬೆರಡೂ ಸನ್ನಿಹಿತ, ತಮ್ಮ ಮಠಕ್ಕೆ ತಾವು ಬರಬೇಕಾದರೆ ಮುನಿಸೇಕೆ ? ಕರ್ತರು ತಮ್ಮ ಗೃಹಕ್ಕೆ ಬಂದರೆ ಬೇಕು ಬೇಡೆನ್ನೆ " ಎಂದು ತಿಳಿಯಪಡಿಸುತ್ತಾರೆ. ಬಸವಣ್ಣನವರ ಹೃದ್ಗತವನ್ನರಿತ ಅಪ್ಪಣ್ಣನವರು ಮತ್ತೆ ಪ್ರಭುದೇವರಲ್ಲಿ ಬಿನ್ನವಿಸುತ್ತಾರೆ.

ನಿಮ್ಮ ತನು, ನಿಮ್ಮ ಮನ, ನಿಮ್ಮ ಧನ.
ನಿಮ್ಮದಲ್ಲದೆ ಅನ್ಯವೊಂದಣು ಮಾತ್ರವಿಲ್ಲ ನೋಡಯ್ಯಾ !
ಭಕ್ತನಮಠವೆಂದು ಮುನ್ನವೆ ಅರಿದರಿದು ಬಂದು
ಮತ್ತೊಂದ ಮತ್ತೊಂದ ನೆನೆವರೆ,
ಬಸವಪ್ರಿಯ ಕೂಡಲಚೆನ್ನಸಂಗಯ್ಯನ ಶರಣ
ಬಸವಣ್ಣಂಗೆ ಸ್ವತಂತ್ರ ಭಾವವುಳ್ಳೊಡೆ ನಿಮ್ಮ ಪಾದದಾಣೆ.

ತಾವು ಬಸವ ಮಹಾನುಭಾವಿಯ ಅರುಹಿನ ಮಹಾಮನೆಗೆ ಅರಿದರಿದು ಬಂದಿರುವಿರಿ, ಅಂದ ಮೇಲೆ ಮತ್ತೆ ಬೇರೆ ಮನದಲ್ಲಿ ನೆನೆಯಲುಂಟೆ? ಬಸವಣ್ಣನ ತನು-ಮನ-ಧನವೆಲ್ಲವೂ ಜಂಗಮಕ್ಕರ್ಪಿತವಿದೆ . ತನ್ನದು, ತಾನು ಎಂಬ ಅಹಂಭಾವ ಅಲ್ಲಿ ಇಲ್ಲವೇ ಇಲ್ಲ, ಎಂದೆನ್ನುತ್ತಾರೆ ಅಪ್ಪಣ್ಣನವರು.

ಆಗ ಪ್ರಭುದೇವರು-"ಭಕ್ತ ಜಂಗಮದ ಸಕೀಲಸಂಬಂಧವನಾರು ಬಲ್ಲರು ಹೇಳಾ? ಅರೆಭಕ್ತರರೊಡತಣ ಸಂಗ ನಮ್ಮ ಗುಹೇಶ್ವರ ಲಿಂಗಕ್ಕೆ ಸೊಗಸದು" ಎನ್ನುವರು. ಇದನ್ನರಿತು ಅಪ್ಪಣ್ಣನವರು ತನ್ನ ಮಹಾಗುರು ಬಸವಣ್ಣನವರ ಪರವಾಗಿ ವಿನಯದಿಂದಲೇ ಭಕ್ತ-ಜಂಗಮ ಕುರಿತು ಬಸವಣ್ಣನವರ ನಿಲುವನ್ನು ಅರುಹುವರು-

ಲಿಂಗಜಂಗಮ ಜಂಗಮಲಿಂಗವೆಂಬುದನಾರು ಬಲ್ಲರಯ್ಯಾ
ಮರ್ತ್ಯಲೋಕ ಶಿವಲೋಕದಲ್ಲಿ ಬಸವಣ್ಣನಲ್ಲದೆ?
ಲಿಂಗಕ್ಕಾಧಾರವಿಲ್ಲೆಂದು ಮರ್ತ್ಯಲೋಕದಲ್ಲಿ
ಬಂದವತರಿಸಿದನಯ್ಯಾ ಬಸವಣ್ಣನು.
ಜಂಗಮಮುಖ ಲಿಂಗವೆಂಬುದನರಿದು ತನ್ನನರ್ಪಿಸಿ
ಇದಿರತಪ್ಪಿಸಿ ಇರಬಲ್ಲನಯ್ಯಾ ಬಸವಣ್ಣನು.
ಅಂಗಮುಖವೆಲ್ಲವೂ ನಷ್ಟವಾಗಿ ಭೃತ್ಯಾಚಾರವೇ ತನುವಾಗಿ
ಇರಬಲ್ಲನಯ್ಯಾ ಬಸವಣ್ಣನು.
ಪ್ರಾಣಕಳೆಯರಿತು ಜಂಗಮವೆ ಪ್ರಾಣವಾಗಿ
ಹಂಗು ಹರಿ ಇಲ್ಲದಿರಬಲ್ಲನಯ್ಯಾ ಬಸವಣ್ಣನು.
ಉಪಾಧಿಯೆಂಬ ಕೀರ್ತಿವಾರ್ತೆಯನು ಬರೆದು
ನಿರುಪಾಧಿಕವೆಂಬ ವಿವೇಕಕ್ಕೆ ಅತೀತನಾಗಿ
ಸಹಜದಾಸೋಹಿಯಾಗಿರಬಲ್ಲನಯ್ಯಾ ಬಸವಣ್ಣನು.
ಬಸವಪ್ರಿಯ ಕೂಡಲಚೆನ್ನಸಂಗನ ಶರಣ ಬಸವಣ್ಣನೆ
ನಿಮಗೆ ಭಕ್ತನಲ್ಲದೆ ಮತ್ತಾರನೂ ಕಾಣೆನಯ್ಯಾ.

ಈ ರೀತಿಯಾಗಿ ಅಪ್ಪಣ್ಣನವರು ನುಡಿಯಲು, ಪ್ರಭುದೇವರು ಮತ್ತೆ ತಮ್ಮ ಅಭಿಪ್ರಾಯ ಮುಂದಿಡುತ್ತಾರೆ.

"ನಿಮ್ಮಲ್ಲಿ ಭಕ್ತಿಯುಂಟು, ತಮ್ಮಲ್ಲಿ ಭಕ್ತಿಯುಂಟು,
ಎಮ್ಮಲ್ಲಿ ಭಕ್ತಿಯುಂಟೆಂದಡೆ ಶಿವಶರಣರು ಮೆಚ್ಚುವರೆ?
.... ಬಂದವರಾರಾರೆಂದರಿಯದೆ ನಿಂದನಿಲವನರಿಯದೆ
ಕೆಮ್ಮನೆ ಅಹಂಕಾರವ ಹೊತ್ತುಕೊಂಡಿಪ್ಪವರಿಗೆ
ನಮ್ಮ ಗುಹೇಶ್ವರಲಿಂಗನೊಲಿಯ ನೋಡಾ.

ಭಕ್ತಿಯೆಂಬುದು ಕೇವಲ ಬಾಯಲ್ಲಿರಬಾರದು, ಅದು ಕೃತಿಯಲ್ಲಿ ಕಾಣಬೇಕು. ಮನೆಗೆ (ಮಠಕ್ಕೆ) ಯಾರೋ ಬರಲಿ, ಬಂದವರು ಜಂಗಮವೆಂದು ಭಾವಿಸಿ ಮಠದೊಳಗಿರುವ ಭಕ್ತರು ಸದುವಿನಯದಿಂದ ಸ್ವಾಗತಿಸಿ ಆದರೋಪಚಾರ ಮಾಡಬೇಕು. ಉಭಯಕುಶಲೋಪರಿಯನ್ನು ವಿಚಾರಿಸಬೇಕು. ಭೃತ್ಯಾಚಾರದಲ್ಲಿ ನಡೆಯಬೇಕು ಎಂಬ ವಿಚಾರವನ್ನು ಪ್ರಭುದೇವರು ಅರುಹಿ ತಾವು ಒಳಗೆ ಬರಲಾರೆವು ಎಂದಾಗ, ಅಪ್ಪಣ್ಣನವರು ಒಳ ಬಂದು ಬಸವರಾಜದೇವರಿಗೆ ಬಿನ್ನವಿಸುತ್ತಾರೆ.

ದೇವ ದೇವ ಮಹಾಪ್ರಸಾದ.
ನಿಮ್ಮ ಶರಣರ ಮನೆಯ ಸಲುಗೆಯ ಬಂಟ ನಾನಲ್ಲವಯ್ಯಾ
ತನುಮನ ಧನವ ಹಿಂದಿಕ್ಕಿಕೊಂಡಿಪ್ಪ ವಂಚಕ ನಾನಯ್ಯಾ
ನಿಮ್ಮ ಶರಣರು ಎನ್ನಿಚ್ಚೆಗೆ ಬಪ್ಪರೆ ?
'ಚಕಿತಮಭಿದತ್ತೇ ಶ್ರುತಿರಪಿ' ಎನಲು
ಎಮ್ಮ ನುಡಿ ನಿಮ್ಮ ಶರಣರ ತಾಗಬಲ್ಲುದೆ ?
ಹಣೆಯ ಹೊಣೆಯ ತೋರಿ ಉದರವ ಹೊರೆವ
ನಿಮ್ಮ ಮರೆಯಲಡಗಿಪ್ಪ ಹಡಪಿಗ ನಾನಯ್ಯಾ.
ಬಸವಪ್ರಿಯ ಕೂಡಲ ಚೆನ್ನಸಂಗನ ಶರಣರು
ಎನ್ನ ಮಾತಿಂಗೆ ಬಾರರು.
ನೀವೇ ಹೋಗಿ ಬಿಜಯಂಗೈಸಿಕೊಂಡು ಬಾರಾ ಸಂಗನಬಸವಣ್ಣ
ಮತ್ತಂ ,
ನಿನ್ನಳವಲ್ಲ, ಎನ್ನಳವಲ್ಲ, ಇದಾರಳವಲ್ಲದ ಘನವು ನೋಡಯ್ಯಾ
ಕಾಬಡೆ ಕಂಗಳಿಗಸಾಧ್ಯ, ಮುಟ್ಟುವಡೆ ಸೋಂಕಿಗಸಾಧ್ಯ.
ಮಾತಾಡಿಸಿ ನೋಡಿದಡೆ ವಾಙ್ಮನಾತೀತ.
ನಿಂದಡೆ ನೆಳಲಿಲ್ಲ, ಸುಳಿದಡೆ ಹೆಜ್ಜೆಯಿಲ್ಲ.
ಪ್ರಭುದೇವರೆಂಬ ಭಾವ ತೋರುತ್ತದೆ
ಬಸವಪ್ರಿಯ ಕೂಡಲ ಚೆನ್ನಸಂಗಯ್ಯನ
ಶರಣರ ಚರಣವಿಡಿವರೇಳಾ ಸಂಗನಬಸವಣ್ಣಾ.

ಪ್ರಭುದೇವರು ತಮ್ಮ ಮಾತಿಂಗೆ ಒಳಬರಲು ಒಪ್ಪುತ್ತಿಲ್ಲವೆಂಬುದನರಿದ ಅಪ್ಪಣ್ಣನವರು, ಬಸವಣ್ಣನವರ ಹತ್ತಿರ ಬಂದು-ಬಾಗಿಲಲಿ ನಿಂದ ಅನುಭಾವಿಯ

ವ್ಯಕ್ತಿತ್ವವನ್ನು ವರ್ಣಿಸುತ್ತಿದ್ದಾರೆ. ತಮ್ಮ ಸ್ವಾನುಭಾವದ ಅರಿವಿನಿಂದ ಬಾಗಿಲಲ್ಲಿ ನಿಂತಿರುವ ಅನುಭಾವಿ 'ಪ್ರಭುದೇವರೆಂಬ ಭಾವ ತೋರುತ್ತಿದೆ' ಎಂದೂ ಸೂಚಿಸುತ್ತಾರೆ ಅಪ್ಪಣ್ಣನವರು.

ಈ ರೀತಿಯಾಗಿ, ಪ್ರಭುದೇವರು ಸಿದ್ಧರಾಮೇಶ್ವರರನ್ನು ಕರೆದುಕೊಂಡು ಮೊದಲ ಸಲ ಕಲ್ಯಾಣಕ್ಕೆ ಆಗಮಿಸಿದಾಗ ಅವರನ್ನು ಗುರುತಿಸಬೇಕಾದರೆ ಅಪ್ಪಣ್ಣನವರೂ ಕೂಡ ಸಾಧಿಸಿದ ಸಾಧನೆಯ ಔನ್ನತ್ಯ ಅರವಿಗೆ ಬಾರದಿರರು.

೨. ಮರುಳುಶಂಕರದೇವರ ಸಂಪಾದನೆ.

ಶೂನ್ಯಸಂಪಾದನೆಯ ೬ನೆಯ ಅಧ್ಯಾಯವಾಗಿರುವ 'ಮರುಳ ಶಂಕರ ದೇವರ ಸಂಪಾದನೆ '.ಯಲ್ಲಿ ಅಪ್ಪಣ್ಣನವರ ವಚನವೊಂದನ್ನು ಸಂಪಾದನೆಕಾರರು ಉಲ್ಲೇಖಿಸಿದ್ದಾರೆ.

ಶರಣ ಮರುಳಶಂಕರ ದೇವರು ಅಪಘಾನಿಸ್ತಾನದಿಂದ ಮಹಾಗುರು ಬಸವೇಶ್ವರರ ಸಾನಿಧ್ಯದೊಳು ಶಿವಯೋಗ ಸಾಧನೆಯನು ಸಾಧಿಸಲು ಬಂದ ಅನುಭಾವಿ ಶರಣರು, ಬಸವಣ್ಣನವರ ಮಹಾಮನೆಯ ಪ್ರಸಾದ ನಿಲಯದ ದಾಸೋಹದಲ್ಲಿ ಕಾಯಕ ಗೈಯ್ಯುತ್ತ ತನ್ನ ಲಿಂಗಾಂಗಂಯೋಗ ಸಾಧನೆಯಲ್ಲಿ ನಿರತರಾಗಿದ್ದ ಶರಣ ಮರುಳಶಂಕರದೇವರು.

ಇಂತಪ್ಪ ಮಹಾನುಭಾವಿ ಶರಣ ಮರುಳಶಂಕರದೇವರ ನಿಲುವನ್ನು ಚೆನ್ನಬಸವರಾಜದೇವರು ಪ್ರಭುದೇವರಿಗೆ ಬಿನ್ನವಿಸುತ್ತಾರೆ.

ತುದಿಮೊದಲಿಲ್ಲದ ಘನವ ನೋಡಾ!
ಒಳಹೊರಗಿಲ್ಲದ ಅನುವ ನೋಡಾ !
ಗುರು-ಲಿಂಗ-ಜಂಗಮ ತಾನೆಯಾಗಿ,
ಮತ್ತೆ ತಾನೆಂಬುದೇನೂ ಇಲ್ಲದೇ ಇಪ್ಪ
ಪರಿಯ ನೋಡಾ !
ತನ್ನ ತಾ ನಿರ್ದೇಶಮಂ ಮಾಡಿಕೊಂಡು
ನಿಜಪದವನ್ನೈದಿಪ್ಪ ಪರಿಯ ನೋಡಾ !
ಕೂಡಲ ಚೆನ್ನಸಂಗಮ ದೇವರಲ್ಲಿ

ಪರಮ ಪ್ರಾಸಾದಿಯಾಗಿಪ್ಪ ಮರುಳು ಶಂಕರ ದೇವರ
ನೋಡಾ ಪ್ರಭುವೇ!

ಅರಿವು (ಗುರು) ಆಚಾರ (ಲಿಂಗ) ಅನುಭಾವ (ಜಂಗಮ) ಸ್ವರೂಪವೇ ತಾನಾಗಿರುವ ಪರಮ ಪ್ರಸಾದಿಯಾಗಿ ಕಾಯಕ ಯೋಗಿಯಾಗಿ ನಿಜಪದವನ್ನೈದಿರುವ ಮಹಾಂತನೇ ಮರುಳಶಂಕರದೇವರು, ಇಂತಹ ಮಹಿಮನ ವ್ಯಕ್ತಿತ್ವವನ್ನು ಚೆನ್ನಬಸವಣ್ಣನವರು ಪ್ರಭುದೇವರಿಗೆ ಬಿಂಬಿಸಲು, ಈಗ ಪ್ರಭುದೇವರು ಹೀಗೆ ನಿರೂಪಿಸುತ್ತಾರೆ-

ಅಂಗವಿಡಿದಂಗಿ ಎಂಬೆನೆ ?
ಆರನೊಳಕೊಂಡನು ಪರಮನ ನೋಡಾ
ಮೂರರ ಹೊಲಿಗೆಯ ಬಿಚ್ಚಿ ಎಂಟಾತ್ಮ ಹರಿಗಳ
ತನ್ನಿಚ್ಛೆಯೊಳ್ ನಿಲಿಸಿದ ನಿಜಸುಖಿಯ ನೋಡಾ !
ತತ್ತ್ವ ಮೂವತ್ತಾರ ಮೀರಿ ಅತ್ತತ್ತವೇ ತೋರ್ಪ ಅಗಮ್ಯನ ನೋಡಾ !
ನಮ್ಮ ಗುಹೇಶ್ವರ ಶರಣ ಅಲ್ಲಯ್ಯನ ಇರವನೊಳಕೊಂಡು
ಪರಮಪ್ರಸಾದಿ ಮರುಳಶಂಕರದೇವರ ನಿಲುವು
ಬಸವಣ್ಣನಿಂದ ಕಂಡೆ ನೋಡಾ.

ಲಿಂಗವಂತ ಧರ್ಮದ ಸೃಷ್ಟಿ ರಚನಾ ವಿಕಾಸದ ೩೬ ತತ್ತ್ವಗಳ ಮೀರಿನಿಂದ ಮೂಲ ಪರವಸ್ತುವನ್ನು ಸಾಧಿಸಿ, ಅದರಲ್ಲಿ ಬೆರೆದ ಮಹಾಮಹಿಮ ಶರಣ ಮರುಳಶಂಕರದೇವರನ್ನು, ಅವರ ನಿಲವನ್ನು ಬಸವಣ್ಣನವರಿಂದ ಅರಿದೆನೆಂದು ಪ್ರಭುವು ನುಡಿಯಲು, ಅದಕ್ಕೆ ಬಸವಣ್ಣನವರು -'ಕೂಡಲ ಸಂಗಮದೇವರಲ್ಲಿ ಬೆರೆಸಿ ಬೇರಿಲ್ಲದಿಪ್ಪ ಮರುಳಶಂಕರದೇವರ ನಿಲವ ಪ್ರಭುದೇವರು, ಸಿದ್ಧರಾಮಯ್ಯದೇವರು, ಹಡಪದಪ್ಪಣ್ಣನಿಂದ ಕಂಡು, ಎನ್ನ ಜನ್ಮ ಸಫಲವಾಯಿತ್ತಯ್ಯಾ' ಎನ್ನುವರು.

ಬಸವರಾಜದೇವರ ಈ ನುಡಿಯನಾಲಿಸಿದ ಶರಣ ಅಪ್ಪಣ್ಣನವರು ವಿನೀತಭಾವದಿಂದ ಮರುಳಶಂಕರದೇವರ ನಿಲವನ್ನು ಕೊಂಡಾಡುತ್ತಾರೆ-

ಯುಗಜುಗಂಗಳ ಅಳಿವುಳಿದನರಿಯದೆ,
ಹಗಲಿರುಳೆಂಬುವರ ನೆನಹಿನಲ್ಲೆಲ್ಲೂ ಅರಿಯದೆ.

ಲಿಂಗದಲ್ಲಿ ಪರವಶನಾಗಿರ್ದ ಪರಮಪರಿಣಾಮಿಯ-
ನೇನೆಂದುಪಮಿಸುವೆನಯ್ಯಾ?
ಆಹಾ, ಎನ್ನ ಮುಕ್ತಿಯ ಮುಕುರದ ಇರವ ನೋಡಾ !
ಆಹಾ, ಎನ್ನ ಸತ್ಯದ ಸ್ವಾನುಭಾವದ ಕಳೆಯ ನೋಡಾ!
ಆಹಾ, ಅಷ್ಟಮದಂಗಳ ಹಂಗನುಳಿದು,
ನಿಷ್ಠೆ ನಿಬ್ಬೆರಗಾಗಿ ನಿಂದ ಚಿತ್‌ಸುಖಿಯ ನೋಡಾ !
ಬಸವಪ್ರಿಯ ಕೂಡಲಚೆನ್ನಸಂಗಮದೇವಯ್ಯಾ,
ಪರಮಪ್ರಸಾದಿ ಮರುಳಶಂಕರದೇವರ ನಿಲವ
ಪ್ರಭುಬಸವಣ್ಣನಿಂದ ಕಂಡು ಬದುಕಿದೆನು !ಬದುಕಿದೆನು !!

ಲಿಂಗವೇ ತಾನು, ತಾನೇ ಲಿಂಗವಾಗಿ ಪರಮಪರಿಣಾಮಿಯಾಗಿರುವ ಶರಣ ಮರುಳಶಂಕರದೇವರ ನಿಲವನ್ನು ಅರುಹುವಲ್ಲಿ, ಅಪ್ಪಣ್ಣನವರು ಎನ್ನ ಸತ್ಯದ ಸ್ವಾನುಭಾವದ ಕಳೆಯ ನೋಡಾ ಎನ್ನುತ್ತಾರೆ. ಇಲ್ಲಿ ಅಪ್ಪಣ್ಣನವರ ಸಾಧನೆಯ ನಿಲವೂ ಕೂಡ ಉನ್ನತವಾಗಿದೆಯೆಂಬುದನ್ನು ನಾವು ಕಾಣುತ್ತೇವೆ.

೩. ಪ್ರಭುದೇವರ ಪೂಜಾ ಸ್ತುತಿ (ಸಂಪಾದನೆ)

ಶೂನ್ಯಸಂಪಾದನೆಯ ೧೧ನೆಯ ಅಧ್ಯಾಯವಾಗಿರುವ ಪ್ರಭುದೇವರ ಪೂಜಾಸ್ತುತಿ (ಸಂಪಾದನೆ)ಯಲ್ಲಿ ಹಡಪದಪ್ಪಣ್ಣನವರ ಪಾತ್ರವನ್ನು ವಿವರಿಸಲಾಗಿದೆ. ಸಂಪಾದನೆಕಾರನು ಪ್ರಭುದೇವರನ್ನು ಜಂಗಮಮೂರ್ತಿಯಾಗಿ ಬಸವಣ್ಣನವರ ಮಹಾಮನೆಗೆ ಬರಮಾಡಿ ಅಲ್ಲಿ ಎಲ್ಲಾ ಶರಣರು ಗೌರವದಿಂದ ಪೂಜಿಸುವರೆಂದು ತಿಳಿಸಿದ್ದಾನೆ.

'ಜಂಗಮ'ವೆಂಬುದು ಜಾತಿಯಲ್ಲ, ಜಂಗಮತ್ವವು ಜಾತಿಯಿಂದ ಹುಟ್ಟಿನಿಂದ ಬರುವದೂ ಅಲ್ಲ, ಅದನ್ನು ಅರಿವು-ಆಚಾರ-ಅನುಭಾವದಿಂದ ಸಾಧಿಸುವ ಸಾಧನೆಯಾಗಿದೆ. ಇಂತಹ ಸಾಧನೆಯ ಉನ್ನತ ನಿಲವೇ ಜಂಗಮವು. ವೇಶ್ಯಾಪುತ್ರನಾಗಲೀ, ದಾಸೀಪುತ್ರನಾಗಲಿ ಶಿವದೀಕ್ಷೆಯಾದ ಬಳಿಕ ಆತನ ಸಾಧನೆಯನ್ನು ಪರಿಗಣಿಸಬೇಕೆಂದು ಮಹಾಗುರು ಬಸವೇಶ್ವರರು ಅರುಹಿದ್ದಾರೆ. ತಮ್ಮ ಈ ಮಾತನ್ನು ಕೃತಿಯಲ್ಲಿಯೂ ತಂದು ತೋರಿದ್ದಾರೆ.

ಅಂದಿನ ಸಮಾಜದಲ್ಲಿ ಅತಿಹಿಂದುಳಿದ ಜನಾಂಗವಾದ 'ನಟುವರ' ಜಾತಿಯಲ್ಲಿ ಹುಟ್ಟಿ ತನ್ನ ಸಾಧನೆಯಿಂದ ಅನುಭಾವಿ ಶರಣನಾದ ವ್ಯಕ್ತಿ ಅಲ್ಲಮಪ್ರಭು. ಗುಹೇಶ್ವರಲಿಂಗದಲ್ಲಿ ಎನ್ನಪರಮಾರಾಧ್ಯ ಸಂಗನಬಸವಣ್ಣನ ಸಾನಿಧ್ಯದಿಂದಾನು ಸದ್ಭಕ್ತನಾದೆನಯ್ಯ ಎಂದು ಹೇಳಿಕೊಂಡ ಪ್ರಭುವನ್ನು ಅಪ್ಪಿಕೊಂಡು ಮೇಲೆತ್ತಿ ಅನುಭಾವಮೂರ್ತಿಯ ಮಾಡಿ ಅನುಭವಮಂಟಪಕ್ಕೆ ಅಧ್ಯಕ್ಷನನ್ನಾಗಿ ಮಾಡಿದ ವಿಶ್ವಗುರು ಬಸವಣ್ಣನವರು. ಅಂತಪ್ಪ ಅನುಭಾವಿಗಳನ್ನು ಮಹಾಮನೆಯಲ್ಲಿ ಗೌರವಿಸಿ ಪೂಜಿಸಿದ್ದಾರೆ ಬಸವಣ್ಣನವರು.

ಮನದೊಡೆಯ ಮನೆಗೆ ಬಂದರೆ
ಕನಕದ ತೋರಣವ ಕಟ್ಟಿ,
ಷಡುಸಮ್ಮಾರ್ಜನೆಯ ಮಾಡಿ, ರಂಗವೋಲೆಯನಿಕ್ಕಿ,
ಉಘೇ ಚಾಂಗು ಭಲಾ ಎಂಬೆನು.
ಕೂಡಲಸಂಗಮದೇವಾ ನಿಮ್ಮ ಶರಣ ಪ್ರಭುದೇವರು
ಬಂದರೆ ಉಬ್ಬಿ ಕೊಬ್ಬಿ ನಲಿನಲಿದಾಡುವೆ !

ಈ ರೀತಿ ಪ್ರಭುವು ಮಹಾಮನೆಗೆ ಬಂದಾಗ ಬಸವಣ್ಣನವರು ಆನಂದದಿಂದ ನಲಿನಲಿದಾಡಲು, ಬಸವಗುರುವಿನ ನೆರಳಾಗಿ ಜೀವಿಸಿದ ಮಹಾನುಭಾವಿ ಅಪ್ಪಣ್ಣ ಶರಣರೂ ಕೂಡ ಅದೇ ಆನಂದ ವ್ಯಕ್ತಪಡಿಸಿದ್ದಾರೆ.-

ಮನಕ್ಕೆ ಮನೋಹರ ಒಂದಾಗಿ,
ಭಾವಕ್ಕೆ ಭಾವ ಒಂದಾಗಿ;
ನಚ್ಚಿ ಮುಚ್ಚಿದ ಶರಣರ ದರುಶನವಾದ ಬಳಿಕ
ಎತ್ತಲೆಂದರಿದೆನಯ್ಯಾ ಅಲೌಕಿಕವ !
ಬಸವಪ್ರಿಯ ಕೂಡಲಚೆನ್ನಸಂಗಾ,
ನಿಮ್ಮ ಶರಣ ಪ್ರಭುದೇವರಿಗೆ ಶರಣುಶರಣೆಂಬುದಲ್ಲದೆ
ಅನ್ಯವನೇನೆಂದು ಅರಿಯೆನು.

೪. ಪ್ರಭುದೇವರು ದೇಶಾಂತರ ಹೋಗಿ ಬಂದ ಸಂಪಾದನೆ "

ಶೂನ್ಯ ಸಂಪಾದನೆಯ ೧೭ನೆಯ ಅಧ್ಯಾಯ 'ಪ್ರಭು ದೇಶಾಂತರ ಹೋಗಿ ಬಂದ ಸಂಪಾದನೆ'ಯ ಪ್ರಸಂಗದಲ್ಲಿ ಶರಣ ಹಡಪದ ಅಪ್ಪಣ್ಣನವರ ನಾಲ್ಕು

ವಚನಗಳನ್ನು ಉದ್ಧರಿಸಲಾಗಿದೆ.

ಅನುಭವ ಮಂಟಪದಲ್ಲಿ ಶಿವಯೋಗ ಸಾಧನೆಯಂ ಸಾಧಿಸಿ, ಅನುಭವ ಮಂಟಪದ ವಿನೂತನ ತತ್ತ್ವ-ಸಾಧನೆಗಳನ್ನು ಅಳವಡಿಸಿಕೊಂಡು ಅವನ್ನು ಜಗದ್ಹಿತಾರ್ಥಕ್ಕಾಗಿ ಬೋಧಿಸುವ ಸಲುವಾಗಿ ಚರಜಂಗಮನಾಗಿ, ಪರ ಜಂಗಮವೇ ತಾನಾಗಿ ಅಲ್ಲಮಪ್ರಭು ಅಸೇತು ಹಿಮಾಚಲವರೆಗೆ ಸಂಚರಿಸುವನು. ಹಲವಾರು ವರುಷಗಳ ಕಾಲ ಜಂಗಮ ಕೈಂಕರ್ಯವನು ಪೂರೈಸುತ್ತಾ ಪ್ರಭುವು ಕಲ್ಯಾಣದತ್ತಲಭಿಮುಖವಾಗಿ ಹೊರಡುವನು.

ಇತ್ತ ಬಸವಣ್ಣನವರು ಪ್ರಭುದೇವರ ಬರವನ್ನು ಹಾರೈಸುವ ಸಂದರ್ಭದಲ್ಲಿ ತಮ್ಮಂತರಂಗ ಸಾಧನೆಯ ಅನುಭಾವದ ಶೂನ್ಯಸಿಂಹಾಸನ ರಚಿಸಿದುದನ್ನು ಶರಣ ಅಪ್ಪಣ್ಣನವರು ವಿವರಿಸುತ್ತಾರೆ.

ಅಷ್ಟದಳ ಕಮಲದ ಹೂಗಲ್ಲ ಹಿಡಿದು
ಶೂನ್ಯಸಿಂಹಾಸನಕ್ಕೆ ಧವಳಾಲಯವೆತ್ತಿತ್ತು.
ಚಂದ್ರಕಾಂತಶಿಲೆಯಲ್ಲಿ ಪಶ್ಚಿಮದ್ವಾರಮಂ ತೆಗೆದು
ನೋಡುವಡೆ ವಿಪರೀತ!
ಏಕೋಭಾವವೆಂಬುದೊಂದು ಕಂಭ,
ಅದಕ್ಕೆ ಅನೇಕ ಚಿತ್ತಂಗಳಡಗಿದ ಪ್ರಭೆ;
ಆ ಪ್ರಭೆಯೊಳಗೆ ಬ್ರಹ್ಮರಂಧ್ರವೆಂಬ ಮಸ್ತಕದ ಮೇಲೆ
ಪಂಚ ಮೌಕ್ತಿಕದ ಮಾಲೆಯನಿಳಿಬಿಟ್ಟು,
ಮೂಲೆ ಮೂಲೆಗಳ ನಡುವೆ ಕಟ್ಟಿದವು ನವರತ್ನದ
ಗೊಂಡೆಯಂಗಳು
ಕಾಳಿಕೆಯ ಕಪ್ಪಡವವದಕೆ ಮೇಲುವೊದಿಕೆ.
ಉಲುಹಿನ ಅರಳೆಲೆಯ ಬಳಸು ತೋರಣವ ಕಟ್ಟಿ.
ದಶವಾಯುವನೆಲ್ಲವನೊಂದು ಮಾಡಿ,
ಲಿಂಗಸುಖವಾಯುವ ಸಂತೈಸಿ ಆಲವಟ್ಟವಂ ಮಾಡಿ
ಲಂಬಿಸಿದ ಮಂದಾನಿಲನಂ ಮಲಗಂ ಮಾಡಿ,
ಹರುಷವನೆ ವಸಂತನ ಚೌಕದ ಆಸನವಟ್ಟಿಗೆಯ ಮಾಡಿ.

ನವನಾಳದೊಳು ಮೊರೆವ ಶಬ್ದಮಂ
ಶುಕ ಪಿಕ ಭ್ರಮರಂಗಳ ಆಮೋದಮಂ ಮಾಡಿ
ಪರಮಶಾಂತಿಯೆಂಬ ಶೈತ್ಯಾಕಾರದ
ಸುಸೋಂಕಿನ ಚೂತಪಲ್ಲವಂಗಳಂ ಹಾಸಿ
ಉತ್ತರದ್ವಾರವೆಂಬ ನುಸುಳುಗಂಡಿಯಂ ರಚಿಸಿ
ಪೂರ್ವಯೋಗವೆಂಬ ಸೋಪಾನವಂ ಮಾಡಿ
ಪಶ್ಚಿಮದ್ವಾರವೆಂಬ ನಿಜದ್ವಾರವಟ್ಟಮಂ ಮಾಡಿ;
ಸಪ್ತ ವ್ಯಸನ ಪಂಚೇಂದ್ರಿಯಂಗಳೆಂಬ ಪೌಳಿಯನಿಕ್ಕಿ;
ಆಸೆಯಾಮಿಷಮಂ ಕೆಡಿಸಿ
ಊರ್ಧ್ವಚಕ್ರವೆಂಬ ಮೇಲುಪ್ಪರಿಗೆಯಂ ಮಾಡಿ,
ಚಂದ್ರಸೂರ್ಯರೆಂಬ ದೀಪಮಂ ಬೆಳಗಿ
ಸೋಹಂ ಎಂಬ ಶಿಖರಿಯ ಮೇಲೆ
ಮಹಾಜ್ಞಾನ ಪ್ರಕಾಶವೆಂಬ ಹೊನ್ನ ಕಳಶಮಂ ಮಾಡಿ;
ನಿಃಶೂನ್ಯ ನಿರಾಳವೆಂಬ ಶೂನ್ಯ ಸಿಂಹಾಸನವ ಮಾಡಿದ,
ಬಸವಪ್ರಿಯ ಕೂಡಲಚೆನ್ನಸಂಗಯ್ಯನಲ್ಲಿ
ಎನ್ನ ಪರಮಗುರು ಬಸವಣ್ಣನು.

ಮತ್ತಂ,

ಅಂಗದ ಪ್ರಕೃತಿಯ ಲಿಂಗದಲ್ಲಿ ಅಳಿದು,
ಮನವ ವಿಕೃತಿಯ ಅರಿವಿನಲ್ಲಿ ಅಳಿದು,
ಜೀವ ಭ್ರಾಂತಿಯ ನಿಶ್ಚಿಂತಪದದಲ್ಲಿ ಅಳಿದು;
ನಿಶ್ಶೂನ್ಯ ನಿರಾಮಯವಾದ ನಿವಾಸಕ್ಕೆ
ಸದಾಚಾರವೆಂಬ ಕೆಸರುಗಲ್ಲನಿಕ್ಕಿ;
ಸರ್ವಾಚಾರ ಸಂಪತ್ತೆಂಬ ಹೂಗಲ್ಲ ಮುಟ್ಟಿ
ಅಂತಃಕರಣ ಚತುಷ್ಟಯವೆಂಬ ನಾಲ್ಕು ಕಂಬಂಗಳಂ ನಿಲಿಸಿ;
ಜ್ಞಾತೃವೆಂಬ ಭಿತ್ತಿಯ ಮೇಲೆ ಜ್ಞಾನವೆಂಬ ಶಿಖರಿಯನನುಗೊಳಿಸಿ,
ಜ್ಞೇಯವೆಂಬ ಹೊನ್ನ ಕಳಸಮಂ ಶೃಂಗಾರಮಂ ಮಾಡಿ;
ಬ್ರಹ್ಮರಂಧ್ರದ ಊರ್ಧ್ವದ್ವಾರವೆಂಬ ನಿಜದ್ವಾರಮಂ ಮಾಡಿ

ನಿರ್ವಯಲಲ್ಲಿ ನೆಲೆಗೊಳಿಸಿ
ಬಸವಪ್ರಿಯ ಕೂಡಲಚೆನ್ನಸಂಗಯ್ಯನ ಶರಣ
ಪ್ರಭುದೇವರ ಬರವಿಂಗೆ ಶೂನ್ಯ ಸಿಂಹಾಸನವ ರಚಿಸಿ
ಬರವ ಹಾರುತ್ತಿರ್ದನೆನ್ನ ಪರಮಗುರು ಬಸವಣ್ಣನು.

ಮತ್ತಂ,

ಉಪ್ಪರಗುಡಿ ತೋರಣವ ಕಟ್ಟಿತ್ತು ಕಲ್ಯಾಣದಲ್ಲಿ
ಅಷ್ಟದ್ವಾರದಂಗಡಿ ರಾಜಬೀದಿಯೊಳೆಲ್ಲಾ
ವ್ಯಾಸನ ಬಾಹುಗಳುಪ್ಪರಿಸಿದವು.
ಎಂಟು ಬಾಗಿಲಲ್ಲಿ ನಡೆಮಡಿಯ ಹಾಸಿ
ಸಂಕಲ್ಪ ಸಂತೋಷವ ಮಾಡಿದನು ವೃಷಭೇಶ್ವರನು.
ಬಸವಪ್ರಿಯ ಕೂಡಲಚೆನ್ನಸಂಗಯ್ಯ ಬಂದಾನೆಂದು.

ಮೇಲಣ ಈ ಮೂರೂ ವಚನಗಳಲ್ಲಿ ಶರಣ ಹಡಪದ ಅಪ್ಪಣ್ಣನವರು ತಿಳಿಯಪಡಿಸುವಂತೆ, ಪರಮಗುರು ಬಸವಣ್ಣನವರು ತಮ್ಮಂತರಂಗದಲ್ಲಿ ಅನುಭಾವದ ನಿಲವಿನಿಂದ ಪರಾತ್ಪರ ಪರವಸ್ತು (ಶೂನ್ಯವಸ್ತು) ವಿಗಾಗಿ ಶೂನ್ಯ ಸಿಂಹಾಸನ ರಚಿಸಿರುವ ಅನುಭಾವವು ವ್ಯಕ್ತವಾಗಿದೆ. ಈ ಅನುಭಾವದ ಶೂನ್ಯ ಸಿಂಹಾಸನವನ್ನು ವರ್ಣಿಸುವ ಸಾಮರ್ಥ್ಯ ಶರಣ ಅಪ್ಪಣ್ಣನವರಿಗಲ್ಲದೇ ಮತ್ತೊಬ್ಬರಿಗೆ ಸಾಧ್ಯವಿಲ್ಲವೆನ್ನಬಹುದು. ಬಸವ ಮಹಾಗುರುವಿನ ಅಂತರಂಗದ ಕಿಂಕರನಾಗಿರ್ದು, ಜ್ಯೋತಿ ಮುಟ್ಟಿ ಜ್ಯೋತಿಯೇ ಆಗುವಂತೆ ಗುರು ಮುಟ್ಟಿ ಗುರುವೇ ಆಗಿದ್ದಾರೆ ಅಪ್ಪಣ್ಣನವರು.

ಬಸವಾದಿ ಶರಣರೆಲ್ಲರೂ ಪ್ರಭುದೇವರ ಬರವನ್ನು ಹಾರೈಸುವ ಪ್ರಸಂಗದಲ್ಲಿ ಶರಣ ಅಪ್ಪಣ್ಣನವರು ಪ್ರಭುದೇವರ ಬರುವಿನ ಸೂಚನೆಯನ್ನು ನೀಡುತ್ತಾರೆ.-

ಬಯಸುವ ಬಯಕೆ ಕೈ ಸಾರುವಂತೆ,
ನಿಧಿ ನಿಧಾನ ಮನೆಗೆ ಬಪ್ಪಂತೆ
ಪರಿಮಳವನರಸಿ ಬಪ್ಪ ಭ್ರಮರನಂತೆ
ಚಿಂತಾಮಣಿಯ ಪುತ್ಥಳಿ ನಡೆಗಲಿತಂತೆ
ಬಸವಪ್ರಿಯ ಕೂಡಲ ಚೆನ್ನಸಂಗನಲ್ಲಿ
ಪ್ರಭುದೇವರ ಬರವು ಕಾಣಬರುತ್ತಿದೆ
ನೋಡಾ ಸಂಗನಬಸವಣ್ಣಾ.

ತಮ್ಮ ಕರದಿಷ್ಟಲಿಂಗ ದರ್ಪಣದಲ್ಲಿ ಜಂಗಮ ಚೇತನ ಪ್ರಭುದೇವರ ಬರವನ್ನು ಕಂಡ ಅನುಭಾವಿ ಶರಣ ಅಪ್ಪಣ್ಣನವರ ಸಾಧನೆಯ ಮೇಲ್ಮಟ್ಟ ಇಲ್ಲಿ ಗೋಚರವಾಗುತ್ತದೆ.

೫. ಪ್ರಭುದೇವರು ಶೂನ್ಯ ಸಿಂಹಾಸನ ಏರಿದ ಸಂಪಾದನೆ :

ಶೂನ್ಯಸಂಪಾದನೆಯ ೧೮ನೆಯ ಅಧ್ಯಾಯದಲ್ಲಿ ಸಂಪಾದನೆಕಾರರು 'ಪ್ರಭುದೇವರು ಶೂನ್ಯ ಸಿಂಹಾಸನ ಏರಿದ ಸಂಪಾದನೆ'ವಿವರಿಸಿದ್ದಾರೆ. ಶೂನ್ಯಸಿಂಹಾಸನವೆಂಬುದು ಶರಣನ ಅಂತರಂಗದಲ್ಲಿ ತೊಳಗಿ ಬೆಳಗುವ ಪರಾತ್ಪರ ಪರವಸ್ತುವಿನ ಇರುವಿಕೆಯ ನಿರ್ದೇಶನವೇ ಹೊರತು ಹೊರಗಣ ಭೌತಿಕ ಕಲ್ಲು-ಮಣ್ಣಿನಿಂದ ನಿರ್ಮಿಸಿದ ಸಿಂಹಾಸನವಲ್ಲ. ಇಲ್ಲಿ ಈ ಶಬ್ದವನ್ನು ಕೇವಲ ಸಾಂಕೇತಿಕವಾಗಿ ಮಾತ್ರ ವಚನಕಾರರು ಬಳಸಿರುವುದನ್ನು ಕಾಣುತ್ತೇವೆ. (ಸಂಪಾದನೆಕಾರರು ಇಲ್ಲಿ ವಚನಗಳು ಮತಿತಾರ್ಥವನ್ನು ಸರಿಯಾಗಿ ಗ್ರಹಿಸಿಲ್ಲವೆಂದು ನನ್ನ ಅನಿಸಿಕೆ)

ಪರಮಗುರು ಬಸವಣ್ಣನವರು ತಮ್ಮ ಅನುಭಾವ ಸಾಧನೆಯ ಶೂನ್ಯ ಸಿಂಹಾಸನವನ್ನು ಪ್ರಭುದೇವರೂ ಸಹ ಸಾಧಿಸಿದರು ಎಂಬ ಸಾಂಕೇತಿಕತೆಯನ್ನು ಇಲ್ಲಿ ಗ್ರಹಿಸಬೇಕು. ಸ್ವತಃ ಶರಣ ಅಪ್ಪಣ್ಣನವರು ಈ ಬಗ್ಗೆ ಬಹು ಸ್ಪಷ್ಟವಾಗಿ ತಮ್ಮದೊಂದು ವಚನದಲ್ಲಿ ಕೆಳಗಿನಂತೆ ತಿಳಿಯಪಡಿಸಿದ್ದಾರೆ-

ನೆಲನ ಹೊದ್ದದು, ಆಕಾಶವ ಮುಟ್ಟದು.
ಎಡೆಯಲೊಂದು ರೂಪಿಲ್ಲ.
ನಿಲವೇ ಭಿತ್ತಿ, ನಿರಹಂಕಾರವೇ ಶಿಖರ.
ಮಹದಹಂಕಾರವೇ ಶೃಂಗಾರ ಕಳಶ.
ಸಹಸ್ರಪತ್ರದ ನವಕಮಲ ಸಿಂಹಾಸನದ ನಿತ್ಯವೇ ಮಲಗು.
ನಿಜವೆಂಬ ವಿಸ್ತರದಲ್ಲಿ ನಿತ್ಯ ನಿರಾಳವೆಂಬ ಮಹಾಘನವು
ಬಂದು ಮೂರ್ತಿಗೊಳ್ಳಲು ಕಾಯದ ಕಂಗಳಿಗೆ ಕಾಣಬಾರದು.
ಮನದ ಮುಂದೆ ಅಳವಡದು;
ಬಸವಪ್ರಿಯ ಕೂಡಲಚೆನ್ನಸಂಗಯ್ಯನಲ್ಲಿ
ಪ್ರಭುದೇವರ ಶ್ರೀಪಾದಕ್ಕೆ ನಮೋ ನಮೋ ಎಂಬೆನು.

ಕಾಯದ ಕಣ್ಣಿಗೆ ಕಾಣುವಂತಹದಲ್ಲ ಈ ಶೂನ್ಯ ಸಿಂಹಾಸನ. ನಿತ್ಯ ನಿರಾಳವೆಂಬ ಮಹಾಘನವು (ಪರವಸ್ತು) ಇಂತಪ್ಪ ಭಾವದ ಜ್ಞಾನನಿವಾಸದಲ್ಲಿ ಬಂದು ಮೂರ್ತಿಗೊಳ್ಳಲು, ಅದು ಭೌತಿಕ ಕಾಯದ ಕಣ್ಣಿಗೆ ಕಾಣಬಾರದು, ಕಾಯ ಅಕಾಯವಾಗಬೇಕು. ಅಂದರೆ ಅಂಗವು ಲಿಂಗವಾಗಬೇಕು. ಬಸವಣ್ಣ ಪ್ರಭುದೇವ ಸಾಧಿಸಿದ ಸಾಧನೆಯನ್ನು ಅನುಭಾವಕ್ಕೆ ತಂದುಕೊಂಡು ವಿವರಿಸುವ ಅಪ್ಪಣ್ಣ ಶರಣನೂ ಆ ಹಂತವನ್ನು ತಲುಪಿದವನೆಂಬುದರಲ್ಲಿ ಯಾವ ಸಂಶಯವೂ ಇಲ್ಲ.

೬. ಪ್ರಭುದೇವರ ಆರೋಗಣೆ :

ಶೂನ್ಯ ಸಂಪಾದನೆಯ ೧೯ನೆಯ ಅಧ್ಯಾಯದಲ್ಲಿ 'ಪ್ರಭುದೇವರ ಆರೋಗಣೆ' ಎಂಬ ಪ್ರಸಂಗವಿದೆ. ಅನುಭಾವಿ ಜಂಗಮನಾದ ಪ್ರಭುದೇವರಿಗೆ ಪ್ರಸಾದ ಎಡೆಮಾಡುವ ಪ್ರಸಂಗವಿದೆ. ಗುರು-ಲಿಂಗ-ಜಂಗಮಕ್ಕೆ ತನು-ಮನ-ಧನವನು ಅರ್ಪಿಸಬೇಕೆಂಬ ತತ್ತ್ವ. ಅದುವೇ ಅರ್ಥ-ಪ್ರಾಣ-ಅಭಿಮಾನವು ಅರ್ಪಿತವಾಗಬೇಕು. ಗುರುವಿಂಗೆ, ಅರಿವನ್ನು, ಲಿಂಗಕ್ಕೆ ಆಚಾರವೇ ಪ್ರಾಣವಾಗಿಪ್ಪ ಮನವನ್ನು, ಜಂಗಮಕ್ಕೆ ಭಾವಧನ (ಭಾವಸಂಪತ್ತು) ಅರ್ಪಿತವಾಗಬೇಕು.

ಪ್ರಭುದೇವರು ಬಸವಣ್ಣನವರಲ್ಲಿ ಪ್ರಾರ್ಥಿಸಿಕೊಳ್ಳುತ್ತಿದ್ದಾರೆ-

ಸಮತೆಯೆಂಬ ಕಂಥೆಯ ತೊಟ್ಟು,
ಸುಬುದ್ಧಿಯೆಂಬ ಟೊಪ್ಪರವನಿಕ್ಕಿ
ವಿಷಯವೆಂಬ ಹಾವುಗೆಯ ಮೆಟ್ಟಿ,
ತಮಂಧವೆಂಬ ಕುಣಿಯ ಬೀಳದೆ,
ವೈರಾಗ್ಯವೆಂಬ ಕೊರಡನೆಡಹದೆ,
ಮದವೆಂಬ ಚೇಳಮೆಟ್ಟದೆ,
ಗುಹೇಶ್ವರನ ಶರಣ ಬಂದೆನು;
ಭಕ್ತಿ ಭಿಕ್ಷವನಿಕ್ಕೈ ಸಂಗನಬಸವಣ್ಣಾ,

ಮತ್ತಂ,

ಕಡೆಯಿಲ್ಲದ ದೇಶವ ತಿರುಗಿದೆನು,
ಹವಣಿಲ್ಲದ ಕಂಥೆಯ ತೊಟ್ಟೆನು,

ಹಸಿವಿಲ್ಲದ ಕಪ್ಪರವ ಹಿಡಿದು
ಭಕ್ತಿ ಭಿಕ್ಷವ ಬೇಡ ಬಂದೆ.
ಗುಹೇಶ್ವರ ಹಸಿದನು ಉಣಲಿಕ್ಕು, ಎಳಾ
ಸಂಗನಬಸವಣ್ಣಾ.

ಈ ತೆರನಾಗಿ ಚರಜಂಗಮನಾಗಿ ಜಗವ ಸಂಚರಿಸುತ್ತಾ ಬಂದ ಪ್ರಭುದೇವ ಬಸವತಂದೆಯಲ್ಲಿ ಭಕ್ತಿಪ್ರಸಾದವನ್ನು ಭಿಕ್ಷೆ ಕೇಳುತ್ತಿದ್ದಾನೆ.

ಈ ಕುರಿತು ಬಸವಣ್ಣನವರು ಪ್ರಾರಂಭದಲ್ಲಿಯೇ ಅರಿಕೆ ಮಾಡಿಕೊಂಡಿದ್ದಾರೆ-

ಅಂಗದಲಳವಟ್ಟ ಲಿಂಗಕ್ಕೆ ಅಂಗವೇ ಭಾಜನ.
ಪ್ರಾಣದ ಮೇಲಣ ಲಿಂಗಕ್ಕೆ ಮನವೇ ಭಾಜನ.
ಅರಿವಿನ ಮೇಲಣ ಲಿಂಗಕ್ಕೆ ನಿರ್ಭಾವವೇ ಭಾಜನ.
ಕೂಡಲಸಂಗಮದೇವಯ್ಯಾ, ಪ್ರಭುದೇವರು ಆರೋಗಣೆಯ
ಮಾಡುವರೆ, ಭಕ್ತಿ ಪರಿಯಾಣವಲ್ಲದೇ
ಬೇರೆ ಭಾಜನವ ಕಾಣೆನು.

ಈ ರೀತಿ ಜಂಗಮಪುಂಗವನಾದ ಪ್ರಭುವು ತಮ್ಮ ಮಠಕ್ಕೆ (ಮಹಾ ಮನೆಗೆ) ಬಂದಾಗ ಭಕ್ತಿಭಾವದಲ್ಲಿ ಆರೋಗಣೆ ಮಾಡುವಲ್ಲಿ, ಪ್ರಸಾದವನ್ನು ಅಂದರೆ ಪ್ರಸಾದದ ಷಡ್ರುಚಿಗಳನ್ನು ಷಡ್ಲಿಂಗಗಳಿಗೆ ಅರ್ಪಿಸಿಕೊಂಡು ಜಗತೃಪ್ತಿಯಾಗುವಂತೆ ಸ್ವೀಕರಿಸಿ, ಜಗದ್ಭರಿತ ಜಂಗಮ ಎಂಬ ತತ್ತ್ವವನ್ನು ಚಿತ್ತರಿಸುತ್ತಾನೆ. ಪ್ರಬುದೇವ. ಇಂತಹ ಸಂದರ್ಭದಲ್ಲಿ ಶರಣ ಅಪ್ಪಣ್ಣನವರು ತಮ್ಮ ಪರಮಗುರು ಬಸವಣ್ಣನವರು ಮಾಡಿ ನೀಡುತ್ತಿದ್ದ ದಾಸೋಹವನ್ನು ವರ್ಣಿಸುತ್ತಾರೆ-

ಹೆಡಗೆಹಾರ, ಮೊರಹಾರ, ಗೆರಸಿಹಾರ, ಮಡಕೆಹಾರ
ದೆಸೆದೆಸೆಯಲ್ಲಿ ತಂದು ನೀಡುತ್ತಿರಲು,
ಹೊಸಪರಿಯಲಾರೋಗಣೆಯನವಧರಿಸುತ್ತಿದ್ದನು.
ಆವ ದೆಸೆಯಲ್ಲಿ ತಂದು ನೀಡುತ್ತಿದ್ದಡೆ
ಆ ದೆಸೆದೆಸೆಗಳೆಲ್ಲಾ ಬಾಯಾಗಿ ಕೊಳುತ್ತಿದ್ದನು.
ಎತ್ತೆತ್ತ ನೋಡಿದಡತ್ತ ಮುಖವಗೆಯ ಹೊಯ್ದಂತೆ ತೆರಹಿಲ್ಲ!

ಒಂದು ನಿಮಿಷ ಎಡಹಿದಡೆ ಅಕ್ಕಿ ಗಚ್ಚು ನುಚ್ಚು
ತವುಡು ಮೊದಲಾಗಿ ಹೆಚ್ಚಿದವು ನಿಮಿಷದೊಳು.
ಭಕ್ತಿ ಬಂಧುಗಳೆಲ್ಲಾ ತಮ್ಮ ತಮ್ಮ ಮಠದ
ಸಯದಾನವತಂದು ಸಾರಿಗಟ್ಟಿ ನೀಡುತ್ತಿದ್ದಡೆ,
ಅದ್ಭೂತದ ಆರೋಗಣೆಯ ಕಂಡು
ಹರಿಹರಿದು ಪಾಕ ಪ್ರಯತ್ನಮಂ ಮಾಡಿ ಎನುತ್ತೆ,
ಬಸವಪ್ರಿಯ ಕೂಡಲಚೆನ್ನಸಂಗಯ್ಯನಲ್ಲಿ
ಸಂತೋಷದೋಳೋಲಾಡುತಿರ್ದನು
ಎನ್ನ ಪರಮಗುರು ಬಸವಣ್ಣನು.

ಈ ತೆರನಾದ ಭಕ್ತಿಪ್ರಸಾದವನ್ನು ಸ್ವೀಕರಿಸಿದ ಪ್ರಭುವಿನ ನಿಲವನ್ನು ಶರಣ ಅಪ್ಪಣ್ಣನವರು ತಮ್ಮ ಇನ್ನೊಂದು ವಚನದಲ್ಲಿ ಅರುಹುತ್ತಾರೆ-

ನಿರಾಕಾರದ ಶಕ್ತಿಯಲ್ಲಿ ನಿರಾಳವೆಂಬ ತನು,
ನಿಃಶೂನ್ಯವೆಂಬ ಶೂನ್ಯಸಿಂಹಾಸನದ ಮೇಲೆ
ಘನವಾಗಿ ತೊಳಗಿ ಬೆಳಗುತಿರ್ದನು.
ದೆಸೆಯೆಲ್ಲಾ ಮುಖವಾಗಿ, ಮುಖವೆಲ್ಲಾ ಜಗವಾಗಿ,
ಅಖಂಡ ಪರಿಪೂರ್ಣ ಪರಬ್ರಹ್ಮ ತಾನಾದನು.
ಈ ಮಹಿಮನ ನೆನೆದೊಡೆ ಮನೋಮುಕ್ತಿ,
ಕಂಡಡೆ ರೂಪುಮುಕ್ತಿ, ನುಡಿದಡೆ ಶಬ್ದಮುಕ್ತಿ,
ಸಂಗವ ಮಾಡಿದಡೆ ಸರ್ವಾಂಗ ಲಿಂಗೈಕ್ಯ,
ಬಸವಪ್ರಿಯ ಕೂಡಲಚೆನ್ನಸಂಗಯ್ಯ
ನಿಮ್ಮ ಪ್ರಭುವಿನ ಶ್ರೀಪಾದಕ್ಕೆ ಶರಣೆಂದು ಬದುಕಿದೆನು.

೭. ಶರಣರ ಅವಸಾನ ಪರಾಮರಿಕೆ :

ಶೂನ್ಯ ಸಂಪಾದನೆಕಾರನು ಈ ಅಧ್ಯಾಯವನ್ನು ಲಿಂಗಾಂಗಸಾಮರಸ್ಯದ ನಿಲವೆಂದು ಪರಿಗಣಿಸದೇ 'ಅವಸಾನ ಪರಾಮರಿಕೆ' ಎಂದು ಹೆಸರಿಸಿದ್ದಾನೆ. ಶರಣರಿಗೆ ಸಾಮರಸ್ಯವೇ ಅವರ ಬದುಕು, ಉಸಿರು, ಸರ್ವಸ್ವವೂ ಆಗಿದೆ. ಈ ಅಧ್ಯಾಯದಲ್ಲಿ ಶರಣರಾದ ಅಪ್ಪಣ್ಣನವರ ಮೂರು ವಚನಗಳು ಉಲ್ಲೇಖವಾಗಿವೆ-

೧) ಎನ್ನ ತನು ನಿಮ್ಮ ಸೇವೆಯಲ್ಲಿ ಸವೆದು,
ಎನ್ನ ಮನ ನಿಮ್ಮ ನೆನಹಿನಲ್ಲಿ ಸವೆದು,
ಎನ್ನ ಅರಿವು ನಿಮ್ಮ ಘನದೊಳಗೆ ಸವೆದು
ನಿಶ್ಚಲ ನಿಜೈಕ್ಯವಾಗಿ
ಬಸವಪ್ರಿಯ ಕೂಡಲಚೆನ್ನಸಂಗಯ್ಯ
ನೀನಾನೆಂಬುದು ಏನಾಯಿತ್ತೆಂದರಿಯೆ.

೨) ಎನ್ನ ಆಚಾರ ವಿಚಾರ ಬಸವಣ್ಣಂಗರ್ಪಿತವಾದವು.
ಎನ್ನ ಅವಧಾನ ಅನುಭಾವ ಬಸವಣ್ಣಂಗರ್ಪಿತವಾದವು.
ಎನ್ನ ಸರ್ವಾಚಾರ ಸಂಪತ್ತು ಬಸವಣ್ಣನಲ್ಲಿ ವೇದ್ಯವಾಯಿತ್ತು.
ಬಸವಪ್ರಿಯ ಕೂಡಲ ಚೆನ್ನಸಂಗಮದೇವರಲ್ಲಿ
ನಿಜನಿವಾಸಿಯಾಗಿರ್ದೆನು.

೩) ಹರಿದು ಹತ್ತಿ ಮುಟ್ಟಲಿಲ್ಲ.
ಮುಟ್ಟಿ ಮರಳಿ ಇಳಿಯಲಿಲ್ಲ.
ಬೆರಸಿಹೆನೆಂದು ನೆನೆಯಲಿಲ್ಲ.
ಬಸವಪ್ರಿಯ ಕೂಡಲಚೆನ್ನಸಂಗಯ್ಯನಲ್ಲಿ
ಶಬ್ದಕ್ಕೆ ಇಂಬಿಲ್ಲದಿದ್ದೆನು.

ಶರಣ ಅಪ್ಪಣ್ಣನವರ ತನು-ಮನ-ಭಾವಗಳು ಪರಾತ್ಪರ ಪರವಸ್ತುವಿನಲ್ಲಿ ಬೆರೆತು ಒಂದಾಗಿವೆ. ಲಿಂಗಾಂಗಸಾಮರಸ್ಯದ ಈ ಮಹಾನಿಲುವಿನಲಿ ನಿಂದ ಶರಣನಿಗೆ ಶಬ್ದವು ನಿಃಶಬ್ದವಾಗಿದೆ.

ಈ ರೀತಿಯಾಗಿ ಶೂನ್ಯಸಂಪಾದನೆಯಲ್ಲಿ ಶರಣ ಅಪ್ಪಣ್ಣನವರ ವಚನಗಳನ್ನು ಅಲ್ಲಲ್ಲಿ ಬಳಸಿಕೊಂಡು, ಅನುಭವಮಂಟಪದ ಚರ್ಚೆಯಲ್ಲಿ ಅವರ ಮಹತ್ವವನ್ನು ಗುರುತಿಸಲಾಗಿದೆಯೆನ್ನಬಹುದು.

೬. ಕಲ್ಯಾಣಕ್ರಾಂತಿಯಲ್ಲಿ ಅಪ್ಪಣ್ಣನವರ ಪಾತ್ರ

ಕಲ್ಯಾಣದಲ್ಲಿ ಅಖಂಡ ೨೭ ವರುಷಗಳ ಕಾಲ ಅನುಭವ ಮಂಟಪದಲ್ಲಿ ಅನುಭಾವ ಜರುಗಿ ವಿಶ್ವಕ್ಕೆ ವಿನೂತನವಾದ ಧರ್ಮ-ಸಮಾಜ-ಸಂಸ್ಕೃತಿಯು ರೂಪುಗೊಂಡಿತು. ವಚನಸಾಹಿತ್ಯವೆಂಬ ಹೊಸ ಸಾಹಿತ್ಯ ಪ್ರಕಾರವೇ ಕಲ್ಯಾಣನಾಡಿನಲ್ಲಿ ರಚಿತವಾಯಿತು. ಶರಣರ ಸಮತಾ ತತ್ತ್ವಗಳಿಂದಾಗಿ ಧಾರ್ಮಿಕ-ಸಾಮಾಜಿಕ-ನೈತಿಕ ಆಧ್ಯಾತ್ಮಿಕ ಸಾಹಿತ್ಯಿಕ ಕ್ರಾಂತಿ ಪ್ರಾರಂಭವಾಯಿತು.

ದಾಸೀಪುತ್ರನಾಗಲೀ, ವೇಶ್ಯಾಪುತ್ರನಾಗಲೀ ಇಷ್ಟಲಿಂಗ ದೀಕ್ಷೆಯಾದ ನಂತರ ಅವರನ್ನು ಶಿವಸ್ವರೂಪವೆಂದು ಕಾಣುವ ವ್ಯವಸ್ಥೆ ಮೂಡಿತು. ಹೊಲೆಯ-ಹಾರುವನೆಂಬ ಭೇದ ಅಳಿದು ಲಿಂಗಧಾರಿಗಳೆಲ್ಲಾ ಒಂದು, ಅವರಲ್ಲಿ ಮೇಲು ಕೀಳುಗಳಿಲ್ಲ. ಎಲ್ಲರೂ ಸಮಾನರು ಎಂಬ ತತ್ತ್ವ ಸಮಾಜ ಜೀವನದಲ್ಲಿ ರೂಪುಗೊಳ್ಳತೊಡಗಿತ್ತು.

ಇಂತಹ ಸ್ಥಿತಿಯಲ್ಲಿ ಶರಣರಾದ ಹರಳಯ್ಯ ಮತ್ತು ಮಧುವಯ್ಯಗಳು ಇಬ್ಬರೂ ಅನುಭವ ಮಂಟಪದ ಸದಸ್ಯರಾದ್ದರಿಂದ ತಮ್ಮ ಮಕ್ಕಳ ಲಗ್ನ ಮಾಡಿ ಭಕ್ತಿ ಬಾಂಧವ್ಯ ಬೆಳೆಸಲು ನಿರ್ಧರಿಸಿದರು. ಶರಣ ಹರಳಯ್ಯನವರು ತಮ್ಮ ಪೂರ್ವಾಶ್ರಮದಲ್ಲಿ ಸಮಗಾರ ಜಾತಿಯವರಾಗಿದ್ದರೆ. ಶರಣ ಮಧುವಯ್ಯನವರು ಬ್ರಾಹ್ಮಣ ಜಾತಿಯವರಾಗಿದ್ದರು. ಅವರಿಬ್ಬರೂ ಲಿಂಗ ದೀಕ್ಷೆ ಹೊಂದಿ ಶರಣರಾದುದರಿಂದ ಅವರಲ್ಲಿ ಮೇಲು - ಕೀಳು, ಸ್ಪೃಶ್ಯ- ಅಸ್ಪೃಶ್ಯ ಭೇದವಿಲ್ಲವೆಂಬುದು ಶರಣರ ಅಭಿಮತವಾಗಿತ್ತು. ಆದ್ದರಿಂದಲೇ ಶರಣ ಹರಳಯ್ಯನವರ ಮಗ ಶೀಲವಂತನಿಗೂ, ಶರಣ ಮಧುವರಸರ ಮಗಳು ಲಾವಣ್ಯಳಿಗೂ ಲಗ್ನ ಮಾಡಲು ನಿರ್ಧರಿಸಿದರು.

ಇದರಿಂದಾಗಿ ವರ್ಣವಾದಿಗಳಾದ ಕೊಂಡೆಯ ಮಂಚಣ್ಣ, ನಾರಾಯಣ ಕ್ರಮಿತ, ಗುಂಡುಭಟ್ಟ, ಮುಂತಾದವರಿಗೆ ಈ ಮದುವೆ ವರ್ಣಸಂಕರವಾಗಿ ಕಂಡು ಸನಾತನ ಧರ್ಮಕ್ಕೆ ಬಾಹಿರವೆನಿಸಿದ್ದರಿಂದ ಬಿಜ್ಜಳ ರಾಜನಿಗೆ ಕಿವಿಯೂದತೊಡಗಿದರು. ಶರಣರ ದೃಷ್ಟಿಯಲ್ಲಿ ಈ ಲಗ್ನವು ಮಾನವಕುಲದ ಕಲ್ಯಾಣ, ಮಾನವೀಯತೆಯ ಮಹಾಸಿದ್ಧಿಯೆನಿಸಿತು. ಅದನ್ನು ಶರಣರಾದ ಮೋಳಿಗೆಯ ಮಾರಯ್ಯನವರು ತಮ್ಮದೊಂದು ವಚನದಲ್ಲಿ ವಿವರಿಸಿದ್ದಾರೆ-

ಅಗ್ರಜ ಅಂತ್ಯಜ ವರ್ಣಧರ್ಮದ ಎರಡು ಧ್ರುವಗಳು
ಒಂದು ಉತ್ತರ, ಇನ್ನೊಂದು ದಕ್ಷಿಣ.
ನಡುವೆ ದೊಡ್ಡ ಕಮರಿ!
ಅನುರಾಗದ ಗಾಳಿ ಬೀಸಿ ಭಕ್ತಿ ಸೂತ್ರ ಬಂಧಿಸಿತ್ತು ಎರಡನ್ನೂ.
ಅಗ್ರಜನ ಪುತ್ರಿ ಅಂತ್ಯಜನ ಮಗನ ಕೈಹಿಡಿದಳು.
ಸಾಧಿಸಿತು ಮಾನವತೆಯ ಮಹಾಸಿದ್ಧಿ ಶರಣರಲ್ಲಿ!
ನಿಃಕಳಂಕ ಮಲ್ಲಿಕಾರ್ಜುನಾ ನೋಡಿ ಬೆರಗಾದೆ ನಾನು.

ಈ ರೀತಿಯಾಗಿ ಶರಣ ಜೀವಿಗಳ ಮಧ್ಯೆ ಜರುಗಿದ ಈ ವಿವಾಹವನ್ನು ಸಹಿಸದ ಅಂದಿನ ಜಾತ್ಯಾಂಧರು ಬಿಜ್ಜಳನನ್ನು ತಪ್ಪುದಾರಿಗೆಳೆದು, ಪ್ರಧಾನಮಂತ್ರಿ ಬಸವಣ್ಣನವರು ಮಂತ್ರಿಪದವಿ ತ್ಯಾಗಮಾಡುವಂತೆ ಮಾಡಿದ್ದಲ್ಲದೇ ಕಲ್ಯಾಣದಿಂದ ಗಡಿಪಾರಿನ ಆಜ್ಞೆಯನ್ನೂ ಜರುಗಿಸಿದರು. ಶರಣಸಮೂಹವೆಲ್ಲಾ ಸಾತ್ವಿಕಸಿಟ್ಟಿನಿಂದ ಕೆರಳಿದರು. ಸದುವಿನಯದ ಧರ್ಮಪಿತ ಬಸವೇಶ್ವರನು ಅವರನ್ನು ಸಮಾಧಾನ ಮಾಡಿ 'ಅರಸು ಮುನಿದರೆ ನಾಡೊಳಗಿರಲಾರದಯ್ಯಾ ' ಎಂದು ಕಲ್ಯಾಣದಿಂದ ಕಪ್ಪಡಿ ಸಂಗಮದೆಡೆಗೆ ಸಾಗಿದರು. ಅವರೊಂದಿಗೆ, ಅವರ ನೆರಳಾಗಿ, ರಕ್ಷಕನಾಗಿ, ತಾಯಿಯಾಗಿ ಕಾಪಾಡಲು ಶರಣ ಅಪ್ಪಣ್ಣನವರೂ ಹೊರಟರು. ಬಸವಣ್ಣನವರು - ಅಪ್ಪಣ್ಣನವರು ಇಬ್ಬರೂ ಸಂಗಮದ ಪ್ರಶಾಂತ ವಾತಾವರಣದಲ್ಲಿ ಇಷ್ಟಲಿಂಗಪೂಜೆ ಅನುಭಾವದಲ್ಲಿ ನಿರತರಾಗಿ ಕಲ್ಯಾಣದ ಆಗು ಹೋಗುಗಳನ್ನು ಗಮನಿಸುತ್ತಲೇ ಇದ್ದರು.

ಅತ್ತ ಕಲ್ಯಾಣದಲ್ಲಿ ಬಿಜ್ಜಳನ ಮುಂದೆ ಹರಳಯ್ಯ - ಮಧುವರಸ ಶೀಲವಂತ - ಲಾವಣ್ಯ - ಕಲ್ಯಾಣಮ್ಮರುಗಳ ವಿಚಾರಣೆಯ ನಾಟಕ ನಡೆದು ಕೊನೆಗೆ ಎಳೆಹೂಟಿ ಶಿಕ್ಷೆ (ಆನೆಯ ಕಾಲಿಗೆ ಕಟ್ಟಿ ಎಳೆಸಿ ಸಾಯಿಸುವಿಕೆ) ಜಾರಿ ಮಾಡಲಾಯಿತು. ಅಧಿಕಾರ ಗದ್ದುಗೆಗಾಗಿ ಬಿಜ್ಜಳನನ್ನು ಚಾಲುಕ್ಯ ವಂಶದ ಜನ ಕೊಲೆ ಮಾಡಿ, ಆರೋಪವು ಶರಣರ ಮೇಲೆ ಬರುವಂತೆ ಮಾಡಿದರು. ಇದರಿಂದಾಗಿ ಶರಣರಿಗೂ ಬಿಜ್ಜಳನ ಸೈನ್ಯಕ್ಕೂ ಘನಘೋರ ಯುದ್ಧ ಪ್ರಾರಂಭವಾಯಿತು. ಶರಣರೆಲ್ಲಾ ಹತ್ತಾರು ಕಡೆಗೆ ಗುಂಪುಮಾಡಿ ವಚನ ಸಾಹಿತ್ಯ ಉಳಿಸುವ ಸಲುವಾಗಿ ಸೈನ್ಯದೊಡನೆ ಹೋರಾಡುತ್ತ ಗಣಾಚಾರಿಗಳಾಗಿ ಕಾದತೊಡಗಿದರು. ಈ ಸುದ್ದಿ ತಿಳಿಯುತ್ತಲೇ ಬಸವಣ್ಣನವರು ತಮ್ಮ ಹಿರಿಯ ಧರ್ಮಪತ್ನಿ ಗಂಗಾಂಬಿಕೆಯನ್ನು ತಮ್ಮ ವಯೋವೃದ್ಧಳಾದ ಅಕ್ಕ

ಅಕ್ಕನಾಗಮ್ಮನವರ ಸೇವೆಗಿರಲು ತಿಳಿಸಿ, ತಮ್ಮ ಎರಡನೆಯ ಪತ್ನಿ ನೀಲಾಂಬಿಕೆಯನ್ನು ಸಂಗಮಕ್ಕೆ ಕರೆತರಲು ಅಪ್ಪಣ್ಣನವರನ್ನು ಕಳಿಸಿದರು. ಅಪ್ಪಣ್ಣಾ ಶರಣರು ತನ್ನ ಗುರುವಿನ ಅಪ್ಪಣೆಯಂತೆ ನೀಲಾಂಬಿಕಾ ತಾಯಿಯವರನ್ನು ಕರೆತರಲು ಬರುವರು. ಈ ಪ್ರಸಂಗದಲ್ಲಿ ನೀಲಾಂಬಿಕಾ ತಾಯಿಯವರು ಉತ್ತರಿಸುವರು.

ನಾನಾರ ಸಾರುವೆನೆಂದು ಚಿಂತಿಸಲೇಕಯ್ಯಾ?
ನಾನಾರ ಹೊಂದುವೆನೆಂದು ಭ್ರಮೆಪಡಲೇತಕಯ್ಯಾ?
ಪರಿಣಾಮ ಮೂರ್ತಿ ಬಸವನ ರೂಪು ಎನ್ನ ಕರಸ್ಥಲದಲ್ಲಿ
ಬೆಳಗಿದ ಬಳಿಕ ಸಂಗಯ್ಯನ ಹಂಗು ನಮಗೇತಕಯ್ಯಾ
ಅಪ್ಪಣ್ಣಾ?

ಆದಾಗ್ಯೂ ಅಕ್ಕನಾಗಮ್ಮ ತಾಯಿಯವರು ತಿಳಿಹೇಳಿ, ಅಪ್ಪಣ್ಣನವರೊಂದಿಗೆ ನೀಲಾಂಬಿಕೆಯನ್ನು ಕಳಿಸಿ: ತಾವು, ಗಂಗಾಂಬಿಕೆ, ಚೆನ್ನಬಸವಣ್ಣಾ , ಮಡಿವಾಳ ಮಾಚಿದೇವ, ಕಿನ್ನನರಿ ಬೊಮ್ಮಯ್ಯ, ಡೋಹರ ಕಕ್ಕಯ್ಯ ಮುಂತಾದವರೊಡನೆ ವಚನಗಳ ತಾಡವಾಲೆಗಳನ್ನು ಗಾಡಿ, ರಥಗಳಲ್ಲಿ ಹೇರಿಕೊಂಡು, ಬೆನ್ನಿಗೆ ಕಟ್ಟಿಕೊಂಡು ಯುದ್ಧ ಮಾಡುತ್ತಾ ಉಳಿವೆಯ ಅಭಯಾರಣ್ಯದ ಕಡೆ ಸಾಗಿದರು.

ಇತ್ತ ಅಪ್ಪಣ್ಣನವರು ಲಿಂಗಮ್ಮ ಹಾಗೂ ನೀಲಾಂಬಿಕಾ ತಾಯಿಯರು ಕಪ್ಪಡಿ ಸಂಗಮದ ಹತ್ತಿರ ಕೃಷ್ಣೆ-ಮಲಪಹಾರಿಯರು ಕೂಡಿ ಸಾಗುವ ಮಹಾನದಿಯ ಆಚೆಯ ದಂಡೆಗೆ ತಂಗಡಗಿ ಗ್ರಾಮದ ಹೊರವಲಯಕ್ಕೆ ಬರುವುದರೊಳಗಾಗಿ ಧರ್ಮಪಿತ ಬಸವಣ್ಣನವರು ಮರ್ತ್ಯಲೋಕದ ತಮ್ಮ ಮಣಿಹ ಪೂರೈಸಿತೆಂದು ತಮ್ಮ ಕರದಿಷ್ಟ ಲಿಂಗ ಕೂಡಲಸಂಗಮದಲ್ಲಿ ಬೆರೆದ ಸುದ್ದಿಯ ತಲುಪಲು, ಅಪ್ಪಣ್ಣ, ನೀಲಮ್ಮ ತಾಯಿಯವರು ನದಿಯ ದಡದಲ್ಲಿ ಹೃದಯ ದುಃಖದಿಂದ ಕೂಡದವರಾಗಿ ಪೂಜೆಗೆ ಕುಳಿತರು. ಶರಣೆ ನೀಲಮ್ಮ ತಾಯಿಯವರು ಇಷ್ಟಲಿಂಗವನ್ನು ಅನಿಮಿಷ ದೃಷ್ಟಿಯಿಂದ ದಿಟ್ಟಿಸುತ್ತಾ ಭಾವ ತುಂಬಿ ಹಾಡತೊಡಗಿದರು -

ನೋಡು ನೋಡು ನೋಡು ನೋಡು ನೋಡು ಲಿಂಗವೆ
ನೋಡು ಬಸವಯ್ಯನವರು ಮಾಡಿದಾಟವ
ಹರಳಯ್ಯ ಮಧುವಯ್ಯನವರಿಗೆ ಎಳೆಹೂಟ
ದುರುಳ ಬಿಜ್ಜಳನು ಕಟ್ಟಿದನೆಂದರೆ

ಇರಬಾರದಿಲ್ಲೀಗ ಶರಣರಿಗರುಹಿರೆಂ
ದರಸು ಬಸವರಾಜ ಪೇಳ್ದನಂತೆ !
ಅಪ್ಪಣ್ಣಯ್ಯಗಳೆನ್ನ ಕರೆಯ ಬಂದಿಹರು
ಕೃಪ್ಪಡಿ ಸಂಗಮನಾಥ ಕೇಳೋ
ಪುಷ್ಪಕ್ಕೆ ಪರಿಮಳ ಬೆರೆದಂತೆ ಎ
ನ್ನಪ್ಪಿದ ಲಿಂಗವೆ ಮಾತನಾಡೋ !
ಸಂಗನ ಬಸವಣ್ಣನೆಂದ ನಿರೂಪಕೆ
ಹಿಂಗದೆ ಕರವೆತ್ತಿ ಮುಗಿಯುತಲಿ
ಸಂಗಮನಾಥನೆ ಈತನೆಂದು ಎ
ನ್ನಂಗೈಯ ಲಿಂಗದೊಳಗಡುಗುವೆನು !

ಈ ರೀತಿ ಹಾಡುತಾ ಹಾಡುತ್ತಾ ನೀಲಮ್ಮ ತಾಯಿಯರೂ ಲಿಂಗದೊಳಗಾಗಲು ಶರಣ ಅಪ್ಪಣ್ಣನೂ ಲಿಂಗಮ್ಮರೂ ಕೂಡ ತಾಯಬೆಂಬಳಿವಿಡಿದು ತಾನೂ ಕರದಿಷ್ಟಲಿಂಗವ ಪೂಜಿಸುತ್ತಾ ಲಿಂಗದೊಳಗಾಗುತ್ತಾರೆ. ಇಂದಿಗೂ ತಂಗಡಗಿಯಲ್ಲಿ ಈ ಶರಣರ ಸ್ಮಾರಕ ಕಂಗೊಳಿಸುತ್ತಿದೆ.

ಈ ರೀತಿಯಾಗಿ ಬಸವಣ್ಣನವರ ಮಹಾಮಣಿಹದಲ್ಲಿ ಅಖಂಡ ೩೬ ವರುಷಗಳ ಕಾಲ ಪಾಲ್ಗೊಂಡು ತನ್ನ ಬಾಳನ್ನು ಮಹಾಗುರು, ಧರ್ಮ ಸಂಸ್ಥಾಪಕನ ಸೇವೆಯಲ್ಲಿ ಶ್ರೀಗಂಧದಂತೆ ತೇಯ್ದ ಶರಣ ಅಪ್ಪಣ್ಣನವರ ಹೆಸರು ಶರಣ ಧರ್ಮ-ಸಂಸ್ಕೃತಿಯಲ್ಲಿ ಚಿರಸ್ಥಾಯಿಯಾಗಿದೆ.

೭. ಅಪ್ಪಣ್ಣ - ಲಿಂಗಮ್ಮರ ಸಂದೇಶ

ಲೋಕಪೂಜ್ಯ ವಿಶ್ವಗುರು ಬಸವಣ್ಣನವರ ಸಾನಿಧ್ಯದಲ್ಲಿದ್ದು ಅರಿವಿನ ಬೆಳಗಿನ ಬಾಳನ್ನು ಬಾಳಿದ ಈ ಶರಣದಂಪತಿಗಳ ಸಂದೇಶವೆಂದರೆ ಅವರ ಜೀವನವೇ ಆಗಿದೆ. ಬಸವಾದಿ ಶರಣರು ನುಡಿದಂತೆ ನಡೆದವರು, ನಡೆದಂತೆ ನುಡಿದವರು. ನಡೆ-ನುಡಿಗಳೆರಡನ್ನೂ ಏಕವಾಗಿಸಿ ಬದುಕಿದವರು. ಶರಣರ ವಚನಗಳಲ್ಲಿ ವಿಶ್ವದ ಜನತೆಗೆ ಬೇಕಾಗುವ, ಅವರ ಬಾಳು ಬೆಳಗಿಸುವ ಸಾರ ಸರ್ವಸ್ವವೇ ಅಡಕವಾಗಿದೆ.

ಬದುಕಿನ ನಾಲ್ಕು ಸೂತ್ರಗಳು :

ಶರಣ ಅಪ್ಪಣ್ಣನವರು ಮಾನವ ಬದುಕಿನ ನೈತಿಕ ಜೀವನಕ್ಕೆ ಬೇಕಾಗುವ ನಾಲ್ಕು ಸೂತ್ರಗಳನ್ನು ತಮ್ಮ ವಚನದಲ್ಲಿ ಅರುಹಿದ್ದಾರೆ.

ಕಾಡಬೇಡ ಕಂಡವರ.
ಬೇಡ ಬೇಡ ನರರುಗಳ,
ಆಡಬೇಡ ಅನೃತವ.
ನೋಡಬೇಡ ಪರಸ್ತ್ರೀಯರ.
ಗಾಢಗಂಭೀರ ಲಿಂಗಾರೂಢವಾದ
ಬಸವಪ್ರಿಯ ಕೂಡಲ ಚೆನ್ನಬಸವಣ್ಣ.

ಮಾನವ ತನ್ನ ಬದುಕಿಗಾಗಿ ಕಂಡವರನ್ನೆಲ್ಲಾ ಕಾಡಬಾರದು. ಸತ್ಯಶುದ್ಧ ಕಾಯಕದಿಂದ ಗಳಿಸಬೇಕು. ಉಪಜೀವನ ಮಾಡಬೇಕು. ತನ್ನ ಸುಖ-ದುಃಖ ಗಳಿಗೆ ನರರನ್ನು ಬೇಡದೇ ಪರಾತ್ಪರ ಪರವಸ್ತುವಾದ ದೇವನಲ್ಲಿಯೇ ಪ್ರಾರ್ಥಿಸಬೇಕು. ತನ್ನ ಸ್ವಾರ್ಥಸಾಧನೆಗಾಗಿ, ಐಹಿಕ ಸುಖಕ್ಕಾಗಿ ಎಂದಿಗೂ ಸುಳ್ಳು, ಹುಸಿ ಆಡಬಾರದು. ಸದ್ಗೃಹಸ್ಥನಾದವನು ತನ್ನ ಸತಿಯನಲ್ಲದೇ ಮತ್ತೊಬ್ಬ ಸ್ತ್ರೀಯೆಡೆಗೆ ಕಣ್ಣು ಹಾಕಬಾರದು. ಪರಸ್ತ್ರೀಯ ಸಂಗವೆಂಬುದು ಹಾದರವೆಂದಿದ್ದಾರೆ. ಇಂತಪ್ಪ ದುರಾಚಾರಿಗಳ ಮುಖವ ನೋಡಬಾರದು ಎಂದಿದ್ದಾರೆ ಅಪ್ಪಣ್ಣನವರು.

ಇಂದಿನ ನಮ್ಮ ಬಾಳಿನ ದೋಷಗಳನ್ನು ವಿಡಂಬಿಸಿ, ದೇವರನ್ನು ಕೂಡುವ ಮಾರ್ಗವನ್ನು ಅರುಹಿದ್ದಾರೆ-

ಹಸಿವಿನಾಸೆಗೆ ಅಶವನ ಕೊಂಬರು.
ವಿಷಯಬಾಸೆಗೆ ಹುಸಿಯ ನುಡಿವರು.
ಹಸನಾಗಿ ವ್ಯಸನವ ಹೊತ್ತು,
ಭಸಿತವ ಹೂಸಿ ವಿಶ್ವವ ತಿರುಗಿದರು.
ಈ ಹುಸಿಯ ಬಿಟ್ಟು ಮಾಯೆ ಮುಸಕವ ಮಾಣ್ದಲ್ಲದೆ,
ನಮ್ಮ ಬಸವಪ್ರಿಯ ಕೂಡಲಚೆನ್ನಬಸವಣ್ಣ ಕೂಡ.

ಹಸಿವು-ಇಂದ್ರಿಯ ವಿಷಯಭೋಗಕ್ಕಾಗಿಯೆ ಮಾನವ ಭಸ್ಮ-ಲಾಂಛನ ಧರಿಸಿ ವೇಷಧಾರಿಯಾಗಿ ತಿರುಗಬಾರದು. ಹುಸಿಯನ್ನು ಬಿಟ್ಟು ಮಾಯಾಮೋಹವನ್ನು ತೆಗೆದರೆ ಪರಮಾತ್ಮನು ಕೂಡುವನು ಎನ್ನುತ್ತಾರೆ ಶರಣರು.

ಮಾನವ ತನ್ನೊಳಗಿನ ದ್ವಂದ್ವ ಬುದ್ಧಿ ಬಿಡಬೇಕೆಂದು ಹೇಳುತ್ತಾರೆ-
ವಂದನೆಗೆ ನಿಲ್ಲಬೇಡ
ನಿಂದೆಗಂಜಿ ಓಡಲಿ ಬೇಡ,
ಹಿಂದು ಮುಂದು ಆಡಲಿಬೇಡ,
ಸಂದೇಹಗೊಳಲು ಬೇಡ.
ದ್ವಂದ್ವಬುದ್ಧಿಯ ಕಳೆದು ನಿಂದಿರೆ
ಬಸವಪ್ರಿಯ ಕೂಡಲಚೆನ್ನಬಸವಣ್ಣ ತಾನೆ.

ಭಕ್ತನು ಲಿಂಗಾಂಗ ಸಾಮರಸ್ಯ ಸಾಧಿಸಬೇಕಾದರೆ ಒಳಹೊರಗೆಂಬ ದ್ವಂದ್ವ ಬುದ್ಧಿ ಕಳೆದುಕೊಳ್ಳಬೇಕು. ಯಾರಾದರೂ ಬಂದು ಸ್ತುತಿ ಮಾಡಿದರೆ ಆ ಹೊಗಳಿಕೆಗೆ ನಿಲ್ಲಬಾರದು. ಹೊಗಳಿಕೆಯೆನ್ನುವುದು ಮಾನವನ ಬದುಕಿನ ಬಹುದೊಡ್ಡ ಆತಂಕವಾಗಿದೆ. ಹೊಗಳಿಕೆಯಿಂದಾಗಿ ಮಾನವನು ಅಹಂಕಾರಕ್ಕೀಡಾಗುತ್ತಾನೆ. ಇದರಿಂದ ಆತನ ಪ್ರಗತಿಯು ಸಾಧ್ಯವಾಗುವುದಿಲ್ಲ. ಒಳ್ಳೆಯ ಕೆಲಸ - ಕಾರ್ಯಮಾಡುವಾಗ ಸಮಾಜದಲ್ಲಿ ಅನೇಕ ಜನರು ಒಂದಿಲ್ಲ ಒಂದು ರೀತಿಯಿಂದ ನಿಂದೆ ಮಾಡುತ್ತಾರೆ. ಈ ನಿಂದೆಯಿಂದಾಗಿ ಒಳ್ಳೆಯ ಕೆಲಸ ಮಾಡುವುದನ್ನು ನಿಲ್ಲಿಸಬಾರದು. ಹೇಡಿಯಂತೆ ನಿಂದೆಗಂಜಿ ಬೆನ್ನು ತೋರಿಸಿ ಓಡಿ ಹೋಗಬಾರದು. ಧೈರ್ಯದಿಂದ ಹಿಡಿದ ಕಾರ್ಯವನ್ನು ಒಮ್ಮನಸ್ಸಿನಿಂದ ಮಾಡಬೇಕು. ಯಾವುದೇ ವ್ಯಕ್ತಿ ಬಗ್ಗೆ ಹಿಂದು-ಮುಂದು ಆಡಿಕೊಳ್ಳಬಾರದು. ಇದರಿಂದ ಅನವಶ್ಯಕವಾಗಿ

ತೊಂದರೆ ಎದುರಿಸಬೇಕಾಗುತ್ತದೆ. ಮಾನವನು ಜೀವನದಲ್ಲಿ ಪ್ರತಿಯೊಂದು ಕಾರ್ಯಕ್ಕೆ, ಪ್ರತಿಯೊಂದು ವಿಷಯದಲ್ಲಿಯೂ ಸಂಧೇಹಗೊಳ್ಳಬಾರದು. ಇದರಿಂದಾಗಿ ಆತನ ಬದುಕು ಅಸಹನೀಯವಾಗಿತ್ತದೆ. ಈ ರೀತಿಯಾಗಿ ಶರಣ ಅಪ್ಪಣ್ಣನವರು ಮಾನವನ ಬಾಳುವೆಯನ್ನು ಪರಿಶುದ್ಧವಾಗಿರಲು ಅನುಸರಿಸಬೇಕಾದ ರೀತಿಯನ್ನು ಅರುಹಿದ್ದಾರೆ.

ಆಗುತಿವೆ ಉದಯ ಮಧ್ಯಾಹ್ನ ಅಸ್ತಮಾನ.
ಹೋಗುತಿವೆ ದಿನ ಮಾಸ ಸಂವತ್ಸರವು,
ಸಾವುತಿವೆ ಆಯುಷ್ಯ ಭಾಷೆ.
ಇವರೊಳು ಬೇಗದಿ ತಿಳಿದು ನೀಗಿ ನಿಷ್ಪತ್ತಿಯಾದರೆ
ಬಸವಪ್ರಿಯ ಕೂಡಲ ಚೆನ್ನಬಸವಣ್ಣ

ಸೃಷ್ಟಿಯ ನಿಯಮದಂತೆ ಕಾಲಚಕ್ರ ತಿರುಗುತ್ತದೆ. ಆಯುಷ್ಯ ಕಳೆಯುತ್ತದೆ. ಅಷ್ಟರೊಳಗಾಗಿ ಮಾನವನು ತನ್ನ ಜೀವನದ ಗುರಿಯನ್ನು ಸಾಧಿಸಬೇಕು. ಎಂದು ಶರಣ ಅಪ್ಪಣ್ಣನವರು ತಿಳಿಯಪಡಿಸುತ್ತಾರೆ.

ಮುಕ್ತಿಯಪಥವನರಿವುದಕ್ಕೆ ಯಾವ ರೀತಿ ಬಾಳಬೇಕೆಂಬ ಬಗ್ಗೆ ಶರಣೆ ಲಿಂಗಮ್ಮತಾಯಿಯವರು ಬಹು ಮಾರ್ಮಿಕವಾಗಿ ನುಡಿಯುತ್ತಾರೆ-

ಮುಕ್ತಿಯ ಪಥವನರಿವುದಕ್ಕೆ
ತತ್ತ್ವದ ಭಿತ್ತಿಯ ಕಾಣಬೇಕು.
ಚಿತ್ತ ಲಿಂಗದಲ್ಲಿ ಅಚ್ಚೊತ್ತಿದಂತಿರಬೇಕು.
ಮರ್ತ್ಯದ ಮಾನವರ ಸಂಗ ಹಿಂಗಬೇಕು.
ತಾನು ತಾನಾದ ಲಿಂಗೈಕ್ಯವನರಿವೊಡೆ
ಅಪ್ಪಣ್ಣ ಪ್ರಿಯ ಚೆನ್ನಬಸವಣ್ಣಾ.

ಲಿಂಗಾಂಗ ಸಾಮರಸ್ಯ (ಮುಕ್ತಿ) ಸಾಧಿಸಬೇಕಾದಿರೆ ಭಕ್ತನು ತತ್ತ್ವದ ಭಿತ್ತಿಯನ್ನು ಅಂದರೆ ತನ್ನ ಸಾಧನೆಯ ತತ್ತ್ವವನ್ನು ಮೊದಲಿಗೆ ಅರಿಯಬೇಕು. ನಂತರ ತನ್ನ ಚಿತ್ತವನ್ನು ಕರದಿಷ್ಟಲಿಂಗದಲ್ಲಿ ಬೆರೆಸಿರಬೇಕು. ಮರ್ತ್ಯದ ವಿಕೃತ ಭೋಗಿಗಳ (ಅಂಗಭೋಗಿಗಳ) ಸಂಗ ದೂರಮಾಡಿರಬೇಕು. ಅಂದರೆ ಮಾತ್ರ ಮುಕ್ತಿ ಸಾಧಿಸಲು ಸಾಧ್ಯ ಎನ್ನುತ್ತಾಳೆ ಲಿಂಗಮ್ಮ ತಾಯಿಯು.

ಹಾಲ ಸಾಗರದೊಳು ತೇಲಾಡುತ್ತಿದ್ದು
ಚಿಲುಮೆಯ ನೀರಿಗೆ ಹರಿದಾಡಬೇಡ
ಮೇಲುಗಿರಿ ಶಿಖರದ ಪಶ್ಚಿಮದಲಿ ತೇಲಾಡುತಿರೆ
ಬಸವಪ್ರಿಯ ಕೂಡಲಚೆನ್ನಬಸವಣ್ಣಾ.

ಶರಣರಾದ ಅಪ್ಪಣ್ಣನವರು ಈ ವಚನದಲ್ಲಿ ಲಿಂಗಸಂಸ್ಕಾರಗೊಂಡ ನಂತರ ಮತ್ತೆ ಹಲವಾರು ಮತ-ಪಂಥ-ಸಾಧನೆ- ಸಂಘ-ಸಂಸ್ಥೆಗಳಿಗೆ ಹರಿದಾಡುವವರನ್ನು ಎಚ್ಚರಿಸುತ್ತಾರೆ. ಜಗವನೊಳಕೊಂಡಿರ್ಪ ಮಹಾಚೇತನ ಇಷ್ಟಲಿಂಗವು ನಮ್ಮ ಕರಸ್ಥಲಕ್ಕೆ (ಅಂಗಕ್ಕೆ) ಬಂದಿರುವಾಗ, ಅದರ ಲಿಂಗಾಂಗಯೋಗಸಾಧನೆಯೆಂದರೆ ಹಾಲಸಾಗರದೊಳು ತೇಲಾಡುವುದೆಂದರ್ಥ. ಆನಂದವಾಗಿ ಸದಾ ಸಂತೃಪ್ತಿಯಿಂದ ಕ್ಷೀರಸಾಗರದೊಳು ಹಂಸೆಯಂತೆ ವಿಹರಿಸಬೇಕು. ಇಂತಹ ಲಿಂಗಾನಂದವನ್ನು ಬಿಟ್ಟು ನಾವು ಇನ್ನಿತರ ಯಾವು ಯಾವುದೋ ಮತ-ಪಂಥ-ಪಂಗಡ ಸಾಧನೆಗಳ ಥಳಕು ಬೆಳಕಿಗೆ ಮರುಳಾಗಿ ಹೋಗಬಾರದು. ಹೀಗೆ ಹೋಗುವುದೆಂದರೆ ಚಿಲುಮೆಯ ನೀರಿಗೆ ಹರಿದಾಡಿದಂತೆ. ಕಾರಣ ನಮ್ಮ ನಿಷ್ಠೆ ಲಿಂಗತತ್ತ್ವದಲ್ಲಿ, ಶರಣ ಸಂಸ್ಕೃತಿಯಲ್ಲಿ ಭದ್ರವಾಗಿ ನೆಲೆಯೂರಬೇಕೆಂದು ತಿಳಿಯಪಡಿಸುತ್ತಾರೆ. ಲಿಂಗಾಂಗ ಸಾಮರಸ್ಯದ ಆನಂದವೆಂದರೆ ಮೇಲುಗಿರಿ ಪರ್ವತದ ಪಶ್ಚಿಮದಿ ತೇಲಾಡುವುದೇ ಆಗಿದೆ. ಅಂದರೆ ಸಹಸ್ರಾರು ಚಕ್ರವ ದಾಟಿ, ಶಿಖಾಚಕ್ರದ ಆಚೆಯ ಪಶ್ಚಿಮ ದ್ವಾರವ ತೆರೆದು ನಿಃ ಶೂನ್ಯಲಿಂಗದ ಮಹಾಬೆಳಗಿನ ಬಯಲೊಳಗೆ ಬಯಲಾಗುವುದೇ ಆಗಿದೆ.

ಈ ರೀತಿಯಾಗಿ ಶರಣ ದಂಪತಿಗಳಾದ ಅಪ್ಪಣ್ಣ -ಲಿಂಗಮ್ಮರು ಬಸವ ಮಹಾಗುರುವಿನ, ಚಿಜ್ಞಾನಿ ಚೆನ್ನಬಸವಗುರುವಿನ ಸಾನಿಧ್ಯದಲ್ಲಿ ಕಾಯಕ-ದಾಸೋಹ-ಪ್ರಸಾದ ಜೀವನ ಬಾಳಿ, ಉರಿಯುಂಡ ಕರ್ಪುರದಂತೆ, ಜಲವ ಬೆರೆದ ಆಲಿಕಲ್ಲಿನಂತೆ, ಬೆಳಗನಪ್ಪಿದ ಜ್ಯೋತಿಯಂತೆ ಬಸವಮಹಾಜ್ಯೋತಿ-ಜಗಜ್ಯೋತಿಯಲ್ಲಿ ಲೀನವಾಗಿ, ಇಂದಿಗೂ ತಮ್ಮ ಜೀವನ ಸಾಧನೆಯ ವಚನ ಶರೀರದಿಂದ ಸಂದೇಶ ನೀಡುತ್ತಿದ್ದಾರೆ. ಅಂತಹ ದಿವ್ಯ ಶರಣರ ಸಂದೇಶವನ್ನು ಆಲಿಸಿ, ಅದರಂತೆ ನಡೆದು ನಾವೂ ನಮ್ಮ ಬಾಳನ್ನು ಬೆಳಗಿಸಿಕೊಂಡು ಬೆಳಕಿನ ಅರಮನೆಯತ್ತ ಬೆಳಕಾಗಿ ನಡೆಯುತ್ತ ಮಹಾಬಯಲಿನಲ್ಲಿ ಬಯಲು ಬೆರೆತಂತೆ ಬೆರಯಬೇಕಾಗಿದೆ.

- ಶರಣು ಶರಣಾರ್ಥಿ -

ಗ್ರಂಥ ಋಣ

೧. ಶಿವಶರಣೆಯರ ವಚನಗಳು .... ಪ್ರ. ಕ. ವಿ. ವಿ. ಧಾರವಾಡ

೨. ವಚನಶಾಸ್ತ್ರಸಾರ ... ಸಂ. ಫ. ಗು. ಹಳಕಟ್ಟಿ

೩. ವಚನರತ್ನ ಮಾಲಾ ....ಡಾ. ಎಚ್. ಸಿದ್ದಪ್ಪ ಸದಿಬ್ಯಾಗಿ(ಆಂಧ್ರ)

೪. ವಚನಸಾಹಿತ್ಯ ಸಂಗ್ರಹ ... ಸಂ. ಸಂ. ಶಿ. ಭೂಸನೂರಮಠ

೫. ಸಕಲಪುರಾತನರ ವಚನಗಳು ... ಪ್ರ. ಕ. ವಿ. ವಿ. ಧಾರವಾಡ

೬. ಸಕಲ ಪುರಾತನರ ವಚನಗಳು ...ಪ್ರ. ಕ. ವಿ. ವಿ. ಧಾರವಾಡ
ಸಂ. ೧, ೨. ೩

೭. ಅಲ್ಲಮಪ್ರಭುದೇವರ ವಚನಗಳು ...ಪ್ರ. ಕ. ವಿ. ವಿ. ಧಾರವಾಡ

೮. ಬಸವಣ್ಣನವರ ವಚನಗಳು ...ಪ್ರ. ಕ. ವಿ. ವಿ. ಧಾರವಾಡ

೯. ಶರಣರು ಕಂಡಬಸವಣ್ಣ .... ಸಿದ್ಧಯ್ಯ ಪುರಾಣಿಕರು

೧೦. ಶರಣ ಚರಿತಾಮೃತ ... ಸಂ. ಹ. ದೇ. ಚಂದನಗೌಡರು

೧೧. ಬಸವೇಶ್ವರರ ಸಮಕಾಲೀನರು ... ಬಸವ ಸಮಿತಿ

೧೨. ಶೂನ್ಯ ಸಂಪಾದನೆ ... ಸಂ. ಸಂ. ಶಿ. ಭೂಸನೂರಮಠ

೧೩. ಶೂನ್ಯ ಸಂಪಾದನೆ ... ಪ್ರ. ಕ. ವಿ. ವಿ. ಪ್ರಕಟನೆ ಧಾರವಾಡ

ಪ್ರೊ. ಸಿದ್ಧಣ್ಣ ಲಂಗೋಟಿ ಅವರ ಕೃತಿಗಳು

೧.	ಅಲ್ಲಮಪ್ರಭುದೇವರ ಜೀವನ ಸಂದೇಶ	೧೯೭೯
೨.	ಅಕ್ಕಮಹಾದೇವಿಯ ಜೀವನ ದರ್ಶನ	೧೯೭೯
೩.	ಲಿಂಗಾಯತ ಧರ್ಮ ಸಮಾಜ ತತ್ವಜ್ಞಾನ	೧೯೭೯
೪.	ಲಿಂಗಾಯತ ಧರ್ಮದ ಮೂಲತತ್ವಗಳು	೧೯೭೯
೫.	ಶಿವಯೋಗಿಣಿ ಅಕ್ಕನಾಗಮ್ಮ (ಸಂಪಾದಿತ)	೧೯೭೯
೬.	ಗಣನಾಯಕ ಮಡಿವಾಳ ಮಾಚಿದೇವರು	೧೯೭೯
೭.	ಮರಣವೇ ಮಹಾನವಮಿ	೧೯೮೦
೮.	ಷಟಸ್ಥಲ ಚಕ್ರವರ್ತಿ ಚೆನ್ನಬಸವಣ್ಣನವರು	೧೯೭೯
೯.	ಬಸವಬೆಳಗು (ಸಂಪಾದಿತ)	೧೯೮೦
೧೦.	ಪ್ರಭುವಿನ ವಾಣಿಯಲ್ಲಿ ಬಸವಣ್ಣನವರು	೧೯೮೦
೧೧.	ವಚನ ಸಂಶೋಧನ ಪಿತಾಮಹ ಫ.ಗು.ಹಳಕಟ್ಟಿಯವರು	೧೯೮೦
೧೨.	ಬಸವಣ್ಣನವರ ಬಯ್ಗುಳಗಳು	೧೯೮೧
೧೩.	ಅಕ್ಕ ಕಂಡ ಅಣ್ಣ	೧೯೮೧
೧೪.	ಅಂಬಿಗರ ಚೌಡಯ್ಯ	೧೯೮೧
೧೫.	ಶರಣರ ಶಿವರಾತ್ರಿ	೧೯೮೨
೧೬.	ಸ್ವಾಮಿ ವಿವೇಕಾನಂದರ ದೇಶಭಕ್ತಿ ಕಲ್ಪನೆ	೧೯೮೨
೧೭.	ಬಸವಾದಿ ಶರಣರ ವಚನಾಮೃತ (ಸಂಪಾದಿತ)	೧೯೮೩
೧೮.	ವಿಭೂತಿ ನಿರ್ಮಾಣ ವಿಧಾನ	೧೯೮೪
೧೯.	ಬಾಚಿಕಾಯಕದ ಬಸವಪ್ಪ-ಕಾಳವ್ವೆ	೧೯೮೪
೨೦.	ಶರಣರು ಹಾಗೂ ಮೂಢನಂಬಿಕೆಗಳು	೧೯೮೪
೨೧.	ಇಷ್ಟಲಿಂಗ ನಿರ್ಮಾಣ ವಿಧಾನ	೧೯೮೫
೨೨.	ಹಡಪದ ಅಪ್ಪಣ್ಣ -ಲಿಂಗಮ್ಮ	೧೯೮೫
೨೩.	ಶ್ರೀ ಗುರುಸಿದ್ದಪ್ರಭುದೇವರು	೧೯೮೫
೨೪.	ಇಷ್ಟಲಿಂಗ ಪೂಜಾವಿಧಾನ	೧೯೮೫
೨೫.	ಫಕ್ಕೀರಪ್ಪ ಮುರಗೋಡ ಮಾಸ್ತರು	೧೯೮೫
೨೬.	ಶಿವಶರಣರ ಕ್ರಾಂತಿ (ಕ.ವಿ.ವಿ.ಪ್ರಕಟಣೆ)	೧೯೮೬
೨೭.	ವಿಶ್ವಗುರು ಬಸವಣ್ಣನವರ ವಚನಗಳು(ಸಂಪಾದಿತ)	೧೯೮೬
೨೮.	ಕರ್ನಾಟಕದ ಗಾಂಧಿ ಹರ್ಡೇಕರ ಮಂಜಪ್ಪನವರು	೧೯೮೬

೨೯. ಯುಗ ಪುರುಷ ಚೆನ್ನಬಸವ ಪಟ್ಟಾಧ್ಯಕ್ಷರು ೧೯೮೭
೩೦. ಬಸವದರ್ಶನ (ಸಂಪಾದಿತ) ೧೯೮೭
೩೧. ವಚನಸಾಹಿತ್ಯ : ತಾತ್ವಿಕ ವಿವೇಚನೆ ೧೯೮೭
೩೨. ವಿಶ್ವವಿಖ್ಯಾತ ತತ್ವಜ್ಞಾನಿ ಡಾ. ರಾಧಾಕೃಷ್ಣನ್‌ರು ೧೯೮೮
೩೩. ಧರ್ಮಗುರು ಜಗಜ್ಯೋತಿ ಬಸವಣ್ಣನವರು ೧೯೮೮
೩೪. ಅಲ್ಲಮ ಪ್ರಭುದೇವರ ವಚನಗಳು (ಸಂಪಾದಿತ) ೧೯೮೯
೩೫. ಬಸವಣ್ಣನವರು ಮತ್ತು ಜಾಗತಿಕ ಶಾಂತಿ ೧೯೮೯
೩೬. ಬಸವಭಕ್ತ ಘನಮಠ ಶಿವಯೋಗಿಗಳು ೧೯೮೯
೩೭. ಚೆನ್ನಬಸವಣ್ಣನವರ ವಚನಗಳು(ಸಂಪಾದಿತ) ೧೯೮೯
೩೮. ಬಸವಭಕ್ತ ಅಥಣಿ ಶಿವಯೋಗಿಗಳು ೧೯೮೯
೩೯. ದೇವದಾಸಿ ಪದ್ಧತಿ ವಿಮೋಚನೆ ಹಾಗೂ ಬಸವಣ್ಣನವರು ೧೯೮೯
೪೦. ಸಿದ್ಧರಾಮೇಶ್ವರ ವಚನಗಳು (ಸಂಪಾದಿತ) ೧೯೯೦
೪೧. ಡಾ. ಜಚನಿ ಅಂದು-ಇಂದು ಒಂದು ವಿಮರ್ಶೆ ೧೯೯೦
೪೨. ಶ್ರೀಗುರುಬಸವಮಂಟಪ ನಡೆದು ಬಂದ ದಾರಿ ೧೯೯೧
೪೩. ಮುರಗೋಡ ಮಹಾಂತಜ್ಜನವರು ೧೯೯೨
೪೪. ಬಸವಕಲ್ಯಾಣ ದರ್ಶನ ೧೯೯೪
೪೫. ಮಹಾಚೈತ್ರ (ವಿಮರ್ಶೆ) ೧೯೯೪
೪೬. ಬಸವಾದಿ ಶರಣರ ವಚನಜ್ಯೋತಿ (ಸಂಪಾದಿತ) ೧೯೯೬
೪೭. ಬಸವ ವಚನ ದೀಪ್ತಿ ಒಂದು ವಿಮರ್ಶೆ ೧೯೯೬
೪೮. ಕುಮಾರ ಕಕ್ಕಯ್ಯನ ವಚನಗಳು (ಸಂಪಾದಿತ) ೧೯೯೭
೪೯. ಕುಮಾರ ಕಕ್ಕಯ್ಯ ಪೋಳ ೧೯೯೮
೫೦. ಬೀಳೂರು ಗುರುಬಸವ ಮಹಾಸ್ವಾಮಿಗಳು ೧೯೯೮
೫೧. ಜೇಡರ ದಾಸಿಮಯ್ಯ-ದುಗ್ಗಳೆಯರ ವಚನಗಳು (ಸಂ) ೧೯೯೮
೫೨. ಬಸವಾದಿ ಶರಣರ ಶಿವಯೋಗದ ವಚನಗಳು (ಸಂ) ೧೯೯೯
೫೩. ಜಗಜ್ಯೋತಿ ಬಸವೇಶ್ವರ ಅಂಕಿತದ ಸಿಲಂ ವಚನಗಳು ೨೦೦೦
೫೪. ಬಂಥನಾಳ ಸಂಗನಬಸವ ಶಿವಯೋಗಿಗಳು ೨೦೦೦
೫೫. ಕಲ್ಯಾಣ ನಾಡಿನ ಶರಣಪರಿಷತ್ತು ನಡೆದು ಬಂದ ದಾರಿ ೨೦೦೧
೫೬. ಶರಣ ಕುಮಾರ ಕಕ್ಕಯ್ಯ ೨೦೦೧
೫೭. ಬಸವ ಬೆಳೆ ೨೦೦೨
೫೮. ಶಿವಯೋಗಿ ವೇಮನರ ವಚನಗಳು (ಸಂ) ೨೦೦೩

೫೯. ಕನ್ನಡ ಕವಿ-ಕಾವ್ಯ-ಪರಂಪರೆ (ಸಂ) ೨೦೦೪

೬೦. ದರ್ಪಣ-ಸ್ಮರಣಸಂಚಿಕೆ (ಸಂ) ೨೦೦೪

೬೧. ಲಿಂಗಾಯತ ಧರ್ಮ-ದರ್ಶನ ೨೦೦೫

೬೨. ಕಾಯಕ ಸಂಜೀವನಿ ಅಭಿನಂದನ ಗ್ರಂಥ (ಸಂ) ೨೦೦೬

೬೩. ಬಸವಣ್ಣನವರು ೨೦೦೭

೬೪. ನೆನಹು (ಸ್ಮರಣ ಗ್ರಂಥ) ೨೦೦೮

೬೫. ಬಸವಭೂಮಿಯಿಂದ ಆಂಗ್ಲನಾಡಿಗೆ (ಅಚ್ಚಿನಲ್ಲಿ)

೬೬. ಜಾಗತಿಕ ಸೌಹಾರ್ದತಾ ಯಾತ್ರೆ (ಅಚ್ಚಿನಲ್ಲಿ)

ಬಸವ ಬೆಳಗು ಪತ್ರಿಕೆ

ಸಂಪಾದಕ ಮಂಡಲಿ ಮತ್ತು ಮಾರ್ಗದರ್ಶಕರು :

ಬಸವಜ್ಯೋತಿ, ಮಹಾಂತಜೋಳಿಗೆಯ ಶಿವಶಿಲ್ಪಿ ಹಿರಿಯ ಶ್ರೀಗಳಾದ

ಪೂಜ್ಯ ಶ್ರೀ ಮನಿಪ್ರ. ಮಹಾಂತ ಶಿವಯೋಗಿಗಳು

ಸಂಪಾದಕ ಸಲಹಾಸಮಿತಿಯ ಸಂಚಾಲಕರು :

ಪೂಜ್ಯ ಶ್ರೀ ಮನಿಪ್ರ ಗುರುಮಹಾಂತಸ್ವಾಮಿಗಳವರು

ಚಿತ್ತರಗಿ ಶ್ರೀ ವಿಜಯಮಹಾಂತೇಶ್ವರ ಸಂಸ್ಥಾನಮಠ, ಇಳಕಲ್ಲ

ಗೌ|| ಸಂಪಾದಕರು :

ಪ್ರೊ. ಸಿದ್ಧಣ್ಣ ಲಂಗೋಟಿ (ಚಾಂದಕವಠೆ)

ಎಂ.ಎ. (ತತ್ವಜ್ಞಾನ), ಎಲ್‌ಎಲ್.ಬಿ. (ಸ್ಪೆಶಲ್) ಎಂ.ಎ.(ಕನ್ನಡ),ಎಂ.ಎ.(ಹಿಂದಿ),ಸಿ.ವಾಯ್.ಇಡಿ (ಯೋಗ)

ಬಸವಬೆಳಗು, ಮಹಾಂತೇಶ ನಗರ, ರಾಮದುರ್ಗ ಜಿ. ಬೆಳಗಾವಿ

೧.	ಹಿತಚಿಂತಕರು	-	೫೦೦೦ ರೂ.
೨.	ಪೋಷಕರು	-	೨೦೦೦ ರೂ.
೩.	ಆಜೀವ ಚಂದಾ (ಹತ್ತು ವರ್ಷಕ್ಕೆ)	-	೫೦೦ ರೂ.

ಚಂದಾ ಹಣ ಕಳಿಸುವ ವಿಳಾಸ :

ಕಾರ್ಯದರ್ಶಿ, ಬಸವಬೆಳಗು ತ್ರೈಮಾಸಿಕ ಪತ್ರಿಕೆ

ಚಿತ್ತರಗಿ ಸಂಸ್ಥಾನಮಠ ಇಳಕಲ್ಲ - ೫೮೭೧೨೫ ಜಿ. ಬಾಗಲಕೋಟೆ

ಪೂಜ್ಯರ ಪರಿಚಯ

ಬಸವತತ್ವನಿಷ್ಠ ಶರಣಜೀವಿಗಳೂ, ಸದುವಿನಯ ಸದಾಚಾರ ಸಂಪನ್ನರೂ ಆಗಿರುವ ಪೂಜ್ಯ ಶ್ರೀ ಬಸವಪ್ರಿಯ ಅಪ್ಪಣ್ಣ ಸ್ವಾಮಿಗಳು ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲೂಕಿನ ಲಿಂಗದಳ್ಳಿ ಗ್ರಾಮದಲ್ಲಿ ಶರಣದಂಪತಿಗಳಾದ ಶ್ರಿ ಮಲ್ಲೇಶಪ್ಪ ಹಾಗೂ ಶ್ರೀಮತಿವೀರಮ್ಮನವರ ಚಿದ್‌ಗರ್ಭದಲ್ಲಿ ಜೂನ್೧, ೧೯೭೭ ರಂದು ಜನಿಸಿದರು. ಪೂಜ್ಯ ಗುಡದೂರ ದೊಡ್ಡಬಸವಾರ್ಯ ಅಜ್ಜನವರಿಂದ ಅನುಗ್ರಹ ಪಡೆದ ದಂಪತಿಗಳು, ತಮಗೆ ಜನಿಸಿದ ಶಿಶುವಿಗೆ "ಮೌನೇಶ" ಎಂದು ನಾಮಕರಣ ಮಾಡಿದರು.

ಚಿ.ಮೌನೇಶನು ರಾಯಚೂರ ಜಿಲ್ಲೆಯ ಹಿರೇಮನ್ನಾಪುರದಲ್ಲಿ ಪ್ರಾಥಮಿಕ ಮಾಧ್ಯಮಿಕ ಶಿಕ್ಷಣ ಬಸವನ ಬಾಗೇವಾಡಿ ತಾಲೂಕಿನ ಗೊಳಸಂಗಿಯಲ್ಲಿ ಪಿಯುಸಿ ಶಿಕ್ಷಣ ನರೇಗಲ್ಲ ಅನ್ನದಾನೀಶ್ವರ ಕಾಲೇಜಿನಲ್ಲಿ ಬಿ.ಎ. ಪದವಿ ಶಿಕ್ಷಣ ಪಡೆದು, ಚಿತ್ರದುರ್ಗ ಶ್ರೀ ಮುರುಘರಾಜೇಂದ್ರ ಬೃಹನ್ಮಠದಲ್ಲಿ ೨೦೦೦ ರಿಂದ ೨೦೦೩ರ ವರೆಗೆ ಬಸವತತ್ವ ಮಹಾವಿದ್ಯಾಲಯದ 'ಬಸವತತ್ವ'ದ ಉನ್ನತ ಶಿಕ್ಷಣ ಪಡೆದು ಸಂಗೀತ ವಿದ್ವತ್‌ನ್ನು ಪಾಸಾಗಿ ಪೂಜ್ಯ ಶ್ರೀ ಶಿವಮೂರ್ತಿ ಮುರುಘರಾಜೇಂದ್ರ ಶರಣರಿಂದ ಜಂಗಮದೀಕ್ಷೆ ಪಡೆದರು.

ಪರಮ ಪೂಜ್ಯ ಶ್ರೀ ಚಿತ್ರದುರ್ಗದ ಶಿವಮೂರ್ತಿ ಮುರಘರಾಜೇಂದ್ರ ಶರಣರ, ಪೂಜ್ಯ ಶ್ರಿ ಜಗದ್ಗುರು ತೋಂಟದ ಸಿದ್ಧಲಿಂಗ ಮಹಾಸ್ವಾಮಿಗಳವರ ಹಾಗೂ ಪೂಜ್ಯ ಶ್ರೀ ಮಹಾಂತ ಶಿವಯೋಗಿಗಳು ಚಿತ್ತರಗಿ ಇಳಕಲ್ಲ ಇವರ ಸದ್ಇಚ್ಛೆಯಂತೆ ಧರ್ಮಕ್ಷೇತ್ರ ಕೂಡಲ ಸಂಗಮ ನಾಡಿಗೆ ಆಗಮಿಸಿದರು.

ಅನಂತರ ಬಸವ ಜನ್ಮ ಭೂಮಿಯಾದ ವಿಜಾಪುರ ಜಿಲ್ಲೆಯ ಮುದ್ದೇಬಿಹಾಳ ತಾಲೂಕಿನ ತಂಗಡಗಿ ಸುಕ್ಷೇತ್ರಕ್ಕೆ ಆಗಮಿಸಿ,ಅಲ್ಲಿ ಶರಣ ಅಪ್ಪಣ್ಣ ದೇವರ ಮಹಾ ಸಂಸ್ಥಾನಮಠವನ್ನು ಸ್ಥಾಪಿಸಿದರು. ಅಲ್ಲಿಂದಲೇ ಕಳೆದ ನಾಲ್ಕಾರು ವರ್ಷಗಳಿಂದ ಕರ್ನಾಟಕದಾದ್ಯಂತ ಸಂಚರಿಸಿ ಬಸವ ತತ್ವ ಪ್ರಸಾರ ಗೈಯುತ್ತ ಸಮಾಜ ಸಂಘಟನೆ ಶರಣ ಸಂಸ್ಕೃತಿಪುನರುತ್ಥಾನಕ್ಕೆ ಶ್ರಮಿಸುತ್ತಿದ್ದಾರೆ.

– ಪ್ರೊ. ಸಿದ್ದಣ್ಣ ಲಂಗೋಟಿ
(ಚಾಂದಕವಠೆ)